ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 24

ಜೂನ್ 15, 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-



ಢೋಂಗಿ ಭರವಸೆಗಳು



ಬೆಲೆ ಏರಿಕೆಯ ಅಡಕತ್ತರಿಯಲ್ಲಿ ಜನತೆ

ಲಿಂಗಾಯತರ ಮತ ಹಿಂದುತ್ವಕ್ಕಲ್ಲ

ರಸಗೊಬ್ಬರ ಅಭಾವ ಸಿಡಿದ ಆಕ್ರೋಶ

ಬೌದ್ಧಿಕ ಸಂಪತ್ತಿನ ಹಕ್ಕು ಮತ್ತು ಬಹುರಾಷ್ಟ್ರೀಯ ತೋಳಗಳು

ವಾರದ ಸಂದರ್ಶನ

ರಾಜ್ಯದಲ್ಲಿ ಮುಂಗಾರು ಮಳೆ, ಎಲ್ಲೆಲ್ಲೂ ಬಿತ್ತನೆಯ ಬೀಜ, ಗೊಬ್ಬರಕ್ಕೆ ಹಾಹಾಕಾರ. ಬೀಜ, ಗೊಬ್ಬರ ಕೊಡಿ ಎಂದು ಕೇಳಿದ ರೈತರ ಬೆನ್ನಿಗೆ ಬಿದ್ದಿದೆ ಯಡಿಯೂರಪ್ಪನವರ ಸರ್ಕಾರದ ಲಾಠಿ ಏಟು. ಈ ಸಮಸ್ಯೆಯ ಒಳ-ಹೊರಗು ಏನು?

ರಸಗೊಬ್ಬರ ಅಭಾವ : ಕೇಂದ್ರ - ರಾಜ್ಯ ಸರ್ಕಾರಗಳ ವೈಫಲ್ಯ

ಜಿ.ಸಿ. ಬಯ್ಯಾರೆಡ್ಡಿ
ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ

ಜನಶಕ್ತಿ: ರಾಜ್ಯದಲ್ಲಿ ರಸಗೊಬ್ಬರದ ತೀವ್ರ ಕೊರತೆ ಕಂಡು ಬರುತ್ತಿದೆಯಲ್ಲಾ ಏಕೆ?

ಜಿ.ಸಿ.ಬಿ.: ಇತ್ತೀಚೆಗೆ ಮುಂಗಾರು ಬಂದಾಗ ಸಾಮಾನ್ಯವಾಗಿ ಸಮಸ್ಯೆಗಳು ತಲೆದೋರುತ್ತಿವೆ. ಈ ವರ್ಷ ವಿಶೇಷ ಏನೆಂದರೆ ಸಮಸ್ಯೆ ತೀವ್ರಗೊಂಡಿದೆ. ಇದಕ್ಕೆ ಕಾರಣಗಳು ಎರಡು. ಒಂದು ಧೋರ್ಙಣೆಗೆ- ಸರ್ಕಾರದ ನೀತಿಗಳಿಗೆ ಸಂಬಂಧಿಸಿದ್ದು, ಮತ್ತೊಂದು ಆಡಳಿತಾತ್ಮಕ ವೈಫಲ್ಯಗಳು.

ಮೊದಲನೆಯದು, ರಸಗೊಬ್ಬರದ ಲಭ್ಯತೆಯ ಕೊರತೆ ಮುಖ್ಯವಾಗಿ ಬಂದಿರುವುದು ಎನ್.ಡಿ.ಎ. ಯಿಂದ ಹಿಡಿದು ಯುಪಿಎ ಸರ್ಕಾರದವರೆಗೆ ಸಾರ್ವಜನಿಕ ವಲಯದ ರಸಗೊಬ್ಬರದ ಕಾರ್ಖಾನೆ ಮುಚ್ಚಿದ್ದಾರೆ. ಖಾಸಗೀಕರಿಸಿದ್ದಾರೆ. ಉದಾ: ಮಂಗಳೂರು ರಸಗೊಬ್ಬರ ಕಾರ್ಖಾನೆ (ಎಂ.ಸಿ.ಎಫ್) ಮೊದಲು ಸಾರ್ವಜನಿಕ ಇದ್ದದ್ದು. ಈಗ ಖಾಸಗೀಕರಣಗೊಂಡಿದೆ.

ಯೂರಿಯಾ ಡಿಎಪಿ, ಈ ರಸಗೊಬ್ಬರಗಳನ್ನು ವಿದೇಶಗಳಿಂದ ದುಬಾರಿ ಬೆಲೆ ಕೊಟ್ಟು ಆಮದು ಮಾಡಿಕೊಳ್ಳಲಾಗುತ್ತಿದೆ. ಸಕಾಲಿಕವಾಗಿ ಸರ್ಕಾರವು ರಸಗೊಬ್ಬರವನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡದಿರುವುದರಿಂದಾಗಿ ಮುಂಗಾರಿನ ಸಮಯಕ್ಕೆ ಸಕಾಲಿಕವಾಗಿ ಗೊಬ್ಬರ ಸರಬರಾಜಿಗಿಲ್ಲ. ಅಲ್ಲದೆ ವಿಪರೀತ ದುಬಾರಿ ಕೂಡ ಆಗಿದೆ.


ರಸಗೊಬ್ಬರ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಗಳು

	2003-04	2007- 08
ಯೂರಿಯಾ	110 ಡಾಲರ್	410 ಡಾಲರ್
ಡಿಎಪಿ	183 ಡಾಲರ್	922 ಡಾಲರ್
ಎಂಓಪಿ	120 ಡಾಲರ್	450 ಡಾಲರ್

ಒಂದೆಡೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಸಗೊಬ್ಬರದ ಬೆಲೆ ಏರುತ್ತಿದ್ದರೆ ಇನ್ನೊಂದೆಡೆ ರಸಗೊಬ್ಬರದ ಸಬ್ಸಿಡಿ ಕಡಿತ ಮಾಡಲಾಗುತ್ತಿದೆ. ಸಹಾಯಧನ ಕಡಿತ ಆಗುತ್ತಿರುವು ದರಿಂದಲೂ ಸಮಸ್ಯೆ ಬಿಗಡಾಯಿಸಿದೆ. ಜಾಗತೀಕರಣ ನೀತಿಗಳು ಸರ್ಕಾರವು ಸಹಾಯಧನವನ್ನು ಕಡಿತಗೊಳಿಸಲು ಕಾರಣವಾಗಿವೆ.



ಕೋಲಾರದ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರಾಂತ ರೈತ ಸಂಘದ ಪ್ರತಿಭಟನೆ



ಜನಶಕ್ತಿ : ಮತ್ತೊಂದು ಕಾರಣವೇನು?

ಜಿ.ಸಿ.ಬಿ: ರಾಜ್ಯ ಸರ್ಕಾರ, ಕೃಷಿ ವಿಸ್ತೀರ್ಣ, ಬೆಳೆ ಪದ್ಧತಿ, ಮುಂಗಾರು ಮಳೆ ಇತ್ಯಾದಿ ಅಂದಾಜು ಮಾಡಿ ಯೋಜಿತವಾಗಿ ರಸಗೊಬ್ಬರ ತರಿಸಿಕೊಂಡು ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಲಭ್ಯವಾಗುವಂತೆ ದಾಸ್ತಾನು ಮಾಡಲು ವ್ಯವಸ್ಥೆ ಮಾಡಬೇಕಿತ್ತು. ಅದರಲ್ಲಿ ಗಂಭೀರ ವೈಫಲ್ಯ ಆಗಿರುವುದರಿಂದ ತೀರಾ ತೊಂದರೆಯಾಗಿದೆ. ಕೆಲವಡೆ ಇಲ್ಲವೇ ಇಲ್ಲ. ಕೆಲವೆಡೆ ಗಂಭೀರ ಕೊರತೆಯಾಗಿದೆ. ಇದರಿಂದ ಹಾಹಾಕಾರ ಎದ್ದಿದೆ.

ಮತ್ತೊಂದು, ಕೃಷಿ ಇಲಾಖೆ ಅಧಿಕಾರಿಗಳು ಹಂಚಿಕೆ ವ್ಯವಸ್ಥೆಯ ಪ್ರಮುಖ ಹೊಣೆಗಾರರು. ಅವರು ರಸಗೊಬ್ಬರ ವ್ಯಾಪಾರಿಗಳೊಂದಿಗೆ ಶಾಮೀಲಾಗಿ ಲಂಚ ಪಡೆದು ವ್ಯಾಪಾರಿಗಳು ರಸಗೊಬ್ಬರದ ಅಕ್ರಮ ದಾಸ್ತಾನು ಮಾಡಲು ಅವಕಾಶ ಮಾಡಿಕೊಡುತ್ತಾರೆ. ಕೃತಕ ಅಭಾವ ಸೃಷ್ಟಿ ಮಾಡಿ ವ್ಯಾಪಾರಿಗಳು ಹೆಚ್ಚು ಲಾಭ ಮಾಡಲು ದುಬಾರಿ ಬೆಲೆಗೆ ಮಾರಲು ಸಂಚು ಮಾಡುತ್ತಾರೆ. ಮಾರಾಟ ಮಳಿಗೆಯ ಮುಂದೆ ರಸಗೊಬ್ಬರ ಗರಿಷ್ಟ ಬೆಲೆ ಇತ್ಯಾದಿ ಪ್ರಕಟಿಸಬೇಕು ಪ್ರಕಟಿಸುವುದಿಲ್ಲ ಅಧಿಕಾರಿಗಳು ಅದನ್ನು ಕೇಳುವುದಿಲ್ಲ. ವ್ಯಾಪಾರಿಗಳು ವಿಪರೀತ ಬೆಲೆಗೆ ಮಾರುತ್ತಾರೆ. ಇದರಿಂದಾಗಿಯೂ ಆಹಾಕಾರ ವೇಳುತ್ತದೆ.

ರಾಜ್ಯದಲ್ಲಿ ಈ ಹಿಂದಿನ ಸರ್ಕಾರವು ರಸಗೊಬ್ಬರಕ್ಕೆ ಸಣ್ಣ ಅತಿ ಸಣ್ಣ ರೈತರಿಗೆ ಶೇ.75 ರಷ್ಟು ಸಹಾಯಧನ ನೀಡುತ್ತಿತ್ತು. ಈ ವರ್ಷ ಸಹಾಯಧನವನ್ನು ಶೇ.65ರ ಪ್ರಮಾಣಕ್ಕೆ ಇದೀಗ ಅಸ್ತಿತ್ವಕ್ಕೆ ಬಂದ ಯಡಿಯೂರಪ್ಪನವರ ಸರ್ಕಾರ ಇಳಿಸಿದೆ. ಈ ಸಹಾಯಧನ ಪಡೆಯಲು ಇದ್ದ ಭೂ ಮಿತಿಯ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಸಣ್ಣ, ಅತಿ ಸಣ್ಣ ರೈತರಿಗೆ ಸಹಾಯಧನ ಕಡಿತ ಮಾಡಿರುವ ಕ್ರಮ ರೈತ ವಿರೋಧಿಯಾಗಿದೆ.

ಈ ಎಲ್ಲಾ ಸಮಸ್ಯೆಗಳ ವಿರುದ್ಧ ರಾಜ್ಯ ವ್ಯಾಪಿ ಪ್ರತಿಭಟನೆಗಳು ನಡೆಯುತ್ತಿವೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕೋಲಾರದ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಪ್ರತಿಭಟನೆ ನಡೆದಿದೆ. ಜೂನ್ 10 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಯುತ್ತಿದೆ. ರಾಜ್ಯ ರೈತ ಸಂಘದಿಂದ ಹಾಸನ, ದಾವಣಗೆರೆ ಮುಂತಾದೆಡೆ ಪ್ರತಿಭಟನೆಗಳು ನಡೆಯುತ್ತಿವೆ.

ಜನಶಕ್ತಿ: ಸಮಸ್ಯೆಗೆ ಪರಿಹಾರವೇನು?

ಜಿ.ಸಿ.ಬಿ: ಕೇಂದ್ರ ರಾಜ್ಯ ಸರ್ಕಾರಗಳು ಅಗತ್ಯ ಪ್ರಮಾಣದ ರಸಗೊಬ್ಬರದ ಸಕಾಲಿಕ ಪೂರೈಕೆ ಮಾಡಲು ವ್ಯವಸ್ಥೆ ಮಾಡಬೇಕು. ಸಹಾಯಧನ ಕಡಿತ ನೀತಿ ಕೈ ಬಿಡಬೇಕು. ಅಕ್ರಮ ದಾಸ್ತಾನು, ಅಕ್ರಮ ಬೆಲೆಯ ಮಾರಾಟ ಇತ್ಯಾದಿ ತಪ್ಪಿಸಬೇಕು.

- ಸಂದರ್ಶಕ: ಆರ್. ರಾಮಕೃಷ್ಣ

ಬೆಲೆ ಏರಿಕೆ : ಮಂಗ್ಳೂರು ಜನ ಏನಂತಾರೆ?

ಸಾಮಾಜಿಕ ಚಳುವಳಿಯಲ್ಲಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಅನಿಲ್ ಡಿ'ಸೋಜರ ಮಾತು ಹೀಗೆ ಕೇಳಿ.

ನನ್ನ ವಾಸ ಬಾಡಿಗೆ ಮನೆಯಲ್ಲಿ ಇರುವುದು. ಹೆಂಡತಿ ಒಂದು ಮಗು ಮಾತ್ರ. ಇಲೆಕ್ಟ್ರಿಶಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಕೆಲಸದ ಮಧ್ಯೆ ಬಿಡುವು ಮಾಡಿಕೊಂಡು ವಾರದಲ್ಲಿ ಒಂದೆರಡು ದಿವಸ ರಜೆ ಹಾಕಿ, ಸಾಮಾಜಿಕ, ಸಂಘಟನಾ ಚಟುವಟಿಕೆ, ಸರ್ಕಾರಿ ಇಲಾಖೆಯಲ್ಲಿ ಜನರ ಕೆಲಸ ಮಾಡುತ್ತಿದ್ದೆ. ವಿಪರೀತ ಬೆಲೆ ಏರಿ ನನ್ನ ಸಣ್ಣ ಕುಟುಂಬವನ್ನು ಕಂಗಾಲು ಮಾಡಿದೆ. ನನ್ನ ದುಡಿಮೆ ಏತಕ್ಕೂ ಸಾಲುತ್ತಿಲ್ಲ. ಈಗ ನನ್ನ ಸಾಮಾಜಿಕ ಚಟುವಟಿಕೆಗಳನ್ನು ಬದಿಗೊತ್ತಿ ಪೂರ್ಣ ಪ್ರಮಾಣದಲ್ಲಿ ದುಡಿಮೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಒಟ್ಟು ನನಗೆ ವಿಷಾದವೆನಿಸುತ್ತಿದೆ. ಮನಸ್ಸು ಹತಾಶವಾಗುತ್ತಿದೆ. ಅದರ ಜೊತೆಗೆ ಬೆಲೆಯೇರಿಕೆಯ ತಮ್ಮ ಕಷ್ಟಗಳನ್ನು ನನ್ನೊಂದಿಗೆ ಹೇಳಿಕೊಳ್ಳುವ ನನ್ನ ಊರಿನ ಜನರು ಏನು ಮಾಡಲು ತೋಚುತ್ತಿಲ್ಲ.

* * *

ಮಂಗಳೂರು ನಗರದ ಹೊರವಲಯದಲ್ಲಿ ವಾಸಿಸುವ ಆಸಿಯಾ ಬಾನುರವರ ಅನುಭವ ಕೇಳಿ, ನಾನು ಬೀಡಿ ಕಟ್ಟುತ್ತೇನೆ. ರಿಕ್ಷಾ ಡ್ರೈವರ್ ಆಗಿ ದುಡಿಯುತ್ತಿದ್ದ ಗಂಡ ಕಳೆದ ನಾಲ್ಕು ವರ್ಷದಿಂದ ಸೌದಿ ಅರೇಬಿಯಾದಲ್ಲಿ ಇದ್ದಾರೆ. ಆದರೆ ನಮ್ಮ ಕಷ್ಟ ಮುಗಿಯುವ ಹಂತದ್ದಲ್ಲ. ಅಲ್ಲಿಯೂ ಸಂಪಾದನೆ ಅಷ್ಟಕ್ಕಷ್ಟೆ. ಮೂರು ಮಕ್ಕಳಿದ್ದಾರೆ. ಮಕ್ಕಳ ಭವಿಷ್ಯವಾದರೂ ಉತ್ತಮವಾಗಲಿ ಎಂದು ಆಂಗ್ಲ ಮಾಧ್ಯಮ ಶಾಲೆಗೆ ಹಾಕಿದ್ದೆವು. ಈಗ ಬೆಲೆಯೇರಿಕೆ ನಮ್ಮನ್ನು ಕಂಗಾಲು ಮಾಡಿದೆ. ಮನೆ ಬಾಡಿಗೆಯೂ ವಿಪರೀತವಾಗಿ ಏರಿದೆ. ಕಡಿಮೆ ಬಾಡಿಗೆಯ ಸಣ್ಣ ಮನೆಯನ್ನು ಹುಡುಕುತ್ತಿದ್ದೇವೆ, ಸಿಗುತ್ತಿಲ್ಲ. ಮಕ್ಕಳಿಗೆ ಹಾಲು, ಹಣ್ಣು ಕೊಡುವುದನ್ನು ನಿಲ್ಲಿಸಿದ್ದೇನೆ. ಮಾಂಸ ತರುವುದನ್ನು ನಿಲ್ಲಿಸಿದ್ದೇನೆ. ಅದಕ್ಕಿಂತ ಹೆಚ್ಚಾಗಿ ಆಂಗ್ಲ ಮಾಧ್ಯಮ ಶಾಲೆಯಿಂದ ಬಿಡಿಸಿ ಕನ್ನಡ ಮಾಧ್ಯಮಕ್ಕೆ ಸೇರಿಸಿದ್ದೇನೆ. ನಮ್ಮ ಆಸೆಗಳು ಈಡೇರುವುದಿಲ್ಲ" ಎಂದು ಹೇಳುವಾಗ ಆಸಿಯಾ ಬಾನುರವರ ಕಣ್ಣಿನಲ್ಲಿ ನೀರು ಜಿನುಗಿತು.

* * *

"ಜಯಲಕ್ಷ್ಮಿ ಇವರು ಮಂಗಳೂರಿನ ಸುರತ್ಕಲ್ ನಿವಾಸಿ, ಖಾಸಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಧ್ಯಾಪಕಿ. ಬೆಲೆ ಏರಿಕೆಯ ಬಗ್ಗೆ ಇವರು ಹೀಗೆ ಹೇಳುತ್ತಾರೆ.

ಖಾಸಗಿ ಶಾಲೆಯಲ್ಲಿ ದುಡಿಯುವ ನನಗೆ

ಪುಟ 4 ಕ್ಕೆ

ಸಂಪಾದಕೀಯ

ಢೋಂಗಿ ಭರವಸೆಗಳು

ಸಾಧಿಸುವ ಕ್ರಮಗಳಿಲ್ಲದೇ ರಾಜ್ಯಪಾಲರ ಬಾಯಿಯಲ್ಲಿ ಒಣ ಭರವಸೆಗಳನ್ನೇ ಹೇಳಿಸಿದ ಬಿಜೆಪಿ ಸರ್ಕಾರಕ್ಕೆ ದುಡಿಯುವ ಜನತೆಯ ಪ್ರಶ್ನೆಗಳಿಗೆ ಕಿಂಚಿತ್ತೂ ಕಾಳಜಿಯಿಲ್ಲ! ಆದರೆ ಹಲವು ಆತಂಕದ ಅಂಶಗಳಿವೆ.

ಪಕ್ಷೇತರರ ಬೆಂಬಲದಿಂದಲೇ ಜೀವ ಪಡೆದಿರುವ ಬಿಜೆಪಿ ಸರ್ಕಾರ ಅಲ್ಪಕಾಲದ. ಮೊದಲ ಅಧಿವೇಶನದಲ್ಲಿ ಧ್ವನಿಮತದ ವಿಶ್ವಾಸ ಮತವನ್ನು ಪಡೆದುಕೊಂಡಿದೆ, ಹಾಗೆಯೇ ಈ ಸರ್ಕಾರದ ಮುಂದಿನ ಕಾರ್ಯಕ್ರಮಗಳ ಬಗ್ಗೆ ರಾಜ್ಯಪಾಲರ ಭಾಷಣದ ಅಂಶಗಳು ಕೇವಲ ಭರವಸೆಗಳ ಮಹಾಪೂರವೇ ಆಗಿದ್ದು, ಅವುಗಳ ಜಾರಿಗೆ ಅಗತ್ಯವಾದ ಯಾವುದೇ ನಿರ್ದಿಷ್ಟ ಕ್ರಮಗಳೂ ಇಲ್ಲವಾಗಿವೆ. ಸಮೃದ್ಧ ಕರ್ನಾಟಕ, ಸುಖೀ ರಾಜ್ಯದ ನಿರ್ಮಾಣದ ಮುಖ್ಯಮಂತ್ರಿ ಮಾತುಗಳೂ ಕೇವಲ ಒಣಭರವಸೆಗಳ ಹೂರಣ ಹೊಂದಿರುವಂತಹವು. ಸರ್ಕಾರದ ಸಂಕಲ್ಪಗಳನ್ನು ಸಾಕಾರಗೊಳಿಸಲು ಎದುರಿಗಿರುವ ಸವಾಲುಗಳ ಸನ್ನಿವೇಶದತ್ತ ಒಂದು ಕಿರುನೋಟವನ್ನು ಬೀರದಿರುವುದು ಈ ಸರ್ಕಾರ ಆಡಿದ ಮಾತಿಗೆ ಅದೆಷ್ಟು ಬದ್ಧ ಎಂಬ ಪ್ರಶ್ನೆಯನ್ನು ಹುಟ್ಟಿಸುತ್ತದೆ.

ಜಾರಿಗೆ ತರುವ ಯಾವುದೇ ನಿಖರ ಬದ್ಧತೆಯಿಲ್ಲದ ಭಾಷಣ ಜನರ ನಿರೀಕ್ಷೆಗೆ ಎಸಗುವ ದ್ರೋಹವೂ ಆಗಿದೆ. ವಿಶೇಷವಾಗಿ ಯಡಿಯೂರಪ್ಪನವರ ಸರ್ಕಾರ ಬಿಜೆಪಿಯ ಚುನಾವಣಾ ಪ್ರಣಾಳಿಕೆಯ ಅಂಶಗಳಿಗೆ ಬದ್ಧತೆಯನ್ನು ಸದನದೊಳಗೆ ಪ್ರಕಟಿಸುವುದು ಅತೀ ಅಗತ್ಯವಿತ್ತು. ಆದರೆ ಹಾಗೆ ಮಾಡದೆ ಕೇವಲ ಜನಪ್ರಿಯ ಅಂಶಗಳಷ್ಟೇ ಪುನರುಚ್ಚರಿಸಿದೆ. ಪ್ರಮುಖವಾಗಿ ಅಧಿಕಾರಕ್ಕೆ ಬಂದ ಕೇವಲ 24 ತಾಸುಗಳಲ್ಲೇ ಎಲ್ಲಾ ಹಳ್ಳಿಗಳಲ್ಲಿ ರೈತರಿಗೆ ಉಚಿತ ವಿದ್ಯುತ್ ದೊರಕಿಸುವುದಾಗಿ ಡಂಗೂರು ಹೊಡೆದಿದ್ದ ಭರವಸೆಯ ಬಗ್ಗೆ ಇಲ್ಲಿಯವರೆಗೂ ಏನೊಂದೂ ಕ್ರಮಗಳಿಲ್ಲ, ಮಾತ್ರವಲ್ಲ ಅದರ ಪ್ರಸ್ತಾಪವೇ ರಾಜ್ಯಪಾಲರ ಅಥವಾ ಮುಖ್ಯಮಂತ್ರಿಗಳ ಭಾಷಣದಲ್ಲಿ ನಾಪತ್ತೆಯಾಗಿರುವುದು ಡೋಂಗಿತನದ ಪ್ರತೀಕವಾಗಿದೆ. ವಿದ್ಯುತ್ ಉತ್ಪಾದನೆಗೆ ಪ್ರಾಯೋಗಿಕ ಕ್ರಮಗಳೇ ಇಲ್ಲದೇ ದುಪ್ಪಟ್ಟು ವಿದ್ಯುತ್ ಉತ್ಪಾದಿಸುವುದಾಗಿ ಹೇಳಿರುವುದು ಸಹ ಒಂದು ಆಮಿಷ ಅಷ್ಟೆ.

ಆರೋಗ್ಯ, ಶಿಕ್ಷಣ, ಆಹಾರ, ವಸತಿ, ಶಾಂತಿ, ಸಾಮಾಜಿಕ ನ್ಯಾಯ, ಮೂಲ ಸೌಕರ್ಯಗಳ ಅಭಿವೃದ್ಧಿಯಂತಹದ್ದನ್ನು ಸಾಧಿಸುವ ಮಾತುಗಳಿಗೆ ಯಾರ ಆಕ್ಷೇಪ ಇರಲಿಕ್ಕಿಲ್ಲ. ಆದರೆ ಸಾಧನೆಯ ಮಾರ್ಗಗಳೇನು? ಇದಕ್ಕೆ ಅಗತ್ಯವಿರುವ ಸಂಪನ್ಮೂಲದ ಕ್ರೋಢೀಕರಣ ಹೇಗೆ ಎಂಬುದಕ್ಕೆ ಯಾವುದೇ ನಿರ್ದಿಷ್ಟ ಸೂಚನೆಗಳಿಲ್ಲ. ಹೊಸತನ್ನು ಸಾಧಿಸುವ ಸಂಕಲ್ಪವಾಗಲಿ, ಹಳೆಯ ಜಾಡನ್ನು ಬದಲಿಸುವ ಇಚ್ಛೆಯಾಗಲೀ ಸ್ಪಷ್ಟಗೊಂಡಿಲ್ಲದಿವುರುದರಿಂದ ಬಿಜೆಪಿ ಸರ್ಕಾರದ ಕೇವಲ ಹಳಹಳಿಕೆಗಳು ಜನರ ಕಣ್ಣಿಗೆ ಮಣ್ಣೆರಚುವ ತಂತ್ರವಾಗಿದೆ.


ಇದರಲ್ಲಿ ಬಡತನವನ್ನು ಹೊಸದಾಗಿ ವ್ಯಾಖ್ಯಾನಿಸಲು ಸರ್ಕಾರ ಮುಂದಾಗಿದೆ. ಪರಾಮರ್ಶಿಸಿ ಪುನರ್ ವ್ಯಾಖ್ಯಾನ ಮಾಡುವುದಾಗಿ ಹೇಳಿರುವುದರ ಅರ್ಥವೇನು? ಬಡವರನ್ನು ಬಡವರು, ಅತ್ಯಂತ ಬಡವರೆಂದು ವಿಂಗಡಿಸಲಾಗುವುದೆಂದು ಹೇಳಿರುವುದು ಬಡವರ ಸಂಖ್ಯೆ ಕಡಿಮೆ ತೋರಿಸುವ ಒಂದು ಕಸರತ್ತು. ಅಂದರೆ ಇಂತಹುದೇ ಮಾನದಂಡ ಹಿಡಿದು ಪಡಿತರ ರೇಷನ್ ಕಾರ್ಡ್‌ಗಳ ನೀಡಿಕೆಯ ಪ್ರಮಾಣವನ್ನು ಕಡಿತಗೊಳಿಸುವುದು ಇದರ ಉದ್ದೇಶವಾಗಿದೆ. ಬಡತನ ರೇಖೆ ಗುರುತಿಸಲು 11,800 ರೂ.ಗಳು ಮತ್ತು ನಂತರದಲ್ಲಿ 30 ಸಾವಿರಕ್ಕೆ ವಿಸ್ತರಿಸುವುದು ಎಂಬುದರಲ್ಲಿಯೂ ಹೆಚ್ಚಿನ ಆದಾಯವಿರುವ ಬಡವರೆಂದು ಫಲಾನುಭವಿಗಳ ಸಾಲಿನಿಂದ ಹೊರಗಟ್ಟುವುದೂ ಆಗಿದೆ. ಯಾಕೆಂದರೆ ಈಗಿನ ಮುಖ್ಯಮಂತ್ರಿಗಳೇ ಹಿಂದಿನ ಸರ್ಕಾರದಲ್ಲಿ 20 ತಿಂಗಳು ಹಣಕಾಸು ಖಾತೆಯನ್ನು ನಿರ್ವಹಿಸುತ್ತಿರುವಾಗ ಬಡವರನ್ನು ಕಡಿಮೆಗೊಳಿಸಬೇಕೆಂದು ಬಡತನರೇಖೆ ಹೆಚ್ಚಾಗದಂತೆ ನೋಡಬೇಕೆಂದೂ ನಿರ್ದೇಶಿಸಿದ ಮಧ್ಯಾವಧಿ ಆರ್ಥಿಕ ಯೋಜನೆ ಮಸೂದೆಯನ್ನು ಅಂಗೀಕರಿಸಿರುವುದನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ. ಅದಕ್ಕಾಗಿಯೇ ಪ್ರತಿ ಸರ್ಕಾರಗಳೂ ರೇಷನ್ ಕಾರ್ಡ್ ನೀಡುವುದರಲ್ಲಿ ಇಂತಹುದೇ ಪುನರ್ ವ್ಯಾಖ್ಯಾನ ಮಾಡುತ್ತಾ ಕಾಲಹರಣ ಮಾಡಿ, ರೇಷನ್-ರೇಷನ್ ಕಾರ್ಡ್ ಸಿಗದಂತೆ ವಂಚಿಸಿರುವ ಅನುಭವ ಕಣ್ಣೆದುರೇ ಇದೆ. ಅಭಿವೃದ್ಧಿ ,ಸಾಮಾಜಿಕ ಕಲ್ಯಾಣಕ್ಕೆ ಕಂಟಕವಾಗಿರುವ ಆ ಮಸೂದೆಯನ್ನು ಹಿಂತೆಗೆದುಕೊಳ್ಳುವ ಛಾತಿ ಯಡಿಯೂರಪ್ಪನವರಿಗೆ ಇದೆಯೇ ಎಂಬುದೇ ಪ್ರಶ್ನೆ.

ಹಾಗೆಯೇ ರಾಜ್ಯಪಾಲರ ಭಾಷಣದ ಕೆಲವು ಪ್ರಮುಖ ಅಂಶಗಳು ಆತಂಕ ಹುಟ್ಟಿಸುವಂತಹವೂ ಆಗಿವೆ. ಮೂಲ ಸೌಕರ್ಯಗಳ ಅಭಿವೃದ್ಧಿ ಎಂದು ಹೇಳಲಾಗುವ ವಿದ್ಯುತ್, ರಸ್ತೆ, ಕುಡಿಯುವ ನೀರು ಇತ್ಯಾದಿ ಅಭಿವೃದ್ಧಿ ಕಾರ್ಯಗಳನ್ನು ಖಾಸಗೀಕರಿಸುವುದಾಗಿ ಹೇಳಿರುವುದು, ಗ್ರಾಹಕ ಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಹೊರಿಸುವಂತಹದ್ದು, ಅಲ್ಲದೆ ಜಿಲ್ಲಾ ಕೇಂದ್ರಗಳ ವಿಮಾನ ನಿಲ್ದಾಣ ನಿರ್ಮಾಣ, ಕೈಗಾರಿಕೆಗಳಲ್ಲಿ ಖಾಸಗಿ ಸಹಭಾಗಿತ್ವ ಎಂಬುದೂ ಸಹ ಖಾಸಗೀಕರಣದ ಹಳೆಯ ಹಾದಿಯನ್ನೇ ಪುನರುಚ್ಚರಿಸಿದೆ. ಈಗಾಗಲೇ ವಿದ್ಯುತ್, ರಸ್ತೆ, ಕುಡಿಯುವ ನೀರಿನ ಖಾಸಗೀಕರಣದ ಪ್ರಕ್ರಿಯೆ ನಡೆದಿದ್ದು, ಜನರ ವಿರೋಧದಿಂದ ಒಂದು ರೀತಿಯಲ್ಲಿ ಸರ್ಕಾರದ ಈ ನಿರ್ಧಾರ ಇರುವ ಸೌಲಭ್ಯಗಳನ್ನು ಕಸಿದುಕೊಳ್ಳಲಿದೆ.

ಭರವಸೆ, ಆಮಿಷಗಳ ನಡುವೆಯೇ ಸಂಘ ಪರಿವಾರದ ಗುಪ್ತ ಅಜೆಂಡಾದ ಜಾರಿಗೆ ಯತ್ನಗಳೂ ಇವೆ. ವಿಶೇಷವಾಗಿ ಹಿಂದೂ ಧಾರ್ಮಿಕ ದತ್ತಿ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಹೇಳಿರುವುದು, ಇದರ ಒಂದು ಭಾಗ. ಇಂತಹ ತಿದ್ದುಪಡಿ ತರಬೇಕೆಂಬುದು ಪೇಜಾವರರು, ಧರ್ಮಸ್ಥಳದ ಹೆಗಡೆ, ಆದಿಚುಂಚನಗಿರಿ ಸ್ವಾಮಿಗಳಂತಹವರ ಒತ್ತಡವಾಗಿತ್ತು. ಸಂಘ ಪರಿವಾರ, ಬಿಜೆಪಿಯ ಚಿಂತನೆ ನೋಡಿದರೆ ಇದು ವಿವಾದಾತ್ಮಕ ತಿದ್ದುಪಡಿಯಾಗುವುದರಲ್ಲಿ ಅನುಮಾನವಿಲ್ಲ. ಹಾಗೆಯೇ ಭಯೋತ್ಪಾದನೆಯನ್ನು ನಿಗ್ರಹಿಸುವ ಪ್ರಕಟಣೆ ಒಳ್ಳೆಯದೇ. ಆದರೆ ಸಂಘದ ಹಾಗು ಬಿಜೆಪಿಯ ಭಯೋತ್ಪಾದನೆ ಯಾವ ಸ್ವರೂಪ ಪಡೆದೀತು? ಈ ವ್ಯಾಪ್ತಿಗೆ ಸಿಮಿ ವ್ಯಾಖ್ಯಾನ ಅನುಸರಿಸಿದಾಗ ಭಯೋತ್ಪಾದನೆ ಯಾವ ಸ್ವರೂಪ ಪಡೆದೀತು? ಈ ವ್ಯಾಪ್ತಿಗೆ ಸಿಮಿ ಇತ್ಯಾದಿಗಳ ಜೊತೆಗೆ ಭಜರಂಗದಳ, ವಿಶ್ವ ಹಿಂದು ಪರಿಷತ್, ಶ್ರೀರಾಮಸೇನೆಗಳಂತಹವೂ ಸೇರಲಿವೆಯೇ ಎಂದೂ ನೋಡಬೇಕಿದೆ.

ಪುಟ 6 ಕ್ಕೆ

ಬಿಜೆಪಿ ಶಾಸಕರ ನಿಷ್ಠೆ : ಸಂವಿಧಾನಕ್ಕೋ ಅಥವಾ ನಾಯಕರ ಪಾದಗಳಿಗೋ



ಹದಿಮೂರನೆಯ ವಿಧಾನಸಭೆ ಅಸ್ತಿತ್ವಕ್ಕೆ ಬಂದಿದೆ, ಹೊಸ ಸರ್ಕಾರವೂ ರಚಿತವಾಗಿ ಮೊದಲ ಅಧಿವೇಶನವನ್ನೂ ಮುಗಿಸಿದೆ. ವಿಶ್ವಾಸಮತ ಪಡೆದ ಸಂತೋಷ ಹಾಗೂ ಅಹಮಿಕೆಯಲ್ಲಿ ಬಿಜೆಪಿ ನಾಯಕ, ಶಾಸಕರು ಬೀಗುತ್ತಿದ್ದಾರೆ. ಕರ್ನಾಟಕವನ್ನು ಸಮೃದ್ಧ ಮಾಡುವ ಘೋಷಣೆಯಲ್ಲಿ, ಅಧಿಕಾರ ಅನುಭವಿಸುವ ಆತುರದಲ್ಲಿ ಅವರೆಲ್ಲರೂ ಸ್ಪರ್ಧಾಳುಗಳೇ!

ಅಸಹ್ಯಕರ

ಬಿಜೆಪಿ ತಾನೊಂದು ನೀತಿಬದ್ಧ, ಶಿಸ್ತಿನ ಪಕ್ಷವೆಂದು ಈಗೇನಾದರೂ ಹೇಳಿಕೊಂಡರೆ ಎಂತಹವರೂ ನಕ್ಕಾರು!. ರಾಜ್ಯದಲ್ಲಿಯೇ ಮುಖ್ಯಮಂತ್ರಿ ಗಾದಿಗೆ, ಸಚಿವ ಸ್ಥಾನಕ್ಕೆ ಕಿತ್ತಾಟ, ಬೀದಿ ರಂಪಾಟ ಒಂದು ಪುಕ್ಕಟ್ಟೆ ಮನರಂಜನೆಯಾಯಿತು. ಆದರೆ ಅದು ದುಬಾರಿ. ಮಂತ್ರಿ ಮಾಡಲಿಲ್ಲವೆಂದು ಹಿರಿಯ-ಕಿರಿಯ ನಾಯಕರ ಅಣತಿಯಂತೆ ಬೆಂಬಲಿಗರು ಸಾರ್ವಜನಿಕ ಆಸ್ತಿ ಹಾಳು ಮಾಡಿದರು, ದ್ವೇಷ ಸೃಷ್ಟಿಸಿದರು. ಅಂದು ಪ್ರಮಾಣ ವಚನ ಸ್ವೀಕರಿಸಿದ ಹಲವಾರು ಸಚಿವರು ಮುಂ.ಮಂ. ಗೆ, ಅಲ್ಲಿದ್ದ ಕೃಪಾಪೋಷಕ ಧಣಿಗಳ ಕಾಲಿಗೆ ಸಾಷ್ಟಾಂಗವೆರಗಿದರು. ತಾವಿರುವ ಸ್ಥಾನ - ಸನ್ನಿವೇಶಗಳನ್ನು ಮರೆತರು. ಆಗಲೇ ಸ್ವೀಕರಿಸಿದ ಪ್ರಮಾನ ವಚನ, ಅವರ ಸಂವಿಧಾನಿಕ ಸ್ಥಾನದ ಗೌರವವನ್ನು ಮಣ್ಣು ಪಾಲು ಮಾಡಿ ಕಾಲು ಹಿಡಿದು ನಾಯಕ ನಿಷ್ಠೆ ತೋರಿದರು. ಇಂತಹ ವರ್ತನೆ ಸಾರ್ವಜನಿಕವಾಗಿ ಅಸಹ್ಯಕರ, ಅವಮಾನ ಎಂದು ಅನ್ನಿಸಲಿಲ್ಲ ಅವರಿಗೆ...



ಅಪಚಾರ - ಅವಮಾನ

ಆದರೆ.... ಇಂತಹ ಸ್ವಾಮಿ ನಿಷ್ಠೆ, ಗುಲಾಮತನವು ಮೊನ್ನೆ ಹದಿಮೂರನೇಯ ವಿಧಾನಸಭೆಯು ಮೊದಲ ಅಧಿವೇಶನ ಆರಂಭಗೊಂಡಾಗ ಶಾಸಕರೆಲ್ಲರೂ ಪ್ರತಿಜ್ಞಾವಿಧಿ ಸ್ವೀಕರಿಸುವ ಸಂದರ್ಭದಲ್ಲಿ ಕೆಲವು ಶಾಸಕರು ನಡೆದುಕೊಂಡ ರೀತಿ ಪ್ರಜಾಪ್ರಭುತ್ವದ ಒಂದು ಉನ್ನತ ಅಂಗವಾಗಿರುವ ಜನಪ್ರತಿನಿಧಿಗಳ ಶಾಸನಸಭೆಗೆ ಮಾಡಿದ ಘೋರ ಅಪಚಾರ, ಅವಮಾನವಾಗಿತ್ತು.

ಪ್ರತಿಯೊಬ್ಬ ಶಾಸಕನೂ ಸಂವಿಧಾನದ ನಿರ್ದೇಶನದಂತೆ 'ಸಂವಿಧಾನ, ಸತ್ಯನಿಷ್ಠೆ ಅಥವಾ ದೇವರ ಹೆಸರಿನಲ್ಲಿ 'ಪ್ರವಮಾಣ ವಚನ' ಸ್ವೀಕರಿಸಬೇಕಿದೆ. ಇದು ಪಾಲಿಸಿಕೊಂಡು ಬಂದ ಕ್ರಮ. ಆದರೆ ಇದರ ಬದಲು ಕೆಲವು ಶಾಸಕರೂ ಸ್ಪರ್ಧೆಗಿಳಿದವರಂತೆ ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ನರ್ಸ್ ಜಯಲಕ್ಷ್ಮಿ ಹಗರಣದ ಕುಖ್ಯಾತ ರೇಣುಕಾಚಾರ್ಯ, ಬಿ.ಸುರೇಶಗೌಡ, ಸುರೇಶ್ ವಲ್ಯಾಪುರೆಯವರು ಮುಖ್ಯಮಂತ್ರಿ ಯಡಿಯೂರಪ್ಪನವರ ಹೆಸರಿನಲ್ಲಿ, ಸಿ.ಟಿ.ರವಿ ದತ್ತಪೀಠದ ಹೆಸರಿನಲ್ಲಿ ಅಲ್ಲದೆ ಆನಂದ್ ಸಿಂಗ್ ಮುಂತಾದ ಕೆಲವರು ಗಣಿ ಹಗರಣದ ಜನಾರ್ಧನರೆಡ್ಡಿ ಹೆಸರಿನಲ್ಲಿ ಹೀಗೆ.... ಮನಸ್ಸಿಗೆ ಬಂದಂತೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದು ಕೇವಲ ವ್ಯಕ್ತಿ ಪೂಜೆಯ, ಗುಲಾಮತನದ ಅತಿರೇಕತದ ವರ್ತನೆಯಾಗಿದೆ. ಕೆಲವರು ಈ ಮಹಾನುಭಾವರ ಕಾಲಿಗೂ ನಮಸ್ಕರಿಸಿದ್ದಾರೆ. ಶಾಸನಸಭೆಯಲ್ಲಿ ಇದು ಕೂಡದು ಎಂಬ ವಿವೇಕವನ್ನು ಮರೆತಿದ್ದಾರೆ. ಇವೆಲ್ಲ ಪ್ರಜಾತಂತ್ರಕ್ಕೆ ಮಾಡಿದ ದೊಡ್ಡ ಅಪಮಾನ.

ಅಪಾಯಕಾರಿ ವರ್ತನೆ

ಚುನಾಯಿತ ಪ್ರತಿನಿಧಿಗಳು ನಿಷ್ಠರಾಗಿರಬೇಕಾದುದು ಜನಕ್ಕೆ, ಮುಖ್ಯವಾಗಿ ಸಂವಿಧಾನಕ್ಕೆ. ಅಂದಾಗ ಮಾತ್ರವೇ ಜನತೆಯ ಹಿತ ಕಾಪಾಡಲು, ಕೊಂಚವಾದರೂ ಕಾನೂನು-ರೀತಿ-ನೀತಿಗಳನ್ನು, ನಿಷ್ಠುರತೆ ಪಾಲಿಸಲು ಸಾಧ್ಯ. ಮುಖ್ಯಮಂತ್ರಿ 'ಮಂತ್ರಿಗಳು' ಅವರ ನಾಯಕರು ತಪ್ಪಿ ನಡೆದಾಗ ಅದನ್ನು ಧೈರ್ಯವಾಗಿ ಎದುರಿಸಿ, ನ್ಯಾಯವನ್ನು ಎತ್ತಿಹಿಡಿಯಬೇಕು. ಆದರೆ ಈ ಶಾಸಕರ ವರ್ತನೆ ತಮ್ಮನ್ನು ಸಾಕಿದ ನಾಯಕರಿಗೆ 'ಸ್ವಾಮಿ ನಿಷ್ಠೆ' ತೋರಿಸುವುದಾಗಿದೆ. ಅಂದರೆ ಇನ್ನೆಲ್ಲಿಯ ಜನ ನಿಷ್ಠೆ....

ಈ ದಿನಗಳಲ್ಲಂತೂ ರಾಜಕೀಯದಲ್ಲಿ ಅಧಿಕಾರಕ್ಕಾಗಿ ಸಂದರ್ಭ ಸಾಧಕತೆ ಮಿತಿ ಮೀರುತ್ತಿದೆ. ಅದೇ ರಾಜಕೀಯ ಮೌಲ್ಯವೂ ಎಂದಾಗುತ್ತಿದೆ. ಇದೇ ಪ್ರವೃತ್ತಿ ಮುಂದುವರೆದಲ್ಲಿ ಈಗಿರುವ ಕನಿಷ್ಠ ಪ್ರಜಾಸತ್ತಾತ್ಮಕ ವಾತಾವರಣವೂ ನಾಶವಾಗಿ ಪಾಳೇಗಾರಿ ಪ್ರವೃತ್ತಿಗಳೇ ವಿಜೃಂಭಿಸುತ್ತವೆ. ಇದು ಇಡೀ ದೇಶಕ್ಕೇ ಅಪಾಯಕಾರಿ, ಆತಂಕಕಾರಿ.

ಪ್ರಮಾಣ ವಚನ - ಅಸಿಂಧು

ಶಾಸನಸಭೆಯಲ್ಲಿ ಇಂತಹ ವ್ಯಕ್ತಿ ಪೂಜೆಯ, ವರ್ತನೆಗಳು ಸಂವಿಧಾನ ಬಾಹೀರವಾಗಿವೆ. ಆದ್ದರಿಂದಲೇ ಈ ಶಾಸಕರ ಪ್ರಮಾಣ ವಚನವೇ ಅಸಿಂಧುವಾಗಿದೆ. ಆದ್ದರಿಂದ ಇವರು ಶಾಸಕರಾಗಿ ಸಭೆಯಲ್ಲಿ ಭಾಗವಹಿಸಲು, ಸವಲತ್ತು ಅನುಭವಿಸಲು ಅನರ್ಹರಾಗಿದ್ದಾರೆ. ಆದ್ದರಿಂದ ವಿಧಾನಸಭೆಯ ಅಧ್ಯಕ್ಷರಾದ ಜಗದೀಶ್ ಶೆಟ್ಟರ್ ಈ ಕೂಡಲೇ ಅವರ ಮೇಲೆ ಕ್ರಮ ಜರುಗಿಸಬೇಕು. ಆದರೆ ಅವರು ಹಾಗೆ ಮಾಡಿಯಾರೆ ಎಂಬುದು ಪ್ರಶ್ನೆ? ಯಾಕೆಂದರೆ ಇವರೆಲ್ಲಾ 'ಸಂಘ' ಪರಿವಾರಿಗಳು, ಸಂಘ ಮೂಲದವರು.

ಚಿಡ್ಡಿಪಡೆಯ ಚಿಂತನೆ

ಆರ್.ಎಸ್.ಎಸ್.ಗೆ ಭಾರತದ ಜಾತ್ಯಾತೀತ ಸಂವಿಧಾನ, ಪ್ರಜಾಪ್ರಭುತ್ವವೆಂದರೆ ಕಡು ದ್ವೇಷ. ಈ ಶಾಸಕರು ಅಥವಾ ನಾಯಕರ ನಿರ್ಲಕ್ಷದ, ನಿರ್ಲಜ್ಜತನದ ವರ್ತನೆಯಲ್ಲಿ , ಅದನ್ನು ಅಂಗೀಕರಿಸುವಲ್ಲಿ ಚಿಡ್ಡಿಪಡೆಯ ಚಿಂತನೆಯ ಪ್ರಭಾವವನ್ನು ತಳ್ಳಿಹಾಕುವಂತಿಲ್ಲ. ಇದು ನಿಲ್ಲುವುದೂ ಇಲ್ಲ. ಆದ್ದರಿಂದಲೇ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಸಂವಿಧಾನ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಕೃತ್ಯಗಳೂ ಆರಂಭಗೊಂಡಿವೆ. ಇನ್ನೂ ಏನೇನು ಕಾದಿದೆಯೋ....?

ನಂದಿಗ್ರಾಮ: ನಿಲ್ಲದ ತೃಣಮೂಲ ದಾಳಿ

ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ತೃಣಮೂಲ ಕಾಂಗ್ರೆಸ್ ಮುಖಂಡರ ಗೂಂಡಾಗಿರಿ ಮತ್ತೆ ಹೆಡೆ ಬಿಚ್ಚಿದೆ. ತೃಣಮೂಲ ಕಾಂಗ್ರೆಸ್ ಇತ್ತೀಚಿನ ಬಲಿ ಗರ್‌ಚಕ್ರಬೇರಿಯ ಕಾಮ್ರೇಡ್ ಖಾಲಿದ್ ಮುಲಿಕ್, ಹಾಲ್ದಿಯಾ ಪ್ರದೇಶದ ಕೈಗಾರಿಕೆಯೊಂದರಲ್ಲಿ ಭದ್ರತಾ ರಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಖಾಲಿದ್ ಮುಂಜಾನೆ ಕೆಲಸಕ್ಕೆ ಹೊರಟಿದ್ದರು. 2007ರಲ್ಲಿ ಸಂಭವಿಸಿದ ಹಲವಾರು ಸಿಪಿಎಂ ಕಾರ್ಯಕರ್ತರ ಹತ್ಯೆಗೆ ಸಾಕ್ಷಿಯಾಗಿದ್ದ ಇಲ್ಲಿನ ಕಡಿದಾದ ಅರಣ್ಯ ಪ್ರದೇಶವಾದ ಹೆಜರಕಾತ್ ಬಳಿ ಸೈಕಲ್ಲಿನಲ್ಲಿ ತೆರಳುತ್ತಿರುವಾಗ ಮಾರಕಾಯುಧಗಳನ್ನು ಹಿಡಿದಿದ್ದ ತೃಣಮೂಲ ಗೂಂಡಾಗಳು ಖಾಲಿದ್ ಮೇಲೆ ಹಠಾತ್ ಧಾಳಿಗೆ ಮುಂದಾದರು. ಖಾಲಿದ್ ಬಲಿಷ್ಠ ವ್ಯಕ್ತಿ. ಗುಡ್ಡದ ಮೇಲಿಂದ ತನ್ನನ್ನು ಕೆಳಗೆಳೆದು ಗಂಭೀರ ದಾಳಿಗಳನ್ನು ಮಾಡುವ ತನಕ ವೀರಾವೇಶದಿಂದ ಹೋರಾಡಿದರು. ಪಾದಗಳ ಕೀಲಿನ ಹಿಂಭಾಗದ ನರಗಳನ್ನು ಕತ್ತರಿಸಿದಾಗ ಧಾರಾಕಾರವಾಗಿ ರಕ್ತ ಹರಿದು ಪ್ರಜ್ಞೆ ತಪ್ಪಿ ಕುಸಿದುಬಿದ್ದ ನಂತರ ಗೂಂಡಾಗಳು ಕೇಕೆಗಳನ್ನು ಹಾಕಿಕೊಂಡು ಅಲ್ಲಿಂದ ಕಾಲು ಕಿತ್ತಿದ್ದಾರೆ. ಇದಕ್ಕೂ ಸ್ವಲ್ಪ ಮುನ್ನ ಘಟನೆ ನಡೆದ ಸ್ಥಳದಿಂದ ಖಾಲಿದ್‌ನ ಕೂಗಾಟ ಕೇಳಿಸಿಕೊಂಡ ಗ್ರಾಮದ ಸಿಪಿಎಂ ಕಾರ್ಯಕರ್ತರು ಗುಂಪಿನೊಂದಿಗೆ ಸ್ಥಳಕ್ಕೆ ಧಾವಿಸಿದರು. ಖಾಲಿದ್ ಕಾಲುಗಳಲ್ಲಿ ರಕ್ತ ಧಾರಾಕಾರವಾಗಿ ಹರಿಯುತ್ತಿತ್ತು. ರಕ್ತ ತಡೆಗಟ್ಟಲು ಮಾಡಿದ ಎಲ್ಲ ಪ್ರಯತ್ನಗಳು ವಿಫಲವಾಗಿವೆ. ನಂತರ ನಂದಿಗ್ರಾಮದ ಆಸ್ಪತ್ರೆಗೆ ಅವರನ್ನು ಸಾಗಿಸಲಾಯಿತು. ಈ ಹಿಂದೆ ಟಿಎಂಸಿ ಗೂಂಡಾಗಳಿಂದ ಹಲ್ಲೆಗೆ ಒಳಗಾಗಿದ್ದ ಮಹಿಳೆಯರೂ ಮತ್ತು ವೃದ್ಧರು ಸೇರಿದಂತೆ ಹಲವಾರು ಸಿಪಿಎಂ ಕಾರ್ಯಕರ್ತರು ಮತ್ತು ಹಿತೈಷಿಗಳನ್ನು ಇದೇ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಆಗ ಆಸ್ಪತ್ರೆಯಲ್ಲಿ ದಾಖಲಾದವರನ್ನು ಬೆದರಿಸಿ ಸಿಪಿಎಂ ನಾಯಕರ ವಿರುದ್ಧ ತಪ್ಪು ಹೇಳಿಕೆಗಳನ್ನು ಪಡೆದಿದ್ದರು. ಖಾಲಿದ್ ಪ್ರಕರಣದಲ್ಲೂ ಅದನ್ನೇ ಮರುಕಳಿಸಿದರು. ಅವರಿಗೆ ಚಿಕಿತ್ಸೆ ನೀಡಬಾರದೆಂದು ವೈದ್ಯರ ಮೇಲೆ ಒತ್ತಡ ಹೇರುವುದರೊಂದಿಗೆ ಹಲ್ಲೆಗೂ ಮುಂದಾಗಿದ್ದಾರೆ. ಅಲ್ಲಿಗೆ ಖಾಲಿದ್ ಪ್ರಾಣ ಹಕ್ಕಿ ಹಾರಿತ್ತು. ಈ ಪ್ರದೇಶದಲ್ಲಿ ಭದ್ರತೆಗೆ ನಿಯೋಜಿಸಿದ್ದ ಸಿಆರ್ ಪಿಎಫ್ ಯೋಧರು ಸಹ ತೃಣಮೂಲ ಕಾಂಗ್ರೆಸ್ ಗೂಂಡಾಗಳಿಗೆ ಬೆಂಬಲ ನೀಡಿದ್ದಾರೆ.

ಆಸ್ಪತ್ರೆಯಿಂದ ಹಿಂದಿರುಗಿದ ಸಿಪಿಎಂ ಕಾರ್ಯಕರ್ತರು ಮತ್ತು ಬೆಂಬಲಿಗರ ಸೈಕಲ್‌ಗಳು ಮತ್ತು ಸ್ಕೂಟರ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. "ನಮ್ಮ ವೈರಿಯನ್ನು ಕೊಂದಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿಯನ್ನು ಕೊಲ್ಲುತ್ತೇವೆ" ಎಂದು ಟಿಎಂಸಿ ಗೂಂಡಾಗಳು ಘೋಷಣೆಗಳನ್ನು ಕೂಗಿದ್ದಾರೆ. ಖಾಲಿದ್ ಸಾವಿಗೆ ಪ್ರತಿಭಟನೆಗಾಗಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕರೆ ಮೇರೆಗೆ ಆ ಪ್ರದೇಶದಲ್ಲಿ 12 ಗಂಟೆಗಳ ಬಂದ್ ಆಚರಿಸಲಾಯಿತು. ಉತ್ತರ ಪಶ್ಚಿಮ ಬಂಗಾಳದಲ್ಲಿ ಇಂತಹ ಗೂಂಡಾಗಿರಿ ಪ್ರಕರಣಗಳು ನಿರಂತರವಾಗಿ ನಡೆಯುತ್ತಲೇ ಇವೆ. ಮುರ್ಶಿದಾಬಾದ್ ಪ್ರದೇಶಗಳಲ್ಲಿ ನಡೆದ ಪ್ರಕರಣವೊಂದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಟಿಎಂಸಿ ಅಭ್ಯರ್ಥಿಗಳಾದ ಅಧೀರ್ ಚೌಧುರಿ ಮತ್ತು ಅವರ ಹಿಂಬಾಲಕರನ್ನು ಮತದಾರರು ತಿರಸ್ಕರಿಸಿದರು. ಇದರಿಂದ ಆಕ್ರೋಶಗೊಂಡ ಅವರು ಗ್ರಾಮಗಳಿಗೆ ದಾಳಿಯಿಟ್ಟು ಸಿಪಿಎಂ ಬೆಂಬಲಿಗರ ಮೇಲೆ ಅವ್ಯಾಹತವಾಗಿ ಹಲ್ಲೆಗಳನ್ನು ನಡೆಸಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸಹ ಸೋಲನುಭವಿಸಿದ್ದಾರೆ.

ಕ್ರೂರ ಹತ್ಯೆ: ಮತದಾನದ ಹಿಂದಿನ ರಾತ್ರಿ ಯುವಜನ ಮುಖಂಡರಾದ ಉಲ್ ಇಸ್ಲಾಂ ಮತ್ತು ಪಾಲನ್ ಶೇಕ್ ಅವರನ್ನು ಟಿಎಂಸಿ ಗೂಂಡಾಗಳು ಅಪಹರಿಸಿ ಅಪರಿಚಿತ ಸ್ಥಳದಲ್ಲಿ ಕೈಕಾಲುಗಳನ್ನು ಕಟ್ಟಿ ಹಾಕಿದ್ದಾರೆ. ಚುನಾವಣೆ ಫಲಿತಾಂಶ ಬರಲಾರಂಭಿಸುತ್ತಿದ್ದಂತೆ ಅಧೀರ್ ಮತ್ತು ಅವರ ಬೆಂಬಲಿಗರು ಹಿನ್ನಡೆ ಅನುಭವಿಸುತ್ತಿದ್ದಂತೆ ಇಬ್ಬರನ್ನೂ ಚೂಪಾದ ಬಂಬೂಗಳಿಂದ ಮತ್ತು ಕಬ್ಬಿಣದ ಸಲಾಕೆಗಳಿಂದ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ನಂತರ ಮರಗಳಿಗೆ ಕಟ್ಟಿಹಾಕಿ ರಕ್ತ ಸುರಿದು ಪ್ರಜ್ಞೆ ತಪ್ಪುವ ತನಕ ಅವರ ಮೇಲೆ ಬಾಂಬ್‌ಗಳನ್ನು ಎಸೆದಿದ್ದಾರೆ. ಹೀಗಾಗಿ ಅವರು ಅಲ್ಲೇ ಮೃತಪಟ್ಟಿದ್ದಾರೆ.

ಮಾಲ್ಡಾದಲ್ಲಿ ಹತ್ಯೆ: ಮಾಲ್ಡಾದಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಿದ ನಂತರ ಅಲ್ಲಿ ಸಿಪಿಎಂ ಅಭ್ಯರ್ಥಿಯಾಗಿದ್ದ 85 ವರ್ಷದ ಕಾಮ್ರೆಡ್ ಸರಿಫ್-ಉದ್- ದಿನ್ ಅವರನ್ನು ಮಾನಿಕ್‌ಚಕ್ ಬಳಿ ಹತ್ಯೆ ಮಾಡಲಾಗಿದೆ. ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಬಳಲಿದ್ದ ಸರಿಫ್ ತಮ್ಮ ಗ್ರಾಮಕ್ಕೆ ತೆರಳುತ್ತಿದ್ದರು. ಅವರನ್ನು ಅಡ್ಡಗಟ್ಟಿದ ಕಾಂಗ್ರೆಸ್ ಪಕ್ಷದ ಗೂಂಡಾಗಳು ಬೆದರಿಕೆ ಒಡ್ಡಿದ್ದಾರೆ. ವೃದ್ಧರಾಗಿದ್ದ ಸರಿಫ್ ಈ ಬೆದರಿಕೆಗೆ ಸಾಕಷ್ಟು ಗಮನ ಕೊಡದೆ ತೆರಳಿದರು. ಮರುದಿನ ಅವರು ಔಷಧ ಖರೀದಿಸಲು ಹೊರಟಿದ್ದಾಗ ಅವರನ್ನು ಸುತ್ತುವರಿದ ಗೂಂಡಾಗಳು ಮೊಳಕಾಲಿನ ಚಿಪ್ಪಿಗೆ ಬಲವಾಗಿ ಹೊಡೆದಿದ್ದಾರೆ. ಗಂಭೀರವಾಗಿ ಗಾಯಗೊಂಡ ಸರಿಫ್ ಕೃಷ್ಣಾನಗರ ಆಸ್ಪತ್ರೆಗೆ ಕರೆದೊಯ್ಯುವಾಗ ಕೊನೆಯುಸಿರೆಳೆದಿದ್ದಾರೆ.

– ಅಪ್ಪು

ಮಂಗ್ಳೂರು ಜನ ಏನಂತಾರೆ?


ಪುಟ 2 ರಿಂದ

ಮೊದಲೇ ಸಂಬಳ ಜಾಸ್ತಿ ಇಲ್ಲ, ನನ್ನ ಗಂಡ ಖಾಸಗಿ ಕಂಪನಿಯಲ್ಲಿ ಎಕೌಂಟೆಂಟ್ ಆಗಿ ದುಡಿಯುತ್ತಿದ್ದಾರೆ. ಇದ್ದುದರಲ್ಲಿ ಸುಖಿ ಸಂಸಾರ ನಡೆಸುತ್ತಿದ್ದೆವು. ಇಬ್ಬರು ಮಕ್ಕಳಿದ್ದಾರೆ. ಸಣ್ಣವಳು ಪಿಯುಸಿ ಓದುತ್ತಿದ್ದಾಳೆ. ದೊಡ್ಡವನು ಈ ಬಾರಿ ಪದವಿ ಮುಗಿಸಿದ್ದಾನೆ. ಈ ಸಂದರ್ಭದಲ್ಲಿ ಬಂದ ಬೆಲೆಯೇರಿಕೆ ನಮ್ಮ ಕನಸುಗಳನ್ನು ನುಚ್ಚು ನೂರುಗೊಳಿಸಿದೆ. ಮಗನನ್ನು ಲಾ ಓದಿಸಬೇಕು, ಎಂಬಿಎ ಮಾಡಿಸಬೇಕು ಎಂಬ ಯೋಜನೆ ಇತ್ತು. ಈಗ ಅದನ್ನು ಬಲವಂತವಾಗಿ ಕೈ ಬಿಡಲಾಗಿದೆ. ಮಗನಿಗೆ ಕೆಲಸ ಹುಡುಕಲು ತೊಡಗಿದ್ದೇವೆ. ಅದರ ಜೊತೆಗೆ ವಾರಾಂತ್ಯದ ತಿರುಗಾಟ, ನೆಂಟರ ಮನೆಗಳ ಭೇಟಿಗೆ ಕಡಿವಾಣ ಹಾಕಿದ್ದೇವೆ" ಎನ್ನುತ್ತಾರೆ ವಿಷಾದದಿಂದ.

ವಾಮಂಜೂರಿನ ಕೂಲಿ ಕಾರ್ಮಿಕ ಕೃಷ್ಣಪ್ಪ ಪೂಜಾರಿಯವರು ಹೇಳುವುದು. "ಹೆಂಡತಿ ಬೀಡಿ ಕಟ್ಟುತ್ತಾಳೆ. ನನ್ನದು ಕೂಲಿ ಕೆಲಸ. ದೊಡ್ಡ ಮಗ ಪಿಯುಸಿ ಮುಗಿಸಿ, ಈ ಬಾರಿ ಪದವಿ ಓದಲು ಸೇರಿಕೊಂಡಿದ್ದಾನೆ. ಈ ಪರಿ ಬೆಲೆ ಏರಿಕೆಯಿಂದ ಮನೆ ನಿರ್ವಹಣೆ ಕಷ್ಟವಾಗಿದೆ. ಅಕ್ಕಿ ಖರೀದಿಸಿದಾಗ ಕಣ್ಣಲ್ಲಿ ನೀರು ಬರುತ್ತದೆ. ಒಂದು ದಿವಸ ಕೆಲಸ ಇಲ್ಲದಿದ್ದರೆ ಕಡ್ಡಾಯ ಉಪವಾಸವೇ ಗತಿ. ಕೈ ಸಾಲದ ಬಡ್ಡಿ ಏರುತ್ತಿದೆ. ಈ ಮಧ್ಯೆ ಬಿಪಿಎಲ್ ಪಡಿತರ ಚೀಟಿಯನ್ನು ನಮ್ಮಿಂದ ಕಸಿಯಲಾಗಿದೆ. ಶಾಲಾ ಪುಸ್ತಕ ಫೀಸು ದುಬಾರಿಯಾಗಿದೆ. ಮಂಗಳೂರಿನಲ್ಲಿ ಕಾಲೇಜಿಗೆ ಸೇರಿರುವ ಮಗ ಇನ್ನು ದಿವಸ 15 ರೂ. ಬಸ್ ಖರ್ಚಿಗೆ ನೀಡಬೇಕು ಎಂದಾಗ ಅಸಹಾಯಕತೆಯಿಂದ ಮಾತು ಹೊರಡಲಿಲ್ಲ. ಮುಂದಿನ ದಾರಿ ತೋಚುತ್ತಿಲ್ಲ. ಎನ್ನುತ್ತಾರೆ.

– ಮುನೀರ್ ಕಾಟಿಪಳ್ಳ

'ಅಭಿವೃದ್ಧಿ'ಯೆಂದರೆ...



ವಿಮಾನ ನಿಲ್ದಾಣಕ್ಕೆ ಆ ಹೆಸರಿಡಿ, ಈ ಹೆಸರಿಡಿ ಅಂತ ಕೆಲವು ಜಾತಿಯ ಜನರೂ ತಮ್ಮ ತಮ್ಮ ಜಾತಿಯ ಮುಖಂಡರ ಹೆಸರು ಇಡಬೇಕೆಂದು ಒತ್ತಾಯಿಸುತ್ತಾ ಓರಾಟ ಮಾಡುತ್ತಿದ್ದಾರೆ. ಕನ್ನಡಮ್ಮನ ಪುಣ್ಯ, ಎಂತೆಂಥ ಓರಾಟಗಾರ ಮಕ್ಕಳನ್ನು ಪಡೆದಿದ್ದಾಳೆ! ವಿಮಾನ ನಿಲ್ದಾಣ ಆಗಲು ಇಷ್ಟು ವರ್ಷ ತಡ ಆಯಿತು, ಆದರೂ ಇನ್ನೂ ಅಲ್ಲಿಗೆ ಸರಿಯಾದ ರಸ್ತೆಗಳಿಲ್ಲ. ಹಳೆ ನಿಲ್ದಾಣ ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ, ಇಂಥ ವಿಚಾರಗಳನ್ನು ಬಿಟ್ಟು ಬರೀ ನಾಮಕರಣ ವಿವಾದ ಮಾಡುತ್ತಾ ತಮ್ಮ ತಮ್ಮ ಜಾತಿಯ 'ಮಹಾಪುರುಷ' ರಿಗೆ ಗೌರವ ತೋರುತ್ತಿದ್ದಾರೋ, ತೆಗಿತಿದ್ದಾರೋ ಅಥವಾ ತಮ್ಮ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೋ ಗೊತ್ತಿಲ್ಲ, ಈ ಕನ್ನಡಮ್ಮನ ಸುಪುತ್ರರು!. ಆಗಬೇಕಾದ ಕೆಲಸ ಬೇಕಾದಷ್ಟಿದೆ, ಅಂಥವನ್ನು ಒತ್ತಾಯಿಸಿ ಹೋರಾಡುವ ಬದಲು ಎಲ್ಲ ಮುಗಿದ ಮೇಲೆ ಹೆಸರಿಡಲು, ನಕಲಿ ಓರಾಟ ಮಾಡುತ್ತಾ ಮಾಡೋರಿಗೆ 'ಅಭಿವೃದ್ಧಿ' ಬಗೆಗೆ ಯಾಕೆ ಕಾಳಜಿ ಬೇಕಿಲ್ಲ!


ಈ ಕಡೆ, ಅಭಿವೃದ್ಧಿ ಅಂದರೆ ನಮ್ಮ ಸನ್ಮಾನ್ಯ ಶ್ರೀ ಶ್ರೀ ಮುಖ್ಯಮಂತ್ರಿಗಳು ಸದಾ ಜಪಿಸುತ್ತಿರುವ 'ಅಭಿರುದ್ಧಿ' ನೆನಪಾಗುತ್ತೆ. ಈ 'ಅಬಿರುದ್ದಿ'ಯೇ ಬೇರೆ, ಉದಾಹರಣೆಗೆ ನೋಡಿ, ಹೊಸ ಸರ್ಕಾರ ರಚನೆಯಾಗುವ ಸಂದರ್ಭದಲ್ಲೇ 'ಅಭಿರುದ್ದಿ' ಶುರುವಾಗಿದೆ. ಆರು ಜನ ಶಾಸಕರು ಕನಸಿನಲ್ಲಿಯೂ ಎಣಿಸಿರದಂಥ ಬಂಪರ್ ಲಾಟರಿ 'ಅಬಿರುದ್ದಿ' ಹೊಂದಿದರು. ಇದು ಒಂದು ಥರ 'ಅಬಿರುದ್ದಿ' ಆಯಿತು. ಇನ್ನು ಸರ್ಕಾರದ ರಚನೆ ನಂತರ ಕೆಲವು 'ಹಿರಿಯರು', 'ನಾನು ಶಾಸಕನಾಗಿ, ಪಕ್ಷದ ನಿಷ್ಠಾವಂತ ಸೇವಕನಾಗಿ ಜನಗಳ ಸೇವೆ ಮಾಡ್ತೀನಿ' ಅಂತ (ಅತಿ) ವಿನಯ ಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತಿದ್ದರೂ, ಬಿಡದೆ ಅವರ ಅನುನಾಯಿಗಳು, ಕ್ಷಮಿಸಿ, ಅನುಯಾಯಿಗಳು, ಆ ಹಿರಿಯರನ್ನು ಮಂತ್ರಿ ಮಾಡಲೇಬೇಕು ಅಂತ ಒತ್ತಾಯಿಸಿ ಅನೇಕ ಬಸ್ಸುಗಳನ್ನು, ಸಾರ್ವಜನಿಕ, ಖಾಸಗೀ, ಸ್ವತ್ತುಗಳನ್ನು ಅಗ್ನಿ, ಶಿಲೆ, ದಂಡಗಳಿಂದ 'ಅಬಿರುದ್ದಿ' ಪಡಿಸಿದರು. ಸನ್ಮಾನ್ಯ ಶ್ರೀ ಶ್ರೀ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಬಾಲಕರ ತುಂಟಾಟವನ್ನು ಕಂಡೂ ಕಾಣದ ಹಾಗೆ ಇದ್ದಾರೆ. ತೋರಿಕೆಗಾದರೂ 'ಹಾಗೆಲ್ಲ ಮಾಡಬಾರದು ಕಣ್ರಪ್ಪಾ ಕಂದಮ್ಮಗಳಿರಾ' ಎಂದು ಪ್ರೀತಿಯಿಂದಲಾದರೂ ಗದರಿಸಿಲ್ಲ. ಇದು ಆರಂಭದಲ್ಲೇ ಶುರುವಾದ. 'ಅಬಿರುದ್ದಿ' ಇನ್ನು ಮುಂದೆ ಹೇಗಿರಬಹುದು ಅಂತ ಚಿಂತೆ ಏನೂ ಮಾಡಬೇಡಿ. ಧರ್ಮ ಸಂಸ್ಥಾಪನೆಗಾಗಿ ಮಠಾದೀಶರಿದ್ದಾರೆ.

ಇದೇನು ಅಸಂಬದ್ಧ, ರಾಜಕೀಯದಲ್ಲಿ ಧರ್ಮ ಯಾಕೆ ಬಂತು? ಮುಖ್ಯ ಮಂತ್ರಿಗಳಿಗೆ ಯಾಕೆ ಶ್ರೀ ಶ್ರೀ ಅಂತ ಮುಂಬಾಲ? ಅಂತ ನಿಮ್ಮ ಅನುಮಾನ ತಾನೆ? ಯಾಕೆ ತಾವು ಪ್ರಮಾಣ ವಚನ ಸ್ವೀಕಾರ ಸಮಾರಂಭ ನೋಡಲಿಲ್ವೇ? ಮುಖ್ಯವಲ್ಲದ ಮಂತ್ರಿಗಳು ಹ' ಲ ವ' ರ' ು ಮಂತ್ರಿಯಾಗುತ್ತಿದ್ದ ಹಾಗೇ ಮುಖ್ಯಮಂತ್ರಿಗಳ ಪಾದಕಮಲಗಳಿಗೆ ಸಾಷ್ಟಾಂಗವಾಗಿ ಅಡ್ಡ ಬೀಳಲಿಲ್ಲವೇ? ಇದೇನು ಪ್ರಜಾಪ್ರಭುತ್ವವೋ ಸನ್ಮಾನ್ಯ ಶ್ರೀ ಶ್ರೀ ಮುಖ್ಯಮಂತ್ರಿಗಳ ಮಠದ ಜಾತ್ರೆಯೋ ಅಂತ ಏನೇನೋ ಅಸಂಬದ್ಧ ಯೋಚನೆ ಮಾಡಬೇಡಿ. ಯಾಕೆ ಅಂದ್ರೆ, ಈಗ ಮಠ, ಮಠಾಧೀಶರುಗಳಿಗೂ, ರಾಜಕೀಯ, ಮಂತ್ರಿಗಿರಿಗಳಿಗೂ ನಡುವಿನ ಬೇಲಿಯನ್ನು ಎರಡೂ ಕಡೆಯ ಹೊಲಗಳೇ ಮೇಯುತ್ತಿರು ವುದರಿಂದ ಎರಡೂ ಹೊಲಗಳೂ ಒಂದಾಗಿ ವಿಶಾಲವಾದ ಸಮೃದ್ಧವಾದ ಮೇಯಲು ಯೋಗ್ಯವಾದ ಹೊಲವಾಗಿ ಕಾಣುತ್ತಿವೆ. ಮೊನ್ನೆ ಕೆಲವು 'ಹಿರಿಯರು' ಮಂತ್ರಿಗಿರಿಗಾಗಿ ರಚ್ಚೆ ಹಿಡಿದು, ತಮ್ಮ ಅನುನಾಯಿಗಳಿಂದ, ಕ್ಷಮಿಸಿ, ಅನುಯಾಯಿಗಳಿಂದ ರಾಜ್ಯದ 'ಅಬಿರುದ್ದಿ' ಮಾಡಿಸುತ್ತಿರಬೇಕಾದರೆ, ಕೆಲ ಮಠಾಧೀಶರು ಸ್ವಯಂಪ್ರೇರಣೆಯಿಂದ ರಾಜಿಸಂದಾನ ಮಾಡಿಸುತ್ತೇನೆ ಎಂದು ಮುಗಿಬಿದ್ದಿದ್ದನ್ನು ನೋಡಲಿಲ್ಲವೇ? ಅವರೂ ಕೂಡಾ ಶಿಷ್ಯರ 'ಅಬಿರುದ್ದಿ' ಕಾರ್ಯಗಳ ಬಗ್ಗೆ ಏನೂ ಚಕಾರ ಎತ್ತಿಲ್ಲ ಎಂದಮೇಲೆ ....,

ಇತ್ತ ಮಂತ್ರಿಗಿರಿ ಸಿಗದವರು ಒಂದು ಥರ 'ಅಬಿರುದ್ದಿ' ಮಾಡಿಸುತ್ತಿರಬೇಕಾದರೆ, ಮಂತ್ರಿಗಿರಿ ಸಿಕ್ಕವರು ಮಂತ್ರಿ ಮನೆ, ಕಛೇರಿಗಳನ್ನು ವಾಸ್ತು ಪ್ರಕಾರವಾಗಿ ಅಬಿರುದ್ದಿ ಮಾಡಿಸಲು ಪರದಾಡುತ್ತಿದ್ದಾರೆ. ನಂತರ ಅಲ್ಲಿ ಯಜ್ಞಯಾಗಾದಿಗಳೂ, ಹೋಮ ಹವನಗಳೂ, ಸತ್ಯನಾರಾಯಣ ಪೂಜೆ ಮುಂತಾದುವುಗಳಿಂದ ಧರ್ಮಾಭಿವೃದ್ಧಿ ಪಡಿಸಿ ಸೇರಿಕೊಳ್ಳ ಬೇಕಾಗಿದೆ. ಸನ್ಮಾನ್ಯ ಶ್ರೀ ಶ್ರೀ ಮುಖ್ಯಮಂತ್ರಿಗಳು ತಮ್ಮ ಮಂತ್ರಿ ಮಂಡಲ ಹಾಗೂ ಶಾಸಕರ ಜೊತೆಗೂಡಿ ಇಷ್ಟೆಲ್ಲ 'ಅಬಿರುದ್ದಿ' ಕಾರ್ಯ ಆರಂಭಿಸಿ, ದಿನಕ್ಕೆ ಕನಿಷ್ಠ ನೂರು ಬಾರಿ 'ಅಬಿರುದ್ದಿ', 'ಅಬಿರುದ್ದಿ', ಅಂತ ಜಪ ಮಾಡುತ್ತಿರ ಬೇಕಾದರೆ, ರಾಜ್ಯಪಾಲರು ಬಹುಮತ ಸಾಬೀತು ಅಂತ ಏನೇನೋ ಹೇಳುತ್ತಿರುವುದು, ಮೊಸರಲ್ಲಿ ಕಲ್ಲು ಸಿಕ್ಕಿದಹಾಗೆ ಆಗುತ್ತಿದೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು ಎಂದಾಕ್ಷಣ ಜನರು, ಅದರಲ್ಲೂ ಈ ಸಾರಿ ಹೆಚ್ಚಾಗಿ ಬಿಜೆಪಿಯನ್ನು ಬೆಂಬಲಿಸಿರುವ ಲಿಂಗಾಯತರು ಹಾಕಿರುವ ಮತಗಳು ಹಿಂದುತ್ವಕ್ಕೆ ಕೊಟ್ಟ ಮತಗಳು ಎನ್ನಬಹುದೇ?

ಲಿಂಗಾಯತರ ಮತ ಹಿಂದುತ್ವಕ್ಕಲ್ಲ



ಮನಸ್ಸು ಕೇಸರಿ - ಶಾಲು ಮಾತ್ರ ಹಸಿರು

3ನೇ ವಿಧಾನಸಭೆಗಾಗಿ ಕರ್ನಾಟಕದಲ್ಲಿ ನಡೆದ ಚುನಾವಣೆಯು ಎಬ್ಬಿಸಿದ ಧೂಳು ನಿಧಾನವಾಗಿ ಳಿಯಾಗುತ್ತಿದೆ. ರಾಜ್ಯದಲ್ಲಿ ಮೊಟ್ಟಮೊದಲ ಾರಿಗೆ ಬಿಜೆಪಿ ಅಧಿಕಾರದ ಗದ್ದುಗೆಯನ್ನೇರಲು ಾರಣವಾದ ಅಂಶಗಳ ಬಗ್ಗೆ ವ್ಯಾಪಕವಾದ ತರ್ಕ ತರ್ಕಗಳು ನಡೆಯುತ್ತಿವೆ. ಬಿಜೆಪಿಯ ಈ ಲುವಿಗೆ ಒಂದಕ್ಕಿಂತ ಹೆಚ್ಚು ಕಾರಣಗಳು ರಲೇಬೇಕು. ಆದರೆ ರಾಜ್ಯದಲ್ಲಿ ಹುಸಂಖ್ಯಾತರಾಗಿರುವ ಲಿಂಗಾಯತರು ಬಿಜೆಪಿ ೆನ್ನಿಗೆ ನಿಂತ ಕಾರಣದಿಂದ ಬಿಜೆಪಿಗೆ ಸ್ವಂತ ಲದಿಂದ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ ನ್ನುವುದರಲ್ಲಿ ಸಂದೇಹವಿಲ್ಲ. ರಾಜ್ಯದ ಎಲ್ಲಾ ಲಿಂಗಾಯತ ಮತದಾರರು ಬಿಜೆಪಿಗೆ ಒಲವು ೋರಿದ್ದಾರೆ ಎಂದು ಇದರ ಅರ್ಥವಿಲ್ಲ. ರಿಸುಮಾರು ಶೇ.70ರಷ್ಟು ಲಿಂಗಾಯತ ಮತದಾರರು ಈ ಸಲ ಬಿಜೆಪಿ ಪರವಾಗಿ ಮತ ಲಾಯಿಸಿದ್ದಾರೆ ಎಂದು ಮಾತ್ರ ಯಾವ ಅನುಮಾನವೂ ಇಲ್ಲದೇ ಹೇಳಬಹುದು. ಇದರ ಂದೆ ಗಣಿರೆಡ್ಡಿಗಳ ಹಣದ ಜೊತೆಯಲ್ಲಿ ಅಶೋಕ ೇಣಿಯಂತಹ ಲಿಂಗಾಯತ ದಣಿಗಳ ಹಣ ಾಡಿದ್ದು ಅಷ್ಟೇ ನಿಜ.

ಕ್ಷಣದ ಪ್ರಚೋದನೆ :

ಕಳೆದ ಕೆಲವು ಚುನಾವಣೆಗಳಿಂದಲೇ ಬಿಜೆಪಿ ರಾಜ್ಯದಲ್ಲಿ ಬಹುಸಂಖ್ಯಾತರಾಗಿರುವ ಲಿಂಗಾಯತರನ್ನು ತನ್ನ ಮತ ಬ್ಯಾಂಕ್ ಮಾಡಲು ವ್ಯವಸ್ಥಿತವಾದ ಪ್ರಯತ್ನವನ್ನು ಮಾಡುತ್ತಾ ಬಂದಿತ್ತು. ಬೇರೆ ಪಕ್ಷಗಳಲ್ಲಿನ ಪ್ರಮುಖ ಲಿಂಗಾಯತ ಧುರೀಣರನ್ನು ಬಿಜೆಪಿಗೆ ಸೇರಿಸಿಕೊಳ್ಳಲು ಅದು ವಿಶೇಷ ಗಮನ ನೀಡಿತ್ತು. ಚುನಾವಣೆಗಳಲ್ಲಿ ಸ್ಪರ್ಧಿಸಲು ಲಿಂಗಾಯತರಿಗೇ ಹೆಚ್ಚೆಚ್ಚು ಟಿಕೆಟ್‌ಗಳನ್ನು ನೀಡಲಾಗುತ್ತಿತ್ತು. ಅದರ ಈ ತಂತ್ರಬದ್ಧ ಪ್ರಯತ್ನದಿಂದಾಗಿ 2004ರ ಚುನಾವಣೆಯಲ್ಲಿ 79 ಸ್ಥಾನಗಳನ್ನು ಗೆಲ್ಲುವ ಮೂಲಕ ಅದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವಂತಾಯಿತು ಮಾತ್ರವಲ್ಲ ಇನ್ನೂ ಸುಮಾರು 40 ಕ್ಷೇತ್ರಗಳಲ್ಲಿ ಅದು ಎರಡನೇ ಸ್ಥಾನವನ್ನು ಪಡೆಯಿತು.

ಯಡಿಯೂರಪ್ಪನವರಿಗೆ ಸಿಗಬೇಕಾಗಿದ್ದ ಮುಖ್ಯಮಂತ್ರಿ ಸ್ಥಾನವನ್ನು ಕೈತಪ್ಪುವಂತೆ ಮಾಡಲಾಯಿತು ಎಂಬ ಅಸಮಾಧಾನ ಲಿಂಗಾಯತ ಸಮುದಾಯವನ್ನು ಕೆಣಕಿತ್ತು. ಈ ಅನುಕಂಪದ ಅಲೆ ಚುನಾವಣೆಯುವರೆಗೂ ಜೀವಂತ ಇರುವಂತೆ ನೋಡಿಕೊಳ್ಳಲಾಯಿತು. ಬಿಜೆಪಿಯಿಂದ ಈ ಸಲ ಸ್ಪರ್ಧಿಸಲು ನೀಡಲಾದ ಸೀಟುಗಳಲ್ಲಿ ಅತಿ ಹೆಚ್ಚು ಅಂದರೆ 71 ಸೀಟುಗಳನ್ನು ಲಿಂಗಾಯತರಿಗೆ ನೀಡಲಾಯಿತು. ಲಿಂಗಾಯತರ ಮತಗಳನ್ನು ಸೆಳೆಯಲು ಯಡಿಯೂರಪ್ಪನವರೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲಾಯಿತು. ಅಷ್ಟು ಮಾತ್ರವಲ್ಲ, ಧೈರ್ಯವಿದ್ದರೆ ಕಾಂಗ್ರೆಸ್‌ನವರು ಖರ್ಗೆಯವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಿ ಎಂದು ಯಡಿಯೂರಪ್ಪನವರು ಸವಾಲು ಹಾಕುವ ಮೂಲಕ ಲಿಂಗಾಯತರ ಮತ ಬೆಂಬಲವನ್ನು ಗಟ್ಟಿಗೊಳಿಸಿಕೊಂಡರು.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗದ ನಾಯಕನನ್ನು ಶಾಸನ ಸಭೆಗೆ ಆಯ್ಕೆಯಾದ ಸದಸ್ಯರು ಆಯ್ಕೆ ಮಾಡುತ್ತಾರೆ. ಚುನಾವಣೆಯ ಪೂರ್ವದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿ, ಒಂದು ಜಾತಿಯ ಮತಗಳನ್ನು ಸೆಳೆಯಲು ಪ್ರಯತ್ನಿಸುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ. ಆದರೆ ರಾಜ್ಯದಲ್ಲಿ ಈ ಸಲ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಿದ್ದೇವೆ ಎಂದು ಬೀಗುತ್ತಿ[illegible] ಚುನಾವಣಾ [illegible]ಯೋಗ ಮತದಾರರ [illegible] ಬೀರುವ ಬಿಜೆಪಿಯ ಪ್ರಯತ್ನ[illegible] ಗಣನೆಗೆ ತೆಗೆದುಕೊಳ್ಳಲೇ ಇಲ್ಲ.

ದಾಖಲೆಯ ಬೆಂಬಲ

ಲಿಂಗಾಯತರಲ್ಲಿ ಪಂಚಮಸಾಲಿ, ಬಣಜಿಗ, ಸಾದರ ಮೊದಲಾದ ಒಳಪಂಗಡಗಳಿವೆ. ಪಂಚಮ ಸಾಲಿಯವರ ನಡುವೆಯೂ ಪಂಚಪೀಠಗಳ ಅನುಯಾಯಿಗಳು ಮತ್ತು ವಿರಕ್ತ ಪೀಠಗಳ ಅನುಯಾಯಿಗಳೆಂಬ ಬೇಧಗಳಿವೆ. ಲಿಂಗಾಯತರು ತಮ್ಮ ಒಳಪಂಗಡಗಳ ಗೆರೆಯನ್ನು ದಾಟಿ ಯಡಿಯೂರಪ್ಪನವರ ಬೆನ್ನಿಗೆ ನಿಂತಿದ್ದು ಗಮನಾರ್ಹವಾಗಿದೆ. ಹಿಂದೆ 1989ರಲ್ಲಿ ಇದೇ ರೀತಿ ಆಗಿತ್ತು. ಆಗ ಲಿಂಗಾಯತರೆಲ್ಲರೂ ತಮ್ಮ ನಡುವಿನ ಒಳ ಪಂಗಡಗಳ ಬೇಧಗಳನ್ನು ಬದಿಗಿಟ್ಟು ವೀರೇಂದ್ರ ಪಾಟೀಲರನ್ನು ಬೆಂಬಲಿಸಿದ್ದರು. ಆಗ ಕಾಂಗ್ರೆಸ್ಸಿಗೆ 178 ವಿಧಾನಸಭಾ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿತ್ತು. ಯಡಿಯೂರಪ್ಪನವರಂತೂ ಹಿಂದಿನ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿ ಮಠಗಳಿಗೆ ಅನುದಾನ ನೀಡುವ ಮೂಲಕ ತನ್ನ ಕೆಲಸವನ್ನು ಹಗುರ ಮಾಡಿಕೊಂಡಿದ್ದರು. ಇದಕ್ಕೆ ಪ್ರತಿಯಾಗಿ ಸಿದ್ಧಗಂಗಾ, ಸಿರಿಗೆರೆ, ಮೂರುಸಾವಿರಾದಿ ಮಠಗಳು ಹೊರಡಿಸಿದ ಅಪ್ಪಣೆಗಳನ್ನು ಭಕ್ತ ಸಮುದಾಯ ಚಾಚೂ ತಪ್ಪದೇ ಪಾಲಿಸಿತು. ಉತ್ತರ ಕರ್ನಾಟಕದ ಲಿಂಗಾಯತರು ಭಯ ಭಕ್ತಿಯಿಂದ ಗೌರವಿಸುವ ಹುಟ್ಟು ಕುರುಡ



ಜಾತೀಯ ಮಠಗಳ ಒಲೈಕೆಯೋ ಒಲೈಕೆ

ಸಂತರೊಬ್ಬರಿಗೆ ಈ ಸಲ ಬಿಜೆಪಿ ಬರುತ್ತದೆ ಎಂದು ಮೊದಲೇ ಕಾಣಿಸಿತಂತೆ. ಅವರ ದಿವ್ಯ ವಾಣಿಯನ್ನು ಕರಪತ್ರಗಳಲ್ಲಿ ಮುದ್ರಿಸಿ ಗದಗ, ಧಾರವಾಡ, ಹಾವೇರಿ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಮನೆ ಮನೆಗಳಿಗೆ ತಲುಪಿಸಲಾಯಿತು. ಇವೆಲ್ಲದರ ಪರಿಣಾಮವಾಗಿ ಕಟ್ಟಾ ಕಾಂಗ್ರೆಸ್ಸಿಗರಾಗಿದ್ದ ಹಾಗೂ ಜನತಾ ದಳದಲ್ಲಿದ್ದ ಲಿಂಗಾಯತರು ಸಹ ಯಡಿಯೂರಪ್ಪನವರ ಬೆಂಬಲಕ್ಕೆ ನಿಂತರು. ಶಿಕಾರಿಪುರದಲ್ಲಿ ಯಡಿಯೂರಪ್ಪ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿ(ಎಸ್) ಅಭ್ಯರ್ಥಿಗಳನ್ನು ಕಣಕ್ಕಿಳಿಸದೆ ಸಮಾಜವಾದಿ ಪಕ್ಷದ ಬಂಗಾರಪ್ಪ ಅವರನ್ನು ಬೆಂಬಲಿಸಿದ್ದು ಲಿಂಗಾಯತರ ವಿರುದ್ಧದ ಪಿತೂರಿ ಎಂದು ಬಿಂಬಿಸಿ ಶಿಕಾರಿಪುರ ಕ್ಷೇತ್ರದ ಲಿಂಗಾಯತರನ್ನು ಪಕ್ಷಾತೀತವಾಗಿ ಯಡಿಯೂರಪ್ಪನವರ ಪರವಾಗಿ ಒಂದುಗೂಡಿಸಲಾಯಿತು.

ಲಿಂಗಾಯತ ಸಮುದಾಯದ ಪ್ರಾಬಲ್ಯ ಇರುವ ಮಧ್ಯ ಕರ್ನಾಟಕ, ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕಗಳ ಬಹುತೇಕ ಜಿಲ್ಲೆಗಳಲ್ಲಿ ಲಿಂಗಾಯತರು ಯಡಿಯೂರಪ್ಪನವರು ಲಿಂಗಾಯತರು ಎಂಬ ಕಾರಣಕ್ಕೆ ಬಿಜೆಪಿಯನ್ನು ಬೆಂಬಲಿಸಿರುವುದು ಸ್ಪಷ್ಟ. ಬಿಜೆಪಿ ಸ್ಪರ್ಧೆಗಿಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಒಟ್ಟು 29 ಜನ ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿಯೂ ಆಯಾ ಕ್ಷೇತ್ರದ ಲಿಂಗಾಯತರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಇಬ್ಬರು ಲಿಂಗಾಯತ ಅಭ್ಯರ್ಥಿಗಳ ನಡುವೆ ಆಯ್ಕೆ ಮಾಡಬೇಕಾಗಿ ಬಂದಾಗ ಬಿಜೆಪಿಯ ಲಿಂಗಾಯತ ಅಭ್ಯರ್ಥಿಯನ್ನೆ ಗೆಲ್ಲಿಸಿದ್ದಾರೆ. ಉದಾಹರಣೆಗೆ ಹುಬ್ಬಳ್ಳಿಯಲ್ಲಿ ಕಾಂಗ್ರೆಸಿನ ಶಂಕರ ಮುನವಳ್ಳಿ ಅವರನ್ನು ಸೋಲಿಸಿದ್ದಾರೆ, ಬಿಜೆಪಿಯ ಜಗದೀಶ ಶೆಟ್ಟರ್ ಆಯ್ಕೆಯಾಗಿದ್ದಾರೆ. ಗಂಗಾವತಿಯಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜನತಾದಳದ ಲಿಂಗಾಯತರು ಒಂದಾಗಿ ಜನತಾದಳದ ಅನ್ಸಾರಿಯನ್ನು ಸೋಲಿಸಿದ್ದಾರೆ. ಹಾನಗಲ್ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯನ್ನು ಎರಡನೇ ಅವಧಿಗೆ ಗೆಲ್ಲಿಸುವ ಪರಿಪಾಠ ಇರಲಿಲ್ಲ. ಈ ಸಲ ಕಾಂಗ್ರೆಸ್ಸಿನ ಮನೋಹರ ತಾಸಿಲ್ದಾರ್ ಗೆಲ್ಲುತ್ತಾರೆ ಎಂಬ ವಾತಾವರಣವಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಯಡಿಯೂರಪ್ಪರವರನ್ನು ಮುಖ್ಯಮಂತ್ರಿ ಮಾಡುವುದಕ್ಕಾಗಿ ಕ್ಷೇತ್ರದ ಪಂಚಮಶಾಲಿ ಲಿಂಗಾಯತರು, ಸಾದರ ಲಿಂಗಾಯತರು ಮತ್ತು ಬಣಜಿಗ ಲಿಂಗಾಯತರು ಸೇರಿ ಬಣಜಿಗ ಜಾತಿಗೆ ಸೇರಿದ ಉದಾಸಿಯವರನ್ನು ಎರಡನೇ ಅವಧಿಗೆ ಗೆಲ್ಲಿಸಿದ್ದಾರೆ. ಬಳ್ಳಾರಿಯಲ್ಲಿ ಗಣಿ ರೆಡ್ಡಿಗಳು ಹರಿಸಿದ ಹಣದಿಂದ ಬಿಜೆಪಿಗೆ ಗೆಲುವಾಯಿತು ಎನ್ನುವುದು ಪೂರ್ಣ ಸತ್ಯವಲ್ಲ. ಸಂತೋಷ್ ಲಾಡ್ ಅಷ್ಟೇ ಹಣವನ್ನು ಚೆಲ್ಲಿದ್ದಾರೆ. ಆದರೆ ಇಲ್ಲಿಯ ಲಿಂಗಾಯತರು ತಮ್ಮ ಒಳಪಂಗಡಗಳ ಪ್ರತ್ಯೇಕ ಹಿತಾಸಕ್ತಿಗಳನ್ನು ಮೀರಿ ಒಕ್ಕೊರಲಿನಿಂದ ಯಡಿಯೂರಪ್ಪನವರ ಪರವಾಗಿ ಮತ ಚಲಾಯಿಸಿದ್ದು ಬಿಜೆಪಿಗೆ ಲಾಭವಾಗಿದೆ. ಚೆನ್ನಗಿರಿ ಕ್ಷೇತ್ರದಲ್ಲಿ ಜೆ.ಎಚ್.ಪಟೇಲರ ಮಗನಾದ ಮಹಿಮಾ ಪಟೇಲರನ್ನು ತಿರಸ್ಕರಿಸಿ ಯಡಿಯೂರಪ್ಪನಿಗಾಗಿ ಬಿಜೆಪಿಯ ವಿರೂಪಾಕ್ಷಪ್ಪರನ್ನು ಗೆಲ್ಲಿಸಿದ್ದಾರೆ.

ತಾತ್ಕಾಲಿಕ ವಿದ್ಯಮಾನ : ಜಾತಿ ಆಧಾರಿತ ಮತ ಬ್ಯಾಂಕ್ ಉಂಟು ಮಾಡುವ ಈ ಪ್ರವೃತ್ತಿ ಅಪಾಯಕಾರಿಯಾಗಿದೆ. ಇಲ್ಲಿ ಒಂದು ರಾಜಕೀಯ ಪಕ್ಷದ ಸಿದ್ಧಾಂತ, ಅದರ ಧೋರಣೆಗಳು ಗೌಣವಾಗುತ್ತವೆ. ಜಾತಿ ಆಧಾರಿತ ಮುಖಂಡರನ್ನು ಅದು ಮೇಲಕ್ಕೆ ಎತ್ತುತ್ತದೆ. ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ಜಾತಿ ಅಸಮಾನತೆಯ ಪಿಡುಗನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ನಮ್ಮ ದೇಶದಲ್ಲಿ ಕಮ್ಯೂನಿಸ್ಟ್ ಪಕ್ಷಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಬಲಪಂಥೀಯ ರಾಜಕೀಯ ಪಕ್ಷಗಳು ಅಧಿಕಾರವನ್ನು ಗಟ್ಟಿಸಿಕೊಳ್ಳಲು [illegible] ಬಂದಿವೆ. ಇತ್ತೀಚಿನ ದಿನಗಳಲ್ಲಿ ಈ ಪ್ರವೃತ್ತಿ ಇನ್ನಷ್ಟು ವ್ಯಾಪಕಗೊಳ್ಳುತ್ತಿರುವುದು ಆತಂಕದ ವಿಷಯವೇ ಆಗಿದೆ.

ಆದರೆ, ಕರ್ನಾಟಕದಲ್ಲಿ ಈ ಸಲ ಜಾತಿ ಸಮೀಕರಣದಿಂದಾಗಿ ಬಿಜೆಪಿಗೆ ಲಾಭವಾಗಿರಬಹುದು. ಇದೊಂದು ತಾತ್ಕಾಲಿಕ ವಿದ್ಯಮಾನವಷ್ಟೇ. ಒಂದು ಜಾತಿಯ ಜನರನ್ನು ಒಂದಾಗಿ ಕಟ್ಟಿಹಾಕಲು ಸಾಧ್ಯವಿಲ್ಲ. ಒಂದೇ ಜಾತಿಯ ಜನರ ನಡುವೆಯೂ ವಿಭಜನೆ ಇರುತ್ತದೆ. ಅವರ ನಡುವೆ ಬೇರೆ ಬೇರೆ ವರ್ಗಗಳಿರುತ್ತವೆ. ಆ ವರ್ಗಗಳ ಹಿತಾಸಕ್ತಿಗಳು ಬೇರೆ ಬೇರೆಯಾಗಿರುತ್ತವೆ. ತಮ್ಮ ಭಿನ್ನವಾದ ಹಿತಾಸಕ್ತಿಗಳ ಈಡೇರಿಕೆಗಾಗಿ ಅವರು ಭಿನ್ನವಾದ ದಾರಿಯನ್ನು ಹುಡುಕುವುದು ಅನಿವಾರ್ಯವಾಗುತ್ತದೆ.

ನಿತ್ಯಾನಂದಸ್ವಾಮಿ

ಯಡಿಯೂರಪ್ಪನವರು ಮ[illegible] ಮಂತ್ರಿಯಾಗುವುದರಿಂದ ರಾಜ್ಯದ ಬಡ ಲಿಂಗಾಯತರಿಗೆ ಏನು ಪ್ರಯೋಜನ? ಹಿಂದೆಯೂ ಪ್ರಮುಖ ಲಿಂಗಾಯತ ಮುಖಂಡರು ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಕನಿಷ್ಟ ಅವರವರ ಕ್ಷೇತ್ರಗಳಲ್ಲಿನ ಬಡ ಲಿಂಗಾಯತರಿಗೆ ಏನಾದರೂ ಲಾಭ ಆಗಿದೆಯಾ? ಇದೆಲ್ಲವೂ ನಿಧಾನವಾಗಿ ಜನರ ಅನುಭವಕ್ಕೆ ಬರುತ್ತದೆ. ಆಗ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ.

ನಾವು ಯಾರೂ ಇಂತಹ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಹಾಕಿಕೊಂಡಿರುವುದಿಲ್ಲ. ಆಕಸ್ಮಿಕವಾಗಿ ಯಾವುದಾದರೊಂದು ಸಮುದಾಯದಲ್ಲಿ ಹುಟ್ಟಿರುತ್ತೇವೆ. ನಮ್ಮ ಆಯ್ಕೆಯೇ ಅಲ್ಲದ ಜಾತಿಯ ಬಗ್ಗೆ ನಾವು ಅಭಿಮಾನ ಬೆಳೆಸಿಕೊಳ್ಳುವುದರಲ್ಲಿ ಏನು ಅರ್ಥವಿದೆ? ನಾವು ಬೆಳೆಸಿಕೊಳ್ಳುವ ಜಾತಿ ಅಭಿಮಾನದಿಂದ ನಮ್ಮ ನಡುವೆ ನಮ್ಮ ಜಾತಿಯ ಕೆಲವು ನಾಯಕರು ಬೆಳೆದು ಬರಲು ಕಾರಣವಾಗುತ್ತದೆ. ಅವರು ತಮ್ಮ ಸ್ವಂತ ಲಾಭಕ್ಕಾಗಿ ಜಾತಿ ಜನರ ಅಭಿಮಾನವನ್ನು ದುರುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ. ಜಾತಿಯನ್ನು ಏಣಿಯಾಗಿ ಬಳಸಿ ಅವರು ಅಧಿಕಾರದ ಅಂತಸ್ತುಗಳನ್ನು ತಲುಪುತ್ತಾರೆ. ತನ್ನನ್ನು ತಮ್ಮ ಹೆಗಲ ಮೇಲೆ ಕುಳ್ಳಿರಿಸಿ ಮೆರೆಸಿದ ತನ್ನ ಜಾತಿಯ ಜನರನ್ನು ಅವರು ಅನಂತರ ಮರೆತುಬಿಡುತ್ತಾರೆ.

ಜಾತಿ ಮುಖಂಡರು ಜನರ ಜಾತಿ ಆಧಾರಿತ ಪ್ರಜ್ಞೆಯನ್ನು ಬಂಡವಾಳ ಮಾಡಿಕೊಳ್ಳುವ ಪ್ರವೃತ್ತಿ ಇದಾಗಿದೆ. ಈ ಸಲ ಯಡಿಯೂರಪ್ಪನವರು ಮಾಡಿದ ಹಾಗೆ. ಆದರೆ ಜನತೆ ತಮ್ಮ ಅನುಭವದಿಂದ ತಮ್ಮ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತದೆ. ಜಾತಿ ಮುಖಂಡರನ್ನು ನಂಬಿ ಮೋಸ ಹೋದವರು ಪರ್ಯಾಯವನ್ನು ಹುಡುಕುತ್ತಾರೆ. ತಾವು ಎದುರಿಸುತ್ತಿರುವ ಸಮಸ್ಯೆಗಳನ್ನೇ ಬೇರೆ ಜಾತಿಗಳಲ್ಲಿರುವ ಜನಗಳು ಸಹ ಅನುಭವಿಸುತ್ತಿರುವುದನ್ನು ಅವರು ಕಾಣುತ್ತಾರೆ. ಬೇರೆ ಬೇರೆ ಜಾತಿಗಳಲ್ಲಿ ಹರಡಿರುವ ಅವಕಾಶ [illegible], ಬಡವರು ಒಂದಾಗುತ್ತಾರೆ. ಜಾತಿ [illegible] ಮತ ಬ್ಯಾಂಕ್‌ಗಳನ್ನು [illegible]ರೆ. ಸಮಾನ ಪ್ರಶ್ನೆಗಳಿಗಾಗಿ ಜಾತ್ಯಾತೀತವಾಗಿ

ಪುಟ 16ಕ್ಕೆ

ಹಾಸನ : ಗುಂಡಿ ಬಿದ್ದ ರಸ್ತೆ - ಪ್ರತಿಭಟನೆ

ರಾಜ್ಯದಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿರುವ ಜಿಲ್ಲೆ ಎಂದು ಜಿಲ್ಲೆಯ ರಾಜಕಾರಣಿಗಳು ಪ್ರಚಾರ ಮಾಡಿಕೊಂಡು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ಜಿಲ್ಲೆ ಹಾಸನ. ಆದರೆ ನಿಜವಾಗಿಯೂ ಹಾಸನ ಅಭಿವೃದ್ಧಿಯಾಗಿದೆಯೇ ಎಂಬುದನ್ನು ಹಾಸನ ನಗರದ ರಸ್ತೆಗಳು ತೋರಿಸುತ್ತಿವೆ. ಹಾಸನದ ಹಲವಾರು ರಸ್ತೆಗಳು ಕಳಪೆ ಕಾಮಗಾರಿಯಿಂದಾಗಿ ಗುಂಡಿ ಬಿದ್ದು ಮಳೆಗಾಲ ಪ್ರಾರಂಭವಾಯಿತೆಂದರೆ ನಗರದ ಬಹುತೇಕ ರಸ್ತೆಗಳು ನೀರಿನಿಂದ ತುಂಬಿ ರಸ್ತೆಗಳು ಮಾಯವಾಗಿ ಕೆರೆಗಳಂತೆ ಕಾಣುತ್ತಿವೆ. ಈ ರೀತಿಯ ರಸ್ತೆಗಳಿಂದಾಗಿ ಜನಸಾಮಾನ್ಯರು, ಬಹಳ ತೊಂದರೆಗೊಳಗಾಗಿ ಅಪಘಾತಗಳು ಸಂಭವಿಸಿ ಸಾವು-ನೋವುಗಳಾಗಿವೆ. ಅಧಿಕಾರಿಗಳ ನಿರ್ಲಕ್ಷಕ್ಕೆ ಒಳಗಾಗಿರುವ ರಸ್ತೆಗಳಲ್ಲಿ ಹಾಸನ-ಗೊರೂರು ಮುಖ್ಯರಸ್ತೆಯೂ ಒಂದು ಈ ರಸ್ತೆ ಸಂಪೂರ್ಣ ಹಾಳಾಗಿದ್ದು ಸಂತೆ ಮೈದಾನದ ಭಾಗ ಮತ್ತು ರೈಲ್ವೆ ಸೇತುವೆಯ ಇಳಿಜಾರು ಭಾಗದಲ್ಲಿ ಬಹುದೊಡ್ಡ ಹಳ್ಳಗಳಾಗಿ ನೀರು ತುಂಬಿ ರಸ್ತೆ ಕಾಣದೆ ಅಪಘಾತಗಳು ಸಂಭವಿಸಿದ್ದರೂ ಕಂಡು ಕಾಣದಂತೆ ನಿರ್ಲಕ್ಷ ತೋರಿದ ಅಧಿಕಾರಿಗಳು ಮತ್ತು ಜಿಲ್ಲಾಡಳಿತಕ್ಕೆ ಹಿಡಿ ಶಾಪ ಹಾಕುತ್ತಾ ಬಿದ್ದು-ಬಿದ್ದು ಜನಸಾಮಾನ್ಯರು ತಿರುಗುತ್ತಿದ್ದರು. ಇಂತಹ ಸಂದರ್ಭದಲ್ಲಿ ಡಿವೈಎಫ್‌ಐನ ಸ್ಥಳೀಯ ಗೊರೂರು ರಸ್ತೆಯ (ವ್ಯಾನ್ ಸ್ಟ್ಯಾಂಡ್) ಘಟಕದ ನೇತೃತ್ವದಲ್ಲಿ ದಿನಾಂಕ:03.06.08ರ ಮಂಗಳವಾರ ಸುಮಾರು 11-30ರ ಸಂದರ್ಭದಲ್ಲಿ ನೂರಾರು ಕಾರ್ಯಕರ್ತರು ಹಾಳಾಗಿದ್ದ ರಸ್ತೆಯ ಗುಂಡಿಯೊಳಗೆ ಇಳಿದು ವಾಹನಗಳನ್ನು ತಡೆದು 30 ನಿಮಿಷಗಳ ಕಾಲ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಸಂತೆಯ ದಿನವಾದ ಕಾರಣ ಜನ ಸಾಮಾನ್ಯರು ಸಹ ವ್ಯಾಪಕ ಬೆಂಬಲ ಸೂಚಿಸಿ ಡಿವೈಎಫ್‌ಐನ ಈ ಹೋರಾಟ ಬೆಂಬಲಿಸಿದರು. ಈ ಪ್ರತಿಭಟನೆಯಲ್ಲಿ ಡಿವೈಎಫ್‌ಐನ ಜಿಲ್ಲಾಧ್ಯಕ್ಷ ಬಿ.ಜಿ.ಗಿರೀಶ, ಉಪಾಧ್ಯಕ್ಷ ಅರವಿಂದ್,



ತರಾತುರಿಯಲ್ಲಿ ಸಿದ್ದವಾದ ರಸ್ತೆ

ಖಜಾಂಚಿ ವಸಂತಕುಮಾರ್, ಎಸ್‌ಎಫ್‌ಐನ ರವಿ ಸಾದೇನಹಳ್ಳಿ, ಸ್ಥಳೀಯ ಘಟಕದ ವಾಸಣ್ಣ, ಎಸ್.ಕೃಷ್ಣ ಚೋಟ, ನಾಗೇಂದ್ರ ಮುಂತಾದವರು ಭಾಗವಹಿಸಿದರು. ಪ್ರತಿಭಟನಾಕಾರರನ್ನು ಕುರಿತು ಮಾತನಾಡಿದ ಜಿಲ್ಲಾಧ್ಯಕ್ಷ ಗಿರೀಶ್ ಹಾಸನ ನಗರದ ಹಲವಾರು ರಸ್ತೆಗಳು ಸಂಪೂರ್ಣ ಹಾಳಾಗಿದ್ದರೂ



ರಸ್ತೆ ಹೊಂಡದಲ್ಲಿ ಡಿವೈಎಫ್‌ಐ ಪ್ರತಿಭಟನೆ

ಸಹ ನಗರಸಭೆ ಮತ್ತು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ಮತ್ತು ಕಳಪೆ ಕಾಮಗಾರಿಗಳಿಂದಾಗಿ ಹಾಳಾಗಿರುವ ರಸ್ತೆಗಳನ್ನು ತಕ್ಷಣ ದುರಸ್ತಿ ಮಾಡಿಸಲು ಕ್ರಮ ಕೈಗೊಳ್ಳಬೇಕು. ಒಂದು ವಾರದ ಒಳಗಾಗಿ ನಗರದ ರಸ್ತೆಗಳನ್ನು ಸರಿಪಡಿಸದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಡಿವೈಎಫ್‌ಐ ಪ್ರತಿಭಟನೆ ಮುಗಿದ 3-4 ಗಂಟೆಗಳ ನಂತರ ತರಾತುರಿಯಲ್ಲಿ ಹಾಸನ-ಗೊರೂರು ರಸ್ತೆ ಗುಂಡಿಗಳನ್ನು ಮುಚ್ಚಿದರು.. ಈ ಮಣ್ಣು ಮುಚ್ಚುವ ಕೆಲಸವನ್ನು ಕಳಪೆಯಾಗಿ ಮಾಡಿದರು. ಇದರ ಬಗ್ಗೆ ಸಹ ಡಿವೈಎಫ್‌ಐ ಜಿಲ್ಲಾ ಸಮಿತಿಯು ದೂರು ನೀಡಲು ಸಜ್ಜಾಗುತ್ತಿದ್ದ ಮಾಹಿತಿ ತಿಳಿದ ಅಧಿಕಾರಿಗಳು ತಕ್ಷಣ ದಿನಾಂಕ:04.06.08ರಂದು ಜೆ.ಸಿ.ಬಿ. ಯಂತ್ರ ಬಳಸಿ ರಸ್ತೆ ಪಕ್ಕದಲ್ಲಿ ಮಳೆ ನೀರು ಹರಿಯಲು ಕಾಲುವೆ ಮಾಡಿ ಜಲ್ಲಿ ಜಲ್ಲಿಪುಡಿ ಬಳಸಿ ರಸ್ತೆ ನಿರ್ಮಾಣ ಮಾಡಿದರು. ಈ ರಸ್ತೆಯಲ್ಲಿ ತಿರುಗಾಡುತ್ತಿದ್ದ ಜನಸಾಮಾನ್ಯರು ಡಿವೈಎಫ್‌ಐನ ಹೋರಾಟದ ಭಾಗವಾಗಿ ಸರಿಯಾದ ರಸ್ತೆ ಕಂಡವರು ಡಿವೈಎಫ್‌ಐ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. ಇಷ್ಟಾದರೂ ಸಹ ನಗರದ ಬಹುತೇಕ ರಸ್ತೆಗಳು ಇದೇ ಸ್ಥಿತಿಯಲ್ಲಿದ್ದು ಇಂತಹ ರಸ್ತೆಗಳನ್ನು ತಕ್ಷಣ ಸರಿಪಡಿಸದಿದ್ದಲ್ಲಿ ಹಂತ-ಹಂತವಾಗಿ ಉಗ್ರ ಹೋರಾಟ ನಡೆಸುವುದಾಗಿ ಡಿವೈಎಫ್‌ಐ ಜಿಲ್ಲಾ ಸಮಿತಿ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದೆ.

– ಬಿ.ಜಿ.ಗಿರೀಶ್, ಹಾಸನ

ಸಿಂಧನೂರು: ಮೇ ದಿನಾಚರಣೆ

ವಿಶ್ವ ಕಾರ್ಮಿಕರ 122ನೇ ದಿನಾಚರಣೆಯನ್ನು ವಿಶ್ವದಾದ್ಯಂತ ಕಾರ್ಮಿಕ ವರ್ಗ ಯಶಸ್ವಿಯಾಗಿ ಆಚರಿಸಿದ್ದಾರೆ. ಅದೇ ರೀತಿ ಭಾರತದ ಮೂಲೆ ಮೂಲೆಗಳಲ್ಲಿ ಕಾರ್ಮಿಕರ ಕೆಂಬಾವುಟಗಳು ಹಾರಾಡಿದವು. ಕರ್ನಾಟಕದ ಮಟ್ಟಿಗೆ ಇದೊಂದು ಬೇರೆಯಾಗಿಯೇ ಪರಿಣಮಿಸಿತು. ಮೂರು ಪಕ್ಷಗಳ ಮೂರಾಬಟ್ಟೆ ಆಡಳಿತದಿಂದ ಮಧ್ಯಂತರ ಚುನಾವಣೆಯನ್ನು ಎದುರಿಸಬೇಕಾಯ್ತು.

ಇದೆಲ್ಲದರ ನಡುವೆ ಸಿಐಟಿಯು ತಾಲ್ಲೂಕು ಸಮಿತಿ ಮೇ 1 ರಂದು ಸಿಂಧನೂರು ನಗರದ ಮತ್ತು ತುರಿವಾಳದ ಕಾರ್ಮಿಕರ ಆಪೀಸುಗಳ ಮುಂದೆ ಧ್ವಜಾರೋಹಣ ಮಾಡುವುದರ ಮೂಲಕ ಕಾರ್ಮಿಕರ ದಿನಾಚರಣೆಗೆ ಚಾಲನೆ ನೀಡಿತು. ಚುನಾವಣೆ ಮುಗಿದ ನಂತರ 29.5.2008ರಂದು ಸಾಲಗುಂದ ಗ್ರಾಮದಲ್ಲಿ ದುಡಿಯುವ ಜನರ ಮಧ್ಯೆ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಭುತ್ವದ ಧೋರಣೆ, ಜನರ ಸಂಕಷ್ಟ, ಮೇ ದಿನಾಚರಣೆಯ ಮಹತ್ವ ಕುರಿತು ಮುದ್ರಿಸಿದ 1000 ಕರಪತ್ರ ಹಂಚುತ ಮದ್ಯಾಹ್ನ 1 ಗಂಟೆಗೆ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸುತ್ತಾಡಿ 3.30ಕ್ಕೆ ವೇದಿಕೆಗೆ ತಲುಪಿತು. ಮೆರವಣಿಗೆಯಲ್ಲಿ ಸುಮಾರು 300 ಜನ ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆ ಹೆಚ್.ವಿ.ಗುಡಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ, ಕಾಂ.ನರಸಿಂಹಪ್ಪ ಮಾತನಾಡುತ್ತಾ ಕಾರ್ಮಿಕ ವರ್ಗಕ್ಕೆ ಎದುರಾಗಿರುವ ಸವಾಲು ಮತ್ತು ಅಸಂಘಟಿತ ಕಾರ್ಮಿಕರ ಇಂದಿನ ಬವಣೆ, ಚಿಕಾಗೋ ನಗರದ ಕಾರ್ಮಿಕರ ಧೀರೋದ್ಧಾತ ಹೋರಾಟ ಕುರಿತು ವಿವರಿಸಿದರು. ಕಾಂ.ನಾರಾಯಣಪ್ಪ ಕಿಲ್ಲದ ಜನರ ಸಮಸ್ಯೆಗಳನ್ನು ವಿವರಿಸುತ್ತಾ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ಬೆಲೆ ಏರಿಕೆ ವಿರುದ್ಧ ಮತ್ತು ರೇಶನ್ ವ್ಯವಸ್ಥೆ ಬಲಪಡಿಸುವಂತೆ ಹೋರಾಡಲು ಕರೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಕಾಂ.ಹೆಚ್.ವಿ. ಗುಡಿಯವರು ಜನಪ್ರತಿನಿಧಿಗಳ ಡೋಂಗಿತನವನ್ನು ವಿವರಿಸುತ್ತಾ ಅವರ ಕಾರ್ಯವೈಖರಿಯ ಬಗ್ಗೆ ಎಳೆಎಳೆಯಾಗಿ ಬಿಡಿಸಿಟ್ಟರು. ಹೋರಾಟಗಳನ್ನು ಮುಂದೆ ಕೊಂಡೊಯ್ಯುವಪ್ರತಿಜ್ಞೆ ಮಾಡಲಾಯಿತು. ವೇದಿಕೆಯ ಮೇಲೆ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಮಕ್ಬೂಲ ಸಾಬ. ಕೃಷಿ ಕೂಲಿಕಾರ ಸಂಘದ ಅಧ್ಯಕ್ಷ (ದೊ) ಹುಸೇನಪ್ಪ, ಹಮಾಲರ ಸಂಘದ ಅಧ್ಯಕ್ಷರು ಯಂಕಣ್ಣ ಮತ್ತು ಶರಣಯ್ಯಸ್ವಾಮಿ ಡಿವೈಎಫ್‌ಐ ಅಧ್ಯಕ್ಷ ಅಪ್ಪಣ ಕಾಂಬ್ಳೆ ಮತ್ತು ಗ್ರಾಮದ ಮುಖಂಡರು ಆಸಿನರಾಗಿದ್ದರು.

– ನರಸಿಂಹಪ್ಪ, ಸಿಂಧನೂರು

ಢೋಂಗಿ ಭರವಸೆಗಳು.....

ಪುಟ 3 ರಿಂದ

ಇದರೊಂದಿಗೆ ಭೂಗಳ್ಳರು, ಕಲಬೆರಕೆದಾರರು, ಕಾಳಸಂತೆಕೋರರು, ಕಳ್ಳಭಟ್ಟಿ ಸಮಾಜಘಾತುಕರನ್ನು ಇಲ್ಲವಾಗಿಸುವುದಾಗಿ ಸರ್ಕಾರ ಹೇಳಿರುವುದು ಒಂದು ಹಾಸ್ಯಾಸ್ಪದವಾದ ಸಂಗತಿಯಾಗಿದೆ. ಇದರಂತೆ ಕ್ರಮ ವಹಿಸಿದರೆ ಈ ಸರ್ಕಾರದಲ್ಲೇ ಇರುವ ಡಜನ್‌ಗಟ್ಟಲೆ ಸಚಿವರು, ಎರಡಂಕಿಯಲ್ಲಿ ಶಾಸಕರು 'ಇಲ್ಲ'ವಾಗಬೇಕಾಗುತ್ತದೆ. ಅಂತಹವರ ಹಣ, ಕೃಪೆಯಿಂದ ತುಂಬಿ ತುಳುಕಿ, ಸರ್ಕಾರದ ರಚನೆಗೂ ಕಾರಣವಿರುವಾಗ, ಎಲ್ಲೆಡೆ ತೀವ್ರ ಟೀಕೆಗೆ ಗುರಿಯಾಗಿರುವಾಗ 'ಕುಂಬಳಕಾಯಿ ಕಳ್ಳ ತಾನಲ್ಲ' ಎಂದು ತೋರಿಸುವ ಕಸರತ್ತು ಈ ಸರ್ಕಾರದ್ದು.

ರಾಜ್ಯಪಾಲರ ಭಾಷಣದಲ್ಲಿ ಎದ್ದು ಕಾಣುವ ಗಂಭೀರ ಲೋಪವೆಂದರೆ ಕಾರ್ಮಿಕ ವರ್ಗ, ದುಡಿಯುವ ಜನತೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಏನೊಂದೂ ಪ್ರಸ್ತಾಪವಿಲ್ಲದಿರುವುದು. ಕೋಟ್ಯಾಂತರ ಅಸಂಘಟಿತ ಕಾರ್ಮಿಕರ ಬವಣೆ ಈ ಸರ್ಕಾರಕ್ಕೆ ಒಂದು ಕಾಳಜಿಯೇ ಅಲ್ಲ ಎಂಬುದು ಈ ಸರ್ಕಾರ ಯಾರ ಹಿತ ಕಾಪಾಡಲಿದೆ ಎಂಬುದನ್ನು ತೋರಿಸುತ್ತದೆ. ಆದರಂತೆ ರಾಜ್ಯದ ರೈತಾಪಿ ಜನತೆ ಎದುರಿಸುತ್ತಿರುವ ತೀವ್ರ ಕೃಷಿ ಬಿಕ್ಕಟ್ಟಿನ ಬಗ್ಗೆ, ನಿತ್ಯವೂ ಸಾಗಿರುವ ರೈತರ ಆತ್ಮಹತ್ಯೆ ತಡೆಯುವ ಬಗ್ಗೆ ಕಬ್ಬು, ತರಕಾರಿ ಹಾಗೂ ವಾಣಿಜ್ಯ ಬೆಳೆಗಾರರ ಬವಣೆಗಳ ಬಗ್ಗೆ ಯಡಿಯೂರಪ್ಪನವರಿಗೆ ಏನೂ ಕಾಳಜಿ ಇಲ್ಲವಾಗಿದೆ. ಹಸಿರುಶಾಲು ಹೊದ್ದು, ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ಬಿಟ್ಟ[illegible] ಮಾಧ್ಯಮಗಳಲ್ಲಿ ಸುದ್ದಿಯಾಗಬಹುದೇ ಹೊರತು ರೈತಾಪಿಗಳನ್ನು ಉಳಿಸಲಾಗುವುದಿಲ್ಲ. ಇನ[illegible] ಕೈಗಾರಿಕಾ ಬಿಕ್ಕಟ್ಟು, ನಿರುದ್ಯೋಗ ಪ್ರಶ್ನೆಯ ಪ್ರಸ್ತಾಪವೂ ಇಲ್ಲ. ಅದರಂತೆ ಗಣಿ, ಶಿಕ್ಷಣ[illegible] ಮಾಫಿಯಾಗಳನ್ನು ಮಣಿಸುವ ಮಾತು ದೂರವ[illegible] ಉಳಿದಿದೆ. ಒಟ್ಟಾರೆ ರಾಜ್ಯಪಾಲರ ಮೂಲ[illegible] ಘೋಷಿಸಿರುವ ಸರ್ಕಾರದ ಕಾರ್ಯಸೂಚಿ ಭಾಷ[illegible] ಜನ ಕಾಳಜಿ ಇಲ್ಲದ, ಒಣ ಭರವಸೆಗಳ ಕಸರತ್ತ[illegible] ಇದೇ ಹೊತ್ತಿನಲ್ಲಿ ಈ ಸಂಘ ಪರಿವಾ[illegible] ಸಾರ್ವಜನಿಕರೆದುರು ವಿಷಯಗಳನ್ನು ಪ್ರಸ್ತಾಪಿಸುವಾಗ ಅತ್ಯಂತ ಚಾಣಾಕ್ಷತೆಯಿಂದ ಹೆ[illegible] ಇಡುವ ತಂತ್ರ ಅನುಸರಿಸುತ್ತಿದೆ. ಈಗಿನ ಜನಾದೇ[illegible] ಸಂಘಪರಿವಾರದ 'ಹಿಂದುತ್ವ'ದ ಅಜೆಂಡಾ[illegible] ಅಲ್ಲವಾಗಿರುವುದರಿಂದ ಅದನ್ನು ನೇರವಾ[illegible] ಪ್ರಸ್ತಾಪಿಸದೇ ಸಂದರ್ಭಗಳಲ್ಲೇ ಅದನ್ನು ನೂಕ[illegible] ಹೊಂಚುಹಾಕಿದೆ.

ಈ ಸರ್ಕಾರದ ಎರಡೆಳೆ ನಾಲಿಗೆಯ ಕಾರ್ಯಸೂಚಿಯು ವಿರುದ್ಧ ಜಾಗೃತಿ ಹಾಗೂ ಪ್ರತಿರೋಧ ಇಂದಿನ ಅವಶ್ಯಕತೆ. ○

ಪೆಟ್ರೋಲ್,ಡೀಸೆಲ್ ಮೇಲಿನ ತೆರಿಗೆ ಇಳಿಸಲು ಆಗ್ರಹ

ಪೆಟ್ರೋಲ್ ಮತ್ತು ಡೀಸೆಲ್ ಮೆಲೆ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ತೆರಿಗೆ ಇರುವುದರಿಂದ ಕೂಡಲೇ ಕಡಿತಗೊಳಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸರ್ಕಾರವನ್ನು ಒತ್ತಾಯಿಸುತ್ತದೆ. ರಾಜ್ಯದಲ್ಲಿ ಕ್ರಮವಾಗಿ ಶೇ 64 ಮತ್ತು ಶೇ 32 ತೆರಿಗೆ ವಿಧಿಸಲಾಗುತ್ತಿದ್ದು ಇದರಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ದೇಶದಲ್ಲೆ ಅತೀ ಹೆಚ್ಚಾಗಿದೆ. ನೆರೆಯ ರಾಜ್ಯಗಳಲ್ಲಿ ತೆರಿಗೆ ದರವು ಕರ್ನಾಟಕಕ್ಕಿಂತ ತೀರಾ ಕಡಿಮೆ ಇದೆ.

ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕನಿಷ್ಟ ಪರಿಹಾರ ನೀಡಲು ಕರ್ನಾಟಕ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ದರವನ್ನು ದೇಶದಲ್ಲಿ ಅತೀ ಕಡಿಮೆ ತೆರಿಗೆ ವಿಧಿಸುತ್ತಿರುವ ರಾಜ್ಯದ ಮಟ್ಟಕ್ಕೆ ಇಳಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಬಸ್ ದರ ಏರಿಕೆ ಬೇಡ : ಯಾವುದೇ ಕಾರಣಕ್ಕೂ ಬಸ್ ದರ ಹೆಚ್ಚಿಸಬಾರದೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸರ್ಕಾರವನ್ನು ಒತ್ತಾಯಿಸುತ್ತದೆ.

ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣ ವಚನ - ಅಸಿಂಧು ಎಂದು ಘೋಷಿಸಲು ಆಗ್ರಹ :

ವ್ಯಕ್ತಿಗಳಿಗೆ ತಮ್ಮ ನಿಷ್ಟೆಯನ್ನು ತೋರಿಸಲು ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಶಾಸಕರ ವರ್ತನೆಯನ್ನು ಗುಲಾಮಗಿರಿಯ ಪ್ರತೀಕ, ದೌಲತ್ತಿನ ಮುಂದೆ ಶರಣಾಗತಿ, ಪ್ರಜಾಪ್ರಭುತ್ವ ವಿರೋಧಿ ವರ್ತನೆ ಎಂದು ಸಿಪಿಐ(ಎಂ) ಖಂಡಿಸುತ್ತದೆ.

ಸಂವಿದಾನದ ಪ್ರಕಾರ ಸತ್ಯದ ಹೆಸರಿನ[illegible] ಅಥವಾ ದೇವರ ಹೆಸರಿನಲ್ಲಿ ಪ್ರಮಾಣ ವಚ[illegible] ಸ್ವೀಕರಿಸಬೇಕಾಗಿದ್ದು ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾ[illegible] ವಚನ ಸ್ವೀಕರಿಸಿದಲ್ಲಿ ಅಂತಹ ಪ್ರಮಾಣ ವಚನ[illegible] ಅಸಿಂದು. ಈ ಬಗ್ಗೆ ಸಭಾಧ್ಯಕ್ಷರು ಕೂಡಲೇ ಸ[illegible] ಕ್ರಮಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಬಿಜೆಪಿಯ ಕಾರ್ಯಕಾರಿಣಿಯಲ್ಲಿ ಕೈಗೊಂಡ ನಿರ್ಣಯಗಳೇನು? ಅದು ಏನನ್ನು ಸೂಚಿಸುತ್ತಿದೆ.

ಕುರ್ಚಿಯ ಕನವರಿಕೆಯಲ್ಲಿ ತಂತ್ರಗಾರಿಕೆಯ ರಾಜಕಾರಣ

ಇತ್ತೀಚೆಗೆ ರಾಜಧಾನಿ ನವದೆಹಲಿಯಲ್ಲಿ ಬಿಜೆಪಿಯ ಕಾರ್ಯಕಾರಿಣಿ ಸಭೆ ನಡೆಯಿತು. ಆ ಸಭೆಯಲ್ಲಿ ಕರ್ನಾಟಕದ ಯಡಿಯೂರಪ್ಪನವರಿಗೆ ಬಾರಿ ಸ್ವಾಗತ, ಸನ್ಮಾನ. ಕರ್ನಾಟಕದಲ್ಲಿ ಬಿಜೆಪಿ ಗೆದ್ದುಬಿಟ್ಟಿದೆ ಅಂತ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಘೋಷಿಸಿಯೇಬಿಟ್ಟರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತೆ ಗೆದ್ದು ಮರಳಿ ಅಧಿಕಾರಕ್ಕೆ ಬರುತ್ತದೆ ಅಂತ. ಅಡ್ವಾಣಿಯವರಿಗೆ ಪ್ರಧಾನಿ ಖುರ್ಚಿಯದೇ ಕನಸು.

ವಾಸ್ತವವಾಗಿ ಬಿಜೆಪಿಯ ಈ ಕಾರ್ಯಕಾರಿಣಿ ಸಭೆಯು ರಾಜಸ್ಥಾನದಲ್ಲಿ ನಡೆಯಬೇಕಿತ್ತು. ಅದನ್ನು ಕೊನೆ ಕ್ಷಣಗಳಲ್ಲಿ ದೆಹಲಿಗೆ ವರ್ಗಾಯಿಸಲಾಯಿತು. ಯಾಕೆ? ಯಾಕೆಂದರೆ ಅಲ್ಲಿ ಬಿಜೆಪಿ ಕಾರ್ಯಕಾರಿಣಿಯು ನಡೆಯುವ ಸ್ಥಿತಿ ಇಲ್ಲ. ವಸುಂದರ ರಾಜೇ ಸಿಂಧ್ಯಾ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಗುಜ್ಜಾರರ ಆಕ್ರೋಶ ಭುಗಿಲೆದ್ದಿದೆ. ಅವರು ಸಿಡಿದು ನಿಂತಿದ್ದಾರೆ. ತನ್ನ ಅವಕಾಶವಾದಿ, ಚುನಾವಣಾ ತಂತ್ರಗಾರಿಕೆಯ ರಾಜಕಾರಣಕ್ಕೆ ಬಿಜೆಪಿ ಅಲ್ಲಿ ಈಗಾಗಲೇ 40ಕ್ಕಿಂತ ಹೆಚ್ಚು ಜನ ಗುಜ್ಜಾರರನ್ನು ಬಲಿ ತೆಗೆದುಕೊಂಡಿದೆ. ಆ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಗುಜ್ಜಾರ್ ಚಳುವಳಿ ಮೇಲಿನದು ಸೇರಿದಂತೆ ಒಟ್ಟಾರೆ ರಾಜ್ಯ ಸರ್ಕಾರ ಸುಮಾರು 50 ಗೋಲಿಬಾರ್ ಮಾಡಿ 80 ಜನರನ್ನು ಕೊಂದಿದೆ. ಇದರ ಅರ್ಥವೇನು? ವಿವಿಧ ಜನಸಮುದಾಯಗಳ ನಡುವೆ ಅತೃಪ್ತಿ ಅಸಮಾಧಾನ ಸ್ಫೋಟಗೊಂಡಿದೆ ಅಂತಲ್ಲವೇ? ಹಾಗಾದರೆ ಇವರು ದೆಹಲಿಯಲ್ಲಿ ಅದು ಹೇಗೆ ಅಧಿಕಾರಕ್ಕೆ ಬಂದುಬಿಡುತ್ತಾರೆ.

ಕಪ್ಪು ಕಪ್ಪು ನಿಧಿ

ಬಿಜೆಪಿ ಕಾರ್ಯಕಾರಿಣಿಯು ನಡೆಯುತ್ತಿರುವ ಹೊತ್ತಿಗೆ ಮಧ್ಯ ಪ್ರದೇಶದಿಂದ ಒಂದು ಸುದ್ದಿ ಬಂದಿದೆ. ಮಧ್ಯ ಪ್ರದೇಶದಲ್ಲೂ ಬಿಜೆಪಿಯದ್ದೇ ಅಧಿಕಾರ. ಅಲ್ಲಿನ ಆರೋಗ್ಯ ಸಚಿವ ಅಜಯ್ ವಿಷ್ಣೋಯ್ ಮನೆ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಧಾಳಿ ಮಾಡಿದರೆ ಬಾರಿ ಪ್ರಮಾಣದ ಕಪ್ಪು ಹಣ, ಮತ್ತೆ ಲೆಕ್ಕವಿಲ್ಲದ ಅಪಾರ ಅಕ್ರಮ ಆಸ್ತಿ ಪಾಸ್ತಿ ಪತ್ತೆಯಾಗಿದೆ. ಔಷಧ ಖರೀದಿ ಹಗರಣ, ಇನ್ನು ಎಂಥೆಂಥದ್ದೋ ಹಗರಣಗಳಲ್ಲಿ ಗೋರಿಕೊಂಡ ದುಡ್ಡು ಅದು. ಇಂಥ ಹಗರಣಗಳನ್ನು ನಡೆಸಿದ ಬಿಜೆಪಿ ಸರ್ಕಾರಕ್ಕೆ, ಬಿಜೆಪಿಗೆ ಜನ ಮತ್ತೆ ಅಲ್ಲಿ ಮತ ಹಾಕಿ ದೆಹಲಿ ಖುರ್ಚಿ ಏರಲು ಕಳಿಸುತ್ತಾರೆಯೇ?

ಅಂತೂ ಜನರ ನಡುವೆ ಅಂಥದ್ದೊಂದು ಭಾವನೆ ಹರಡಲು ಬಿಜೆಪಿ ಶಕ್ತಿ ಮೀರಿ ಶ್ರಮಿಸಲು ತೀರ್ಮಾನಿಸಿಬಿಟ್ಟಿದೆ.

ಇನ್ನು ಕಾರ್ಯಕಾರಿಣಿ ಚರ್ಚಿಸಿದ, ನಿರ್ಣಯ ಕೈಗೊಂಡ ವಿಷಯಗಳ ಕತೆ ಇನ್ನೊಂದು ರೀತಿಯದು. ಜನಗಳ ಐಕ್ಯತೆಯನ್ನು ವಿಭಜಿಸುವ ವಿಭಜನಾಕಾರಿ ವಿಷಯಗಳಿಗೆ ಮತ್ತೆ ಬಿಜೆಪಿ ಕೈಹಾಕಿದೆ. ಸಂವಿಧಾನದ 370 ವಿಧಿ ರದ್ದು, ಏಕರೂಪ ನಾಗರೀಕ ಸಂಹಿತೆ ಪ್ರಶ್ನೆಗಳನ್ನು ಮತ್ತೆ ಕೈಗೆತ್ತಿಕೊಳ್ಳಲು ಅದು ತೀರ್ಮಾನಿಸಿದೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವ ಪಕ್ಷಗಳು ಬಿಜೆಪಿಯ ಎಲ್ಲ ವಿಚಾರಗಳನ್ನೂ ಒಪ್ಪಬೇಕೆಂದೇನೂ ಇಲ್ಲ ಎನ್ನುವ ಒಗ್ಗರಣೆಯನ್ನು ರಾಜನಾಥಸಿಂಗ್ ಹಾಕಿದ್ದಾರೆ. ಮುಂದೆ ಬಿಜೆಪಿ ಜೊತೆಗೆ ಅಂದರೆ ಎನ್‌ಡಿಎ ತೆಕ್ಕೆಗೆ ಇನ್ನಷ್ಟು ಪಕ್ಷಗಳು ಬೀಳಲಿವೆ ಅಂತಾನೂ ರಾಜನಾಥ್‌ಸಿಂಗ್



ಬಡಬಡಿಸುತ್ತಿದ್ದಾರೆ.

ಸಾಂಸ್ಕೃತಿಕ ರಾಷ್ಟ್ರೀಯತೆಯಂತೆ

ಬಿಜೆಪಿಯದ್ದು ಸಾಂಸ್ಕೃತಿಕ ರಾಷ್ಟ್ರೀಯತೆಯಂತೆ. ಇದರ ಹೆಸರಲ್ಲಿ ರಾಮಮಂದಿರದ ವಿವಾದವನ್ನು ತಮ್ಮ ಅಜೆಂಡಾದಲ್ಲಿ ತುರುಕುವುದೇ ಬಿಜೆಪಿಯ ತಂತ್ರ. ಸೆಕ್ಯೂಲರಿಸಂ- ಧರ್ಮ ನಿರಪೇಕ್ಷತೆ ಅಂದರೇನು ಎಂಬ ವಿಷಯದಲ್ಲೂ ಅದೇ ದ್ವಂದ್ವಾರ್ಥದ ಮಾತನಾಡುತ್ತಾ ಧರ್ಮ ನಿರಪೇಕ್ಷತೆ ಇನ್ನುವ ಪದ ಬಳಕೆ ತಪ್ಪು, ಅದು ಪಂಥ ನಿರಪೇಕ್ಷತೆ ಎಂದಾಗಬೇಕು ಎಂದು ಹುಯಿಲೆಬ್ಬಿಸಿದೆ. ಇದರ ಒಟ್ಟಾರೆ ಅರ್ಥ ಏನೆಂದರೆ ನಮ್ಮ ಸಂವಿಧಾನ ಸಾರುವ 'ಸೆಕ್ಯುಲಾರಿಸಂ' ಅನ್ನು ಬಿಜೆಪಿ ಒಪ್ಪಿಕೊಳ್ಳಲು ಸಿದ್ಧವಿಲ್ಲ ಅನ್ನುವುದು.

ಈ ಎಲ್ಲ ಕೋಮುವಾದಿ ಅಜೆಂಡಾಗಳನ್ನು ಮುಂದೆ ತಂದು ಜನರ ಬದುಕಿನ ನಿಜವಾದ ಪ್ರಶ್ನೆಗಳನ್ನು ಮರೆ ಮಾಚಿಸಲು ಪ್ರಯತ್ನಿಸಲಾಗುತ್ತಿದೆ. ಅದಲ್ಲದೆ ಎನ್‌ಡಿಎ ಸರ್ಕಾರದ ಆರು ವರ್ಷಗಳ ಆಡಳಿತವೇ ಭಾರಿ ಚೆನ್ನಾಗಿತ್ತು ಅಂತ ಹಾಡಿ, ಹೊಗಳಲು ಅದು ಶುರುವಿಟ್ಟುಕೊಂಡಿದೆ. ಭಾರತ ಪ್ರಕಾಶಿಸುತ್ತದೆ ಅಂತ ಇವರು ಬೊಬ್ಬೆ ಹೊಡೆಯುತ್ತಿರುವಾಗಲೇ ದೇಶದ ಸಾವಿರಾರು ರೈತರು ವಿಷ ಕುಡಿದು, ನೇಣು ಬಿಗಿದುಕೊಂಡು ಸಾಯುತ್ತಿದ್ದರು ಎಂಬುದನ್ನು ಮರೆಸಿಬಿಡಲು ಪ್ರಯತ್ನಿಸಲಾಗುತ್ತಿದೆ. ಆ ಬಿಕ್ಕಟ್ಟು ಇಂದಿಗೂ ಮುಂದುವರಿಯುತ್ತಿದೆ. ಎನ್‌ಡಿಎ ಸರ್ಕಾರ ಅನುಸರಿಸಿದ ಅದೇ ಆರ್ಥಿಕ ನೀತಿಗಳನ್ನು ಯುಪಿಎ ಸರ್ಕಾರ ಅನುಸರಿಸಲು ಎಡಪಕ್ಷಗಳು ಅಡ್ಡಿ ಮಾಡುತ್ತಿವೆ ಎಂಬುದಷ್ಟೇ ಅವರಿಗಿರುವ ದುಃಖ ಮತ್ತು ಆಕ್ಷೇಪ. ಕೃಷಿ ಕ್ಷೇತ್ರದಲ್ಲಿ ಸರ್ಕಾರಿ ಹೂಡಿಕೆಯನ್ನು ತೀವ್ರವಾಗಿ ಕಡಿತಗೊಳಿಸಿದ ಮತ್ತು ಸಹಾಯಧನ ಕಡಿತಗೊಳಿಸಿದ ನೀತಿಯನ್ನು ಬದಲಿಸಲು ಎಡಪಕ್ಷಗಳು ನಿರಂತರವಾಗಿ ಬಡಿದಾಡುತ್ತಿವೆಯಲ್ಲಾ. ಅದೇ, ಅದೇ ಕಾರಣಕ್ಕೆ ಬಿಜೆಪಿ ಸಂಕಟ.

ದೇಶದ ಸಾರ್ವಜನಿಕ ಉದ್ದಿಮೆಗಳ ಮೇಲೆ ಧಾಳಿಯನ್ನು ತೀವ್ರಗೊಳಿಸಿದ 'ಹಿರಿಮೆ' ಸಹ ಬಿಜೆಪಿ ನಾಯಕತ್ವದ ಸರ್ಕಾರದ್ದೇ. ಆ ವಿಎಸ್‌ಎನ್‌ಎಲ್, ಬಾಲ್ಕೊ, ಮಾರುತಿ, ಐಪಿಸಿಎಲ್ ಮುಂತಾದವುಗಳು ಸರ್ಕಾರದ ಧಾಳಿಗೆ ಗುರಿಯಾದವು.

ಅಧಿಕಾರ ಕಳೆದುಕೊಳ್ಳುವ ಮುಂಚೆ ಹೇಗಾದರೂ ಸರಿ ಸಾರ್ವಜನಿಕ ವಲಯದ ತೈಲ ಕಂಪನಿಗಳಾದ ಹೆಚ್‌ಪಿ.ಸಿ.ಎಲ್, ಬಿಪಿಸಿಎಲ್ ಗಳನ್ನು ಖಾಸಗೀಕರಿಸಲು ಹೋಗಿತ್ತು. ದೊಡ್ಡ ದೊಡ್ಡ ಕಂಪನಿಗಳಿಗೆ ಶ್ರೀಮಂತರಿಗೆ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆ ವಿನಾಯಿತಿ ನೀಡಲಾಯಿತು.

ವಂಚಕತನ

ವಿದೇಶಾಂಗ ನೀತಿಯ ವಿಚಾರದಲ್ಲೂ ಬಿಜೆಪಿಯು ವಂಚಕತನವನ್ನೇ ಮೆರೆದಿದೆ. ಹಿಂದೆ ತಾನು ಅಧಿಕಾರದಲ್ಲಿದ್ದಾಗ ಅನುಸರಿಸಿದ ಹಲವು ನೀತಿಗಳನ್ನು ಈಗಿನ ಕೇಂದ್ರ ಸರ್ಕಾರ ಅನುಸರಿಸುವಾಗ ಅದರ ಮೇಲೆಯೇ ಧಾಳಿ ನಡೆಸಲು ಬಿಜೆಪಿಗೆ ಯಾವುದೇ ಮುಜುಗರವಿಲ್ಲ. ಹಿಂದೆ ಎನ್‌ಡಿಎ ಸರ್ಕಾರ ಚೀನಾ ದೇಶದೊಂದಿಗೆ ಗಡಿ ವಿವಾದಗಳ ಕುರಿತು ಚರ್ಚೆಯನ್ನು ಜಂಟಿ ಕಾರ್ಯಸಮಿತಿಯ ಮೂಲಕ ಮುಂದುವರೆಸಿತು ಮತ್ತು ಟಿಬೆಟ್ ಚೀನಾ ದೇಶದ ಒಂದು ಸ್ವಾಯತ್ತ ಪ್ರದೇಶ ಎಂದು ಗುರುತಿಸುವ ಲಿಖಿತ ಒಪ್ಪಂದಕ್ಕೆ ಸಹಿ ಮಾಡಿತು. ಇದಕ್ಕೆ ಪ್ರತಿಯಾಗಿ ಚೀನಾ ದೇಶವು 'ಸಿಕ್ಕಿಂ' ಭಾರತದ ಒಂದು ಭಾಗ ಎಂದು

ಪುಟ 10ಕ್ಕೆ

ಪಾಳೇಗಾರಿ ರಾಜಪ್ರಭುತ್ವವೇ ಸರಿಯಂತೆ

ನೇಪಾಳದ ವಿಷಯದಲ್ಲಿ ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ಮುಖ ಬಟ್ಟ ಬಯಲಾಗಿದೆ. ನೇಪಾಳದ 'ಹಿಂದೂ ರಾಷ್ಟ್ರ'ದ ಅಂತ್ಯವು ಒಂದು ನಕಾರಾತ್ಮಕ ಬೆಳವಣಿಗೆ ಅಂತ ಜಸ್ವಂತ್‌ಸಿಂಗ್ ಪತ್ರಿಕಾಗೋಷ್ಠಿ ಮಾಡಿ ಸಾರುತ್ತಾರೆಂದರೆ ಇವರು ಎಂಥ ಲಜ್ಜೆಗೆಟ್ಟವರು!!! ಇವರ ಪ್ರಕಾರ ನೇಪಾಳವನ್ನು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸಿರುವುದು ಒಂದು ದುರಂತವಾಗಿದೆ. ಇವರ 'ಸನಾತನ' ಧರ್ಮವನ್ನು ಮೀರಿದ 'ಜಾತ್ಯಾತೀತತೆ' (ಸೆಕ್ಯುಲರಿಸಂ) ಬೇರೆ ಯಾವುದೂ ಇಲ್ಲವಂತೆ. ಪಾಪ ನೇಪಾಳದ ಜನತೆಗೆ ಬುದ್ದಿಯೇ ಇಲ್ಲ. ಅಧಿಕಾರ ಕಸಿದುಕೊಂಡದ್ದು ಮಾತ್ರವಲ್ಲ. ಅರಮನೆಯಿಂದಲೂ ರಾಜನನ್ನು ಹೊರಗಟ್ಟಿ ಅದನ್ನು ಮ್ಯೂಸಿಯಂ ಮಾಡಲು ಹೊರಟಿದ್ದಾರೆ!

ಆಂಧ್ರಪ್ರದೇಶ ಉಪ ಚುನಾವಣೆ : ತೆಲಂಗಾಣ ಪ್ರತ್ಯೇಕ ರಾಜ್ಯದ ವಿರುದ್ಧ ಜನಮತ

ಕಳೆದವಾರ ಆಂಧ್ರ ಪ್ರದೇಶದಲ್ಲಿ ನಡೆದ 17 ವಿಧಾನಸಭೆ, 4 ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣ ರಾಷ್ಟ್ರೀಯ ಸಮಿತಿ ಪಕ್ಷ ಹೀನಾಯ ಸೋಲು ಅನುಭವಿಸುವ ಮೂಲಕ ಅದರ 'ತೆಲಂಗಾಣ' ಪ್ರತ್ಯೇಕತೆಯ ಕೂಗಿಗೆ ಅಲ್ಲಿನ ಪ್ರಬುದ್ಧ ಮತದಾರ ಸೊಪ್ಪು ಹಾಕುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

ಪ್ರತ್ಯೇಕ ರಾಜ್ಯದ ಷರತ್ತಿಗೆ ಕೇಂದ್ರಸರ್ಕಾರ ಒಪ್ಪಿಗೆ ನೀಡಿ, ನಂತರ ಮಾತಿಗೆ ತಪ್ಪಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದ ತೆಲಂಗಾಣ ರಾಷ್ಟ್ರ ಸಮಿತಿ - ಟಿಆರ್‌ಎಸ್ ತಾನು ಪ್ರತಿನಿಧಿಸುತ್ತಿದ್ದ 16-ವಿಧಾನಸಭಾ ಕ್ಷೇತ್ರ, 4 ಲೋಕಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಪುನಃ ಚುನಾವಣೆಗೆ ನಿಂತೂ ಆರಿಸಿ ಬಂದು ಪ್ರತ್ಯೇಕತೆಯ ಕೂಗನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು ಎಂದು ಕೊಂಡಿತ್ತು. ಅದರ ಆಸೆಗೆ ಅಲ್ಲಿನ ಜನತೆ ಮತದಾನದ ಮೂಲಕ ತಣ್ಣೀರೆರಚಿದ್ದಾರೆ.

ಹದಿನೇಳರಲ್ಲಿ ಕೇವಲ ಏಳು ವಿಧಾನ ಸಭಾ ಕ್ಷೇತ್ರಗಳಲ್ಲಿ ಟಿಆರ್‌ಎಸ್ ಗೆದ್ದಿದೆ. ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಮಾತ್ರ ಗೆದ್ದಿದೆ. ಎರಡನ್ನು ಕಳೆದುಕೊಂಡಿದೆ. ಕಳೆದ ಸಾರಿ ಚುನಾವಣೆಯಲ್ಲಿ ಟಿಆರ್‌ಎಸ್ ಅಧ್ಯಕ್ಷ ಚಂದ್ರಶೇಖರರಾವ್ ಕರೀಮ್‌ನಗರ ಲೋಕಸಭೆಯಿಂದ ಎರಡು ಲಕ್ಷಕ್ಕೂ ಅಧಿಕ ಅಂತರದ ಮತದಿಂದ ಗೆದ್ದಿದ್ದರು. ಈ ಸಾರಿ ಕೇವಲ ಹದಿನೈದು ಸಾವಿರ ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ವಿಶೇಷ ಎಂದರೆ, ಹೈದ್ರಾಬಾದ್‌ನಗರದ ಮೂರು ವಿಧಾನಸಭಾ ಕ್ಷೇತ್ರದ ಪೈಕಿ ಎರಡು ಕ್ಷೇತ್ರದಲ್ಲಿ ತೆಲಂಗಾಣ ರಾಷ್ಟ್ರ ಸಮಿತಿ ತನ್ನ ಠೇವಣಿಯನ್ನು ಕಳೆದುಕೊಂಡಿದೆ.



ಸಿಪಿಐ(ಎಂ) ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದ್ದ ತೆಲುಗುದೇಶಂ ಪಕ್ಷ ಐದು ವಿಧಾನಸಭಾ, ಒಂದು ಲೋಕಸಭಾ ಕ್ಷೇತ್ರವನ್ನು ಗೆಲ್ಲುವ ಮೂಲಕ ಗಮನ ಸೆಳೆದಿದೆ. ಕಾಂಗ್ರೆಸ್ ಆರು ವಿಧಾನಸಭಾ ಒಂದು ಲೋಕಸಭಾ ಕ್ಷೇತ್ರದಲ್ಲಿ ಜಯ ಗಳಿಸಿದೆ.

ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸಿಪಿಎಂ ಯಾವುದೇ ಸ್ಥಾನ ಗೆಲ್ಲದಿದ್ದರೂ ಐಕ್ಯ ಆಂಧ್ರದ ಪರವಾಗಿ ತತ್ವ ಬದ್ಧ ಹೋರಾಟ ನಡೆಸಿದೆ.

- ಪರಶುರಾಮ ಬೋನೇರ

ಈಗ ದೇಶದಲ್ಲಿ ಕಾಣುತ್ತಿರುವ ಬೆಲೆಯೇರಿಕೆ ಒಂದು ಜಾಗತಿಕ ವಿದ್ಯಮಾನ ಎಂದು ಹೇಳಿ ತಪ್ಪಿಸಿಕೊಳ್ಳುವಂತಿಲ್ಲ. ಏಕೆಂದರೆ ಈ ವಿದ್ಯಮಾನಕ್ಕೂ ಸಾಮ್ರಾಜ್ಯಶಾಹಿಗಳು ಹೇರಿದ ನವ-ಉದಾರೀಕರಣ ನೀತಿಗಳೇ ಕಾರಣ. ಆದ್ದರಿಂದ ಆದಕ್ಕೆ ಬಂದ ಪ್ರತಿರೋಧಗಳನ್ನೂ ಲೆಕ್ಕಿಸದೆ ಅವನ್ನು ತಮ್ಮದೇ ನೀತಿಗಳು ಎಂದು ಶಿರಸಾವಹಿಸಿ ಪಾಲಿಸಿದವರ ಹೊಣೆ ಇನ್ನಷ್ಟು ಹೆಚ್ಚುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡಕ್ಕೂ ಇದು ಅನ್ವಯಿಸುತ್ತದೆ.



ಬೆಲೆ ಏರಿಕೆ

ಜಾಗತಿಕ ವಿದ್ಯಮಾನವಷ್ಟೇ ಅಲ್ಲ

ಜಾಗತೀಕರಣ ನೀತಿಗಳ ದುಷ್ಫಲ

ಬೆಲೆಯೇರಿಕೆ ಮತ್ತು ಹಣದುಬ್ಬರವನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಲು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಹೋದ ಎಡಪಕ್ಷಗಳ ನಿಯೋಗಕ್ಕೆ ಜಾಗತಿಕ ಪರಿಸ್ಥಿತಿಯೇ ಬಹಳ ಕಠಿಣವಾಗಿದೆ, ಆದರ ನಡುವೆಯೂ ತಮ್ಮ ಸರಕಾರ ಈ ಪರಿಸ್ಥಿತಿ ನಮ್ಮ ಜನಗಳನ್ನು ಅಷ್ಟಾಗಿ ತಟ್ಟದಂತೆ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರಂತೆ.

ಆದರೆ ಈ ರೀತಿ ಜಾಗತಿಕ ಪರಿಸ್ಥಿತಿ ಕಠಿಣವಾಗಲು ಜಾಗತೀಕರಣದ ಹೆಸರಿನಲ್ಲಿ ತಂದ ನವ-ಉದಾರವಾದೀ ನೀತಿಗಳೇ ಕಾರಣ ಎಂಬುದನ್ನು ಮರೆಮಾಚಲಾಗುತ್ತದೆ. ಈಗಾಗಲೆ ನಮ್ಮ ಓದುಗರಿಗೆ ತಿಳಿದಿರುವಂತೆ ಈಗಿನ ಬೇಲೆಯೇರಿಕೆ ಮತ್ತು ಹಣದುಬ್ಬರಕ್ಕೆ ಈ ಕೆಳಗಿನ ಕಾರಣಗಳನ್ನು ಗುರುತಿಸಲಾಗಿದೆ.

(1) ಹೆಚ್ಚುತ್ತಿರುವ ತೈಲಬೆಲೆಗಳು ಹಾಗೂ ಇದರ ಪರಿಣಾಮವಾಗಿ ಒಟ್ಟಾರೆಯಾಗಿ ಎಲ್ಲ ಸರಕುಗಳ ಬೆಲೆಗಳಲ್ಲಿ ಹೆಚ್ಚಳ

(2) ಗದ್ದೆಗಳಲ್ಲಿ ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು, ತರಕಾರಿಗಳನ್ನು ಬೆಳೆಯುವ ಬದಲು ಅಮೆರಿಕ, ಕೆನಡ, ಯುರೋಪ್, ಬ್ರೆಝಿಲ್ ಮುಂತಾದ ದೇಶಗಳಲ್ಲಿ ಜೈವಿಕ ಇಂಧನಗಳಿಗೆ ಬೇಕಾಗುವ ಬೆಳೆಗಳನ್ನು ಬೆಳೆಯುವುದರಿಂದ ಜಾಗತಿಕ ಆಹಾರ ಉತ್ಪಾದನೆಯಲ್ಲಿ ಇಳಿಕೆ.


(3) ರಾಷ್ಟ್ರೀಯ ಸರಕಾರಗಳ ಉಪೇಕ್ಷೆಯಿಂದಾಗಿ ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಗಳಲ್ಲಿ ಇಳಿಕೆ- ಮುಖ್ಯವಾಗಿ ನೀರಾವರಿ, ಉತ್ಪಾದಕತೆಯನ್ನು ಹೆಚ್ಚಿಸಬಹುದಾದ ತಂತ್ರಜ್ಞಾನಗಳು ಮತ್ತು ರೈತರಿಗೆ ವಿಸ್ತರಣಾ ಸೇವೆಗಳಲ್ಲಿ.

(4) ಕೃಷಿ ಸರಕುಗಳ ಸಂಗ್ರಹಣೆ ಮತ್ತು ವಿತರಣೆಯಲ್ಲಿ ಸರಕಾರದ ಪಾತ್ರ ಕಡಿಮೆಯಾಗಿ ಖಾಸಗಿಯವರಿಗೆ ಹೆಚ್ಚಿನ ಅವಕಾಶ, ಇದರಿಂದ ಸರಕಾರದ ಬಳಿಯಿರುವ ಆಹಾರ ದಾಸ್ತಾನುಗಳಲ್ಲಿ ತೀವ್ರ ಇಳಿಕೆ- ಆಹಾರ ಉತ್ಪಾದನೆ ಮತ್ತು ವ್ಯಾಪಾರದಲ್ಲಿ ಹೆಚ್ಚುತ್ತಿರುವ ಖಾಸಗಿಯವರ ಪ್ರಾಬಲ್ಯ.

(5) ಆಹಾರ ಪದಾರ್ಥಗಳ ಮಾರುಕಟ್ಟೆಯಲ್ಲಿ ಜೂಜುಕೋರತನಕ್ಕೆ ಸಕಲ ಅವಕಾಶ.

ಆಹಾರ ಬಿಕ್ಕಟ್ಟು ಏಕೆ?

ಇವೆಲ್ಲ ನವ ಉದಾರವಾದೀ ನೀತಿಗಳ ದುಷ್ಫಲಗಳೆ ಎಂದು ಬೇರೆ ಹೇಳಬೇಕಾಗಿಲ್ಲ. ಇರಲಿ, ಇಲ್ಲಿ ನಾವು ಆಹಾರ ಉತ್ಪಾದನೆಯಲ್ಲಿ ಬಿಕ್ಕಟ್ಟಿನ ಪ್ರಶ್ನೆಯನ್ನು ಪರಿಶೀಲಿಸೋಣ.



1980-2000 ರ ಅವಧಿಯಲ್ಲಿ ವಿಶ್ವ ಆಹಾರಧಾನ್ಯ ಉತ್ಪಾದನೆಯಲ್ಲಿ ಹೆಚ್ಚಳದಲ್ಲಿ ಅರ್ಧದಷ್ಟು ಭಾರತ ಮತ್ತು ಚೀಣಾದಿಂದ ಬಂದಿತ್ತು. ಆದರೆ 2000ದಿಂದ ಇಲ್ಲಿ ಉತ್ಪಾದನೆಯಲ್ಲಿ ಸ್ಥಗಿತತೆ ಕಂಡು ಬರಲಾರಂಭಿಸಿತು. ಭಾರತದ ಅಂಕಿ-ಅಂಶಗಳನ್ನು ನೋಡೋಣ: ಒಟ್ಟು ಆಹಾರಧಾನ್ಯಗಳ ಉತ್ಪಾದನೆ

2001-02	21.29 ಕೋಟಿ ಟನ್
2002-03	17.48
2003-04	21.32
2004-05	19.84
2005-06	20.86
2006-07	21.30

2007-08ರಲ್ಲಿ ಇದು 22.7ಕೋಟಿ ಟನ್ನುಗಳಾಗುವ ನಿರೀಕ್ಷೆಯಿದೆ ಎಂದು ಹೇಳಲಾಗುತ್ತಿದೆ. ಇದು ನಿಜವಾಗಿದ್ದರೆ ಆರು ವರ್ಷಗಳ ಸ್ಥಗಿತತೆಯಿಂದ ಸ್ವಲ್ಪ ಹೊರಬಂದಂತಾಗುತ್ತದೆ. ಆದರೆ ಇದು ನಿಜವಾದ ಉತ್ಪಾದನೆಯ ಅಂದಾಜಿಗಿಂತ ಹೆಚ್ಚಾಗಿ ಆರ್ಥಿಕದಲ್ಲಿ ಇನ್ನಷ್ಟು ಹಣದುಬ್ಬರಕಾರೀ ಅಂಶಗಳು ಬರದಿರಲಿ ಎಂದು ಹೇಳುತ್ತಿರುವ ಸಂಖ್ಯೆಯಾಗಿರಲೂ ಸಾಧ್ಯವಿದೆ. ಅದೇನೇ ಇರಲಿ, ಈಗ ಭಾರತದಲ್ಲಿ ಆಹಾರ ಧಾನ್ಯಗಳ ಪೂರೈಕೆಯ ಮೇಲೆ ತೀವ್ರ ಮಿತಿಗಳಿವೆ ಎಂದು ತಜ್ಞರು ಒಪ್ಪುತ್ತಾರೆ. ಇದು ಆಗಿರುವುದು ರೈತಾಪಿ ವರ್ಗದ ಆದಾಯದ ಮೇಲೆ ಉದಾರೀಕರಣದ ನೀತಿಗಳು ಹೇರಿರುವ ಅಡೆ-ತಡೆಗಳಿಂದಾಗಿ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್.

ಬಂಡವಾಳಶಾಹಿ ತನ್ನ ಶೋಷಣೆಯನ್ನು ಉಳಿಸಿಕೊಳ್ಳಲು ಅಥವಾ ತೀವ್ರಗೊಳಿಸಲು ಜನಸಾಮಾನ್ಯರ ಆದಾಯವನ್ನು ಇಳಿಸುವ ಪ್ರಯತ್ನ ಮಾಡುತ್ತದೆ. ಈ ಮೂಲಕ ಅದು ಆರ್ಥಿಕದಲ್ಲಿ ಬೇಡಿಕೆಗೆ ತನ್ನ ಲಾಭಕ್ಕೆ ಬೇಕಾದ ರೀತಿಯಲ್ಲಿ ಕಡಿವಾಣ ಹಾಕಲು ಪ್ರಯತ್ನಿಸುತ್ತದೆ. ಆದರೆ ರೈತರ ಆದಾಯಗಳ ಮೇಲೆ ಹೇರುವ ಇಂತಹ ಕಡಿವಾಣಗಳ ದೂರಗಾಮೀ ಪರಿಣಾಮವೆಂದರೆ ರೈತರು ಭೂಮಿಯನ್ನೂ ಕಳಕೊಂಡು ದರಿದ್ರರಾಗುತ್ತಾರೆ, ಸಾಮಾನ್ಯ ಆಹಾರ ಉತ್ಪಾದನೆಯೂ ಅವರಿಂದ ಸಾಧ್ಯವಾಗದ ಸ್ಥಿತಿ ಏರ್ಪಡುತ್ತದೆ. ಆಹಾರ ಬಿಕ್ಕಟ್ಟು ಕಾಲಿಡುತ್ತದೆ. ಒಂದೂವರೆ ದಶಕದ ಜಾಗತೀಕರಣದ ಅವಧಿಯಲ್ಲಿ ಆಗಿರುವುದು ಇದೇ.

ಮೂರು ವಿಧಗಳಲ್ಲಿ ಕಡಿವಾಣ

ಬಂಡವಾಳಶಾಹಿ ಕನಿಷ್ಟ ಮೂರು ವಿಧಗಳಲ್ಲಿ ಜನಸಾಮಾನ್ಯರ ಆದಾಯಗಳನ್ನು ಇಳಿಸಲು ಪ್ರಯತ್ನಿಸುತ್ತದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ಮೊದಲನೆಯದು, ಸರಕಾರದ ಖರ್ಚಿನಲ್ಲಿ ಕಡಿತ. ಏಕೆಂದರೆ ಜಾಗತೀಕರಣದ ಯುಗದಲ್ಲಿ ಸರ್ವವ್ಯಾಪಿ, ಸರ್ವಶಕ್ತ ಎನಿಸುವ ಹಣಕಾಸು ಬಂಡವಾಳದ 'ವಿಶ್ವಾಸವನ್ನು ಉಳಿಸಿಕೊಳ್ಳಲು' ಸರಕಾರ ತನ್ನ ಖಜಾನೆಯನ್ನು ಅದಕ್ಕೆ ಸದಾ ತೆರೆದಿಡಬೇಕು, ಇದು ಜನಗಳ ಪರವಾಗಿ ಮಾಡುವ ಖರ್ಚಿನಲ್ಲಿ ಕಡಿತದಿಂದ ಮಾತ್ರ ಸಾಧ್ಯ.

ಹಣಕಾಸು ಬಂಡವಾಳ ಸರಕಾರದ ಹಣಕಾಸು ನೀತಿಗಳು 'ಸ್ವಸ್ಥ'ವಾಗಿರಬೇಕು ಎಂದು ವಿಧಿಸುತ್ತದೆ, ಅಂದರೆ ಆದಾಯಕ್ಕಿಂತ ಖರ್ಚು ಹೆಚ್ಚಿರಬಾರದು, ಹೆಚ್ಚಿದ್ದರೂ ಒಂದು ಮಿತಿಯೊಳಗೆ ಇರಬೇಕು. ಆದರೆ ಹಣಕಾಸು ಬಂಡವಾಳದ ಆಸೆಗಳನ್ನು ಮಾತ್ರ ಪೂರೈಸುತ್ತಿರಬೇಕು! ಈ ಹಿನ್ನೆಲೆಯಲ್ಲಿಯೇ 'ಹಣಕಾಸು ಜವಾಬ್ದಾರಿ' ಕಾನೂನು ತಂದದ್ದು. ಈ ಕಾನೂನು ಸರಕಾರದ ಹಣಕಾಸು ಬಜೆಟಿನ ಕೊರತೆ ಯಾವ ಮಿತಿಯೊಳಗೆ ಇರಬೇಕು ಎಂದು ವಿಧಿಸಿದೆ.

ಇದರಿಂದಾಗಿ ಒಂದೆಡೆ ಶ್ರೀಮಂತ ವಿಭಾಗಗಳಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲಾರದ ಸರಕಾರ ಜನಸಾಮಾನ್ಯರ ಸಹಾಯಕ್ಕೆ ಯಾವ ಸಂದರ್ಭದಲ್ಲೂ ಸಬ್ಸಿಡಿ ಮೂಲಕ ಧಾವಿಸದಂತೆಯೂ ಆಗುತ್ತದೆ. ಇದರ ಪರಿಣಾಮವೇ ಕಲ್ಯಾಣ ಖರ್ಚಿನಲ್ಲಿ ಕಡಿತ, ಬಡವರಿಗೆ ಸಬ್ಸಿಡಿಗಳಲ್ಲಿ ಕಡಿತ, ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಖರ್ಚುಗಳಿಗೆ ಕಡಿತ ಹಾಗೂ ಸಾರ್ವಜನಿಕ ಹೂಡಿಕೆಗಳಲ್ಲಿ ಕಡಿತ. ಇವೆಲ್ಲಾ ಜನಸಾಮಾನ್ಯರ, ಅದರಲ್ಲೂ ರೈತಾಪಿ ಜನಗಳ ಕೊಳ್ಳುವ ಶಕ್ತಿಯನ್ನೇ ಕುಂದಿಸಿ ಬಿಡುವುದಲ್ಲದೆ ಆರ್ಥಿಕದಲ್ಲಿ ಅವರ ಉತ್ಪಾದನಾ ಸಾಮರ್ಥ್ಯವನ್ನು ಕೂಡಾ ಕುಂದಿಸಿ ಬಿಡುತ್ತದೆ ಎಂದು ಪ್ರೊ. ಪಟ್ನಾಯಕ್ ವಿವರಿಸುತ್ತಾರೆ.

ಎರಡನೆಯದಾಗಿ, ಜಾಗತೀಕರಣ ನೀತಿಗಳ ಅಡಿಯಲ್ಲಿ ಜಾಗತಿಕ ಸ್ಪರ್ಧೆಯನ್ನು ಎದುರಿಸಬೇಕಾದ ದೇಶೀ ಉದ್ದಿಮೆಗಳು, ದೇಶೀ ಕೃಷಿಗೆ ರಕ್ಷಣೆಯಿಲ್ಲದೆ ಅವು ನಾಶವಾಗುವ, ನಿರುದ್ಯೋಗ ಹೆಚ್ಚಾಗುವ ಪರಿಸ್ಥಿತಿ




ನಿರ್ಮಾಣವಾಗುತ್ತಿದೆ. ಮೂರನೆಯದಾಗಿ, ಕೃಷಿ ಸರಕುಗಳ ಮಾರುಕಟ್ಟೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಿಂದಾಗಿ ಪ್ರಾಥಮಿಕ ಉತ್ಪಾದಕರಿಗೆ ಅಂದರೆ ಸಾಮಾನ್ಯ ರೈತರಿಗೆ ಸರಿಯಾದ ಬೆಲೆಗಳು ಸಿಗದಂತಾಗುತ್ತಿದೆ. ಇವೆಲ್ಲ ರೈತರ ಆದಾಯಗಳ ಮೇಲೆ ತೀವ್ರ ಮಿತಿಗಳನ್ನು ಹೇರಿವೆ.

ನಿಜ, ಪ್ರಧಾನ ಮಂತ್ರಿಗಳು ಹೇಳುವಂತೆ ಈಗ ನಾವು ಕಾಣುತ್ತಿರುವ ಹಣದುಬ್ಬರ , ಅದಕ್ಕೆ ಕಾರಣವಾದ ಆಹಾರ ಬಿಕ್ಕಟ್ಟು 'ಜಾಗತಿಕ'ವಾದದ್ದು ('ಹೈತಿಯ ಉದಾಹರಣೆ'-ಬಾಕ್ಸ್ ನೋಡಿ-ಪುಟ9).

ಪರಿಹಾರವೇನು?

ಈಗಿನ ಹಣದುಬ್ಬರಕ್ಕೆ ಪರಿಹಾರವೆಂದರೆ ಈ

ಪುಟ 13ಕ್ಕೆ



ಅಂದು ವಾಜಪೇಯಿ - ಇಂದು ಮನಮೋಹನ ಸಿಂಗ್

ಪೆಟ್ರೋಲ್ - ಡೀಸೆಲ್ ದರ ಏರಿಕೆ ವರ್ಗ ಹಿತಾಸಕ್ತಿಯ ನಿಚ್ಚಳ ಉದಾಹರಣೆ

1990 ರಲ್ಲಿ ಪೆಟ್ರೋಲ್ ಬೆಲೆ ಲೀಟರಿಗೆ ರೂ. 13.94, 1998ರಲ್ಲಿ ರೂ. 28.40, 2004ರಲ್ಲಿ 44.08, ಈಗ ರೂ. 58.00 18 ವರ್ಷಗಳಲ್ಲಿ ಶೇಕಡಾ 400ಕ್ಕಿಂತಲೂ ಜಾಸ್ತಿಯಾಗಿದೆ. 1990ರಲ್ಲಿ ಡೀಸೆಲ್ ಬೆಲೆ ಲೀಟರಿಗೆ ರೂ. 5.79, 1998ರಲ್ಲಿ ರೂ. 8.53, 2004ರಲ್ಲಿ 30.25. ಈಗ ರೂ, 40.00 ಶೇಕಡಾ 666ರಷ್ಟು ಜಾಸ್ತಿ. ಈ 18 ವರ್ಷಗಳಲ್ಲಿ ಹಲವಾರು ಸರಕಾರಗಳು ಬಂದು ಹೋಗಿವೆ. ಆದರೆ ಪ್ರಮುಖವಾಗಿ ಇದ್ದದ್ದು ಕಾಂಗ್ರೆಸ್ ಅಥವಾ ಕಾಂಗ್ರೆಸ್ ನೇತೃತ್ವದ ಸರಕಾರ ಮತ್ತು ಬಿಜೆಪಿ ನೇತೃತ್ವದ ಸರಕಾರಗಳು. ಈ ಎಲ್ಲಾ ಸರಕಾರಗಳು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲಗಳ ಬೆಲೆ ಹೆಚ್ಚಿಸಿವೆ. ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರವಂತೂ 2 ಬಾರಿ ಸೀಮೆಎಣ್ಣೆ ಬೆಲೆ


ಕೃಪೆ: ವಿಜಯ ಕರ್ನಾಟಕ

ಹೆಚ್ಚಿಸಿದ್ದು, ಒಟ್ಟು 18 ವರ್ಷಗಳ ಅವಧಿಯಲ್ಲಿ 73 ಬಾರಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಳವಾಗಿತ್ತು ಎಂದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಎನ್. ಡಿ.ಎ. ಸರಕಾರದ ಅವಧಿಯಲ್ಲಿ 21 ಬಾರಿ ದರ ಹೆಚ್ಚಳವಾಗಿತ್ತು. ಅಂದರೆ ಕಾಂಗ್ರೆಸ್ ಅಥವಾ ಬಿಜೆಪಿ - ಯಾವುದೇ ಸರಕಾರ ಬಂದರೂ ಜನಸಾಮಾನ್ಯರ ಮೇಲೆ ಹೊರೆ ಹೆಚ್ಚಿದೆ ಹಾಗೂ ಖಾಸಗಿ ಕಂಪನಿಗಳ ಲಾಭ ಹೆಚ್ಚಿದೆ. (ಬಾಕ್ಸ್ ನೋಡಿ) ಈ ಸರಕಾರಗಳ ದೊಡ್ಡ ಬಂಡವಾಳಗಾರರ ಪರ ನೀತಿಯೇ ಪೆಟ್ರೋಲ್ ಉತ್ಪನ್ನಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲದ ಬೆಲೆ ಹೆಚ್ಚುತ್ತಿರುವುದು ನಿಜ. ಇದು ಹೆಚ್ಚಾಗುತ್ತಲೇ ಹೋಗುತ್ತದೆ ಎಂದು ಯಾರಾದರೂ ಊಹಿಸಬಹುದು.

ಏಕೆಂದರೆ, ಬಹುತೇಕ ತೈಲ ಉತ್ಪಾದಿಸುವ ಕಂಪೆನಿಗಳು ಅಮೇರಿಕಾದಾಗಿವೆ. ಅಥವಾ ಅಲ್ಲಿನ ಕಂಪೆನಿಗಳ ಹಿಡಿತದಲ್ಲಿದೆ. ತೈಲ ಬೆಲೆಯ ಮೂಲಕ ತನ್ನ ಆರ್ಥಿಕವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಇತರೆ ದೇಶಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದು ಆದರ ಉದ್ದೇಶ, ಈ ಉದ್ದೇಶಕ್ಕಾಗಿಯೇ ಅಮೇರಿಕಾ ಅಫಘಾನಿಸ್ತಾನ ಮತ್ತು ಇರಾಕ್ ಮೇಲೆ ಯುದ್ಧ ನಡೆಸಿತ್ತು ಎಂಬುದು ಬಹುತೇಕ ಪ್ರಜ್ಞಾವಂತ ಜನರಿಗೆ ತಿಳಿದಿದೆ.

ಇದು ಒಂದೆಡೆಯಾದರೆ ನಮ್ಮ ದೇಶದ ಆಡಳಿತ ಸರಕಾರಗಳೂ ತೈಲ ಉತ್ಪಾದನೆಯಲ್ಲಿ ಸ್ವಾಲಂಬನೆಯತ್ತ ಹೋಗಲಿಲ್ಲ. 1984-85 ರಲ್ಲಿ ಶೇ 70 ರಷ್ಟು ಅಗತ್ಯ ತೈಲ ಉತ್ಪನ್ನಗಳು ನಮ್ಮ ದೇಶದಲ್ಲೇ ಸಿಗುತ್ತಿತ್ತು. ಅದನ್ನು ಹಂತಹಂತವಾಗಿ ಕಡಿಮೆ ಮಾಡಲಾಯ್ತು. ಈಗ ನಮ್ಮ ದೇಶದಲ್ಲಿ ತಯಾರಾಗುವ ತೈಲ ಉತ್ಪನ್ನಗಳು ಶೇಕಡಾ 30ರಷ್ಟು ಮಾತ್ರ. ಆಮದು ಮಾಡಿಕೊಳ್ಳುತ್ತಿರುವುದು ಶೇಕಡಾ 70ರಷ್ಟು. ಇದಕ್ಕೆ ಕಾರಣ ಕಚ್ಚಾತೈಲ ಆಮದು ಮಾಡಿಕೊಳ್ಳುವ ಹಾಗೂ ಇಲ್ಲಿ ಸಂಸ್ಕರಣೆ ನಡೆಸುವ ಖಾಸಗಿ ಕಂಪೆನಿಗಳು ಹಾಗೂ ನಮ್ಮ ದೇಶಕ್ಕೆ ರಪ್ತು ಮಾಡುವ ವಿದೇಶಿ ಕಂಪೆನಿಗಳು. ಇದರಿಂದ ಆ ಕಂಪೆನಿಗಳ ಲಾಭ ಹೆಚ್ಚುತ್ತದೆ. ಇದಕ್ಕೆ ವಿಶ್ವ ಬ್ಯಾಂಕಿನ ಶರತ್ತುಗಳಿಗೆ ಮಣಿದ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸರಕಾರ ಮಣಿ ಹಾಕುತ್ತಿದೆ.

ಸಬ್ಸಿಡಿ ಸಾರ್ವಜನಿಕ ಉದ್ದಿಮೆಗಳಿಂದ - ಲಾಭ ಕೇಂದ್ರ ಸರಕಾರಕ್ಕೆ:

ಸದ್ಯಕ್ಕೆ ನಿಗದಿಗೊಳಿಸಿರುವ ಬೆಲೆಗಳಲ್ಲಿ ಪೆಟ್ರೋಲ್ ಬಿಟ್ಟರೆ ಡೀಸೆಲ್, ಅಡುಗೆ ಗ್ಯಾಸ್ ಮತ್ತು ಸೀಮೆಎಣ್ಣೆಗೆ ನೀಡುತ್ತಿರುವ ಸಬ್ಸಿಡಿಗಳನ್ನು ನೀಡಲಾಗುತ್ತಿದೆ. ಇದರಲ್ಲಿ ಸೀಮೆಎಣ್ಣೆಗೆ ನೀಡುತ್ತಿರುವ ಸಬ್ಸಿಡಿ ಹೆಚ್ಚು. ಆದರೆ ಈ ಸಬ್ಸಿಡಿಗಳನ್ನು ಜನರು ತಿಳಿದುಕೊಂಡಂತೆ ಕೇಂದ್ರ ಸರಕಾರ ನೀಡುತ್ತಿಲ್ಲ. ಇದನ್ನು ಸಾರ್ವಜನಿಕ ಉದ್ದಿಮೆಗಳಿಂದ ಭರಿಸಲಾಗುತ್ತಿದೆ. ಆದ್ದರಿಂದಲೇ ಪ್ರತಿಬಾರಿ ಕಚ್ಚಾತೈಲದ ಬೆಲೆ ಹೆಚ್ಚಳವಾಗುತ್ತಲೇ ಸಬ್ಸಿಡಿಯ ಭಾರ ಸಾರ್ವಜನಿಕ ಉದ್ದಿಮೆಗಳ ಮೇಲೆ ಬೀಳುತ್ತದೆ.

ಅದೇ ಸಂದರ್ಭದಲ್ಲಿ ಕಚ್ಚಾತೈಲ ಬೆಲೆ ಏರಿದಂತೆಲ್ಲ ಆಮದು ಸುಂಕ ಮತ್ತು ಅಬಕಾರಿ ಸುಂಕದಲ್ಲಿ ಹೆಚ್ಚಳವಾಗುತ್ತದೆ. ಉದಾಹರಣೆಗೆ 2002-03ರಲ್ಲಿ ಕಚ್ಚಾತೈಲದ ಆಮದಿನಿಂದಾಗಿ ಸುಂಕದ ರೂಪದಲ್ಲಿ ಕೇಂದ್ರ ಸರಕಾರಕ್ಕೆ 96,000ಕೋಟಿ ರೂ. ಸಂಗ್ರಹವಾಗಿದ್ದರೆ, 2005-06ರಲ್ಲಿ 1,26,000 ಸಂಗ್ರಹವಾಗಿದೆ. ಅಂದರೆ ತೈಲ ಬೆಲೆ ಹೆಚ್ಚಳದಿಂದಾಗಿ 3 ವರ್ಷದಲ್ಲಿ ಕೇಂದ್ರ ಸರಕಾರಕ್ಕೆ 30,000 ಕೋಟಿ ರೂ. ಹೆಚ್ಚು ಆದಾಯ ಸಂಗ್ರಹವಾಗಿದೆ. ಇದನ್ನು ಸಾರ್ವಜನಿಕ ಉದ್ದೆಮೆಗಳಿಗೆ ವರ್ಗಾಯಿಸಲು ಕೇಂದ್ರ ಸರಕಾರ ತಯಾರಿಲ್ಲ.

> ಜನ ತತ್ತರಿಸಿದ್ದಾರೆ. ಬೆಲೆ ಏರಿಕೆಯ ಹೊರೆಯನ್ನು ಜನರಿಗೆ ವರ್ಗಾಯಿಸುವ ಬದಲು ಬೇರೆ ದಾರಿ ಇದೆ ಎಂಬ ಎಡಪಕ್ಷಗಳ ಪರ್ಯಾಯಗಳನ್ನು ಯುಪಿಎ ಯಾಕೆ ನಿರ್ಲಕ್ಷಿಸುತ್ತಿದೆ. ಇದರ ಹಿಂದೆಬಹು ದೊಡ್ಡ ವರ್ಗ ಹಿತಾಸಕ್ತಿ ಇದೆ.

ಬಾಲಕೃಷ್ಣ ಶೆಟ್ಟಿ


ತೆರಿಗೆ ! ತೆರಿಗೆ!! ತೆರಿಗೆ !!!

ನಮ್ಮ ದೇಶದಲ್ಲಿ ಜನಸಾಮಾನ್ಯರು ಉಪಯೋಗಿಸುವ ಬೆಂಕಿಪೊಟ್ಟಣದಿಂದ ಹಿಡಿದು ಪ್ರತಿಯೊಂದು ವಸ್ತುವಿಗೂ ದೊಡ್ಡ ಪ್ರಮಾಣದಲ್ಲಿ ತೆರಿಗೆ ನೀಡುತ್ತಿದ್ದಾರೆ ಎಂದು ನಾವು ಆಗಾಗ ಹೇಳುತ್ತಲೇ ಇರುತ್ತೇವೆ. ಅದರಲ್ಲೂ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ವಿಪರೀತ. ಇಂದಿನ ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯಸರಕಾರಗಳು ಸೇರಿ ಪೆಟ್ರೋಲ್ ಮೇಲೆ ಶೇ 64ರಷ್ಟು ತೆರಿಗೆ ಹಾಕುತ್ತಿದ್ದು ಡೀಸೆಲ್ ಮೇಲೆ ಶೇ 36ರಷ್ಟು ತೆರಿಗೆ ಹಾಕುತ್ತಿವೆ. ಅಂದರೆ ಲೀಟರಿಗೆ 58ರೂ ಪೆಟ್ರೋಲ್ ಬೆಲೆಯಲ್ಲಿ ರೂ. 22.33 ರಷ್ಟು ತೆರಿಗೆ. ಅಂದರೆ ಯಾವುದೇ ತೆರಿಗೆಯೂ ಇಲ್ಲದಿದ್ದರೆ ಇಂದಿನ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು 35ರೂ.ಗೆ 1ಲೀಟರ್ ಪೆಟ್ರೋಲ್ ಸಿಗುತ್ತದೆ. ಜನರಿಂದ ಇಷ್ಟೊಂದು ತೆರಿಗೆ ವಸೂಲಿ ಮಾಡುವ ಸರಕಾರಗಳು ಶ್ರೀಮಂತರಿಗೆ, ಶ್ರೀಮಂತರು ನಡೆಸುವ ದೊಡ್ಡ ಕಂಪೆನಿಗಳಿಗೆ ಹೇರಳ ರಿಯಾಯಿತಿ ನೀಡುತ್ತವೆ.

ದೇಶದ ಒಟ್ಟು ಅಬಕಾರಿ ಸುಂಕದ ಶೇ 32ರಷ್ಟು ಪೆಟ್ರೋಲಿಯಂ ಉತ್ಪನ್ನಗಳಿಂದ ಮಾತ್ರವೇ ಬರುತ್ತದೆ. ಇದರಿಂದ ಪೆಟ್ರೋಲ್‌ನಿಂದ ಕೇಂದ್ರ ಸರಕಾರಕ್ಕೆ ಎಷ್ಟೊಂದು ಲಾಭವಿದೆ ಎಂದು ಅರ್ಥವಾಗುತ್ತದೆ. ಪ್ರತಿಬಾರಿ ಬೆಲೆ ಹೆಚ್ಚಿಸಿದಂತೆಲ್ಲ ಕೇಂದ್ರ ಮತ್ತು ರಾಜ್ಯಸರಕಾರಗಳ ಆದಾಯವೂ ತೆರಿಗೆಯ ರೂಪದಲ್ಲಿ ಹೆಚ್ಚುತ್ತಲೇ ಹೋಗುತ್ತದೆ.

ಎಡಪಕ್ಷಗಳ ಒತ್ತಡ

ಸಿಪಿಐ(ಎಂ) ಮತ್ತು ಎಡಪಕ್ಷಗಳ ಒತ್ತಡದಿಂದಾಗಿ ತೈಲ ಬೆಲೆ ಏರಿಕೆ ಪ್ರಮಾಣ ಕಡಿಮೆಯಾಗಿದೆ. ತೈಲ ಬೆಲೆ ಏರಿಸುವ ಬದಲಾಗಿ ಗ್ರಾಹಕರಿಗೆ ಹೊರೆ ಬೀಳದಂತೆ ಏನು ಮಾಡಬೇಕು. ಎಂಬುದನ್ನು ಎಡಪಕ್ಷಗಳು ವಿವರವಾಗಿ ಕೇಂದ್ರ ಸರಕಾರಕ್ಕೆ ತಿಳಿಸಿವೆ.



ಕೃಪೆ: ದಿ ಹಿಂದು

ತೈಲ ಬೆಲೆ ಏರಿಕೆಯಿಂದ ವ್ಯಾಪಾರ ಮಾಡುವ ಇಂಡಿಯನ್ ಆಯಿಲ್, ಎಚ್.ಪಿ.ಸಿ.ಎಲ್. ಮೊದಲಾದ ಕಂಪೆನಿಗಳಿಗೆ ದೊರೆತ ಒಟ್ಟು ಹಣ 21,000 ಕೋಟಿ ರೂ. ಆದರ ಬದಲಾಗಿ ಎಡಪಕ್ಷಗಳು ಈ ಕೆಳಗಿನ ಸಲಹೆಗಳನ್ನು ನೀಡಿದವು.

1) ಬೆಲೆ ಸ್ಥಿರೀಕರಣ ನಿಧಿ : ಹಿಂದೆ ತೈಲ ನಿಧಿ ಖಾತೆ ಎಂದಿತ್ತು. ಆದರೆ ಇದನ್ನು ಎನ್.ಡಿ.ಎ. ಸರಕಾರದ ಅವಧಿಯಲ್ಲಿ ಕಿತ್ತುಹಾಕಿ ಆಡಳಿತಾತ್ಮಕ ಬೆಲೆ ನಿಗದಿಗೊಳಿಸುವುದನ್ನು ಆರಂಭಿಸಲಾಯಿತು. ಅಂದರೆ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿದಂತೆಲ್ಲ ಬೆಲೆಗಳನ್ನು ಹೆಚ್ಚಿಸುವುದು. ಈ ನೀತಿ ಜನರ ವಿರೋಧಿಯಾಗಿದೆ.

ಅದಕ್ಕೆ ಪರ್ಯಾಯವಾಗಿ ಬೆಲೆ ಸ್ಥಿರೀಕರಣ ನಿಧಿಯನ್ನು ರಚಿಸಬೇಕೆಂದು ಸಿ.ಪಿ.ಐ (ಎಂ) ಮತ್ತು ಎಡಪಕ್ಷಗಳು ಸಲಹೆ ಮಾಡಿವೆ.

ಈಗಾಗಲೇ ಸರಕಾರಿ ಸ್ವಾಮ್ಯದ ಒ.ಎನ್.ಜಿ.ಸಿ. ಮತ್ತು ಇಂಡಿಯನ್ ಆಯಿಲ್ ಕಂಪೆನಿಗಳು ಉತ್ಪಾದಿಸುವ ತೈಲದ ಮೇಲೆ "ಸೆಸ್" (ಹೆಚ್ಚುವರಿ ತೆರಿಗೆ) ಹಾಕುವುದರ ಮೂಲಕ ವಾರ್ಷಿಕ 7500 ಕೋಟಿ ರೂ. ಸಂಗ್ರಹವಾಗುತ್ತದೆ. ಇದನ್ನು ಬೆಲೆ ಸ್ಥಿರೀಕರಣ ನಿಧಿಗೆ ವರ್ಗಾಯಿಸುವುದರ ಮೂಲಕ ಬೆಲೆಗಳು ಹೆಚ್ಚಾದಾಗ ಮಾರುಕಟ್ಟೆ ಮಾಡುವ ಕಂಪೆನಿಗಳಿಗೆ ಪರಿಹಾರ ನೀಡಬಹುದು. ಬೆಲೆಗಳು ತಗ್ಗಿದಾಗ ಆ ನಿಧಿ ಹಾಗೆಯೇ ಉಳಿಯಬೇಕು. ಅದನ್ನು ಕೇಂದ್ರ ಸರಕಾರ ಇತರೆ ಖರ್ಚುಗಳಿಗೆ ವರ್ಗಾಯಿಸಬಾರದು.

2) ಇತ್ತೀಚೆಗೆ ಅಬಕಾರಿ ಸುಂಕವನ್ನು ಲೀಟರ್‌ಗೆ 1ರೂ ಕಡಿತ ಮಾಡಲಾಗಿದೆ ಇದರ

ಪುಟ 13ಕ್ಕೆ

ಇದು ಹೈತಿಯ ಕಥೆ

ಕೆನಡಾದ 'ಸೋಶಲಿಸ್ಟ್ ವಾಯ್ಸ್' ನಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಪತ್ರಕರ್ತ ಇಯನ್ ಆಂಗಸ್ ಹೈತಿ ದೇಶದ ಉದಾಹರಣೆಯನ್ನು ಕೊಡುತ್ತಾರೆ. ಅಲ್ಲಿ ಶತಮಾನಗಳಿಂದ ಭತ್ತ ಬೆಳೆಯಲಾಗುತ್ತಿದೆ. ವರ್ಷಕ್ಕೆ 1.7 ಲಕ್ಷ ಟನ್ ಭತ್ತ ಬೆಳೆಯುತ್ತಾರೆ. ಇದು ಆ ದೇಶದ 95 ಶೇ. ಜನಕ್ಕೆ ಸಾಲುತ್ತಿತ್ತು. ರೈತರಿಗೇನೂ ಸರಕಾರದಿಂದ ಸಬ್ಸಿಡಿಗಳು ಸಿಗುತ್ತಿರಲಿಲ್ಲ. ಆದರೆ ಆಮದು ಸುಂಕಗಳಿಂದಾಗಿ ಅವರಿಗೆ ರಕ್ಷಣೆಯಿತ್ತು.

1995ರಲ್ಲಿ ಆ ದೇಶದ ಆರ್ಥಿಕ ಪರಿಸ್ಥಿತಿಯಿಂದಾಗಿ ಸಾಲದ ಮೊರೆ ಹೋಯಿತು. ಐಎಂಎಫ್ ಸಾಲ ಕೊಡಲು ಸಿದ್ಧವಿತ್ತು. ಆದರೆ ಆದರ 'ಪರಂಪರೆ'ಯಂತೆ ಶರತ್ತುಗಳ ಸಾಲ. ಶರತ್ತೆಂದರೆ ಆಮದು ಅಕ್ಕಿಯ ಮೇಲೆ ಸುಂಕದರಗಳನ್ನು 35 ಶೇ. ದಿಂದ 3ಶೇ. ಕ್ಕೆ ಇಳಿಸಬೇಕು! ಇದರ ಪರಿಣಾಮವೆಂದರೆ ಬೃಹತ್ ಪ್ರಮಾಣದಲ್ಲಿ ಅಮೆರಿಕನ್ ಅಕ್ಕಿ ಹೈತಿಯಲ್ಲಿ ರಾಶಿ ಬೀಳಲಾರಂಭಿಸಿತು- ಅದೂ ಹೈತಿಯ ಅಕ್ಕಿಯ ಅರ್ಧ ಬೆಲೆಯಲ್ಲಿ! ಸಾವಿರಾರು ಹೈತಿ ರೈತರು ಭೂಮಿ ಕಳಕೊಂಡರು, ಜೀವನೋಪಾಯವನ್ನೇ ಕಳಕೊಂಡರು. ಈಗ ಆ ದೇಶದಲ್ಲಿ ತಿನ್ನಲಾಗುತ್ತಿರುವ ಅಕ್ಕಿಯಲ್ಲಿ ಮುಕ್ಕಾಲು ಪಾಲು ಅಮೆರಿಕಾದಿಂದ ಬರುತ್ತದೆ.

ಅಮೆರಿಕಾದ ಅಕ್ಕಿಯ ಪ್ರಾಬಲ್ಯ ಅದು ಹೆಚ್ಚು ರುಚಿಯಾಗಿದೆಯೆಂದೋ ಅಥವ ಅಮೆರಿಕನ್ ರೈತರು ಹೆಚ್ಚು ದಕ್ಷರು ಎಂಬ ಕಾರಣಕ್ಕಾಗಿಯೋ ಅಲ್ಲ , ಅದರ ಪ್ರಾಬಲ್ಯಕ್ಕೆ ಕಾರಣ ಅಮೆರಿಕನ್ ಸರಕಾರ ಕೊಡಮಾಡುವ ಭಾರೀ ಸಬ್ಸಿಡಿಗಳು ಎನ್ನುತ್ತಾರೆ ಇಯನ್ ಆಂಗಸ್. 2003ರಲ್ಲಿ ಅಮೆರಿಕನ್ ರೈತರು ಪ್ರತಿ ಹೆಕ್ಟೇರಿಗೆ 232ಡಾಲರ್(9000ರೂ.ಗಿಂತಲೂ ಹೆಚ್ಚು) ಸಹಾಯ ಧನ ಪಡೆದರು.. ಇದು ಕೂಡ ಸಿಕ್ಕಿದ್ದು ಸಾಮಾನ್ಯ ಅಮೆರಿಕನ್ ರೈತರಿಗಲ್ಲ, ದೊಡ್ಡ ಭೂಮಾಲಕರಿಗೆ ಮತ್ತು ಕೃಷಿವ್ಯವಹಾರದ ಕಂಪನಿಗಳಿಗೆ. ಈ ಸಬ್ಸಿಡಿಗಳಿಂದಾಗಿ ಅವರು ನಿಜವಾದ ಉತ್ಪಾದನಾ ಖರ್ಚಿಗಿಂತಲೂ 30ರಿಂದ 50ಶೇ. ಕಡಿಮೆ ಬೆಲೆಗಳಲ್ಲಿ ಅಕ್ಕಿ ಮಾರಲು ಸಾಧ್ಯವಾಯಿತು.

ಸಂಕ್ಷಿಪ್ತವಾಗಿ, ಹೈತಿ ತನ್ನ ದೇಶೀ ಕೃಷಿಗೆ ರಕ್ಷಣೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಲಾಯಿತು, ಅದನ್ನು ಅಮೆರಿಕ ತನ್ನ ಸರಕಾರೀ ರಕ್ಷಣಾ ಸ್ಕೀಮುಗಳ ಮೂಲಕ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳಲು ಬಳಸಲಾಯಿತು. ಹೆಚ್ಚು ಕಡಿಮೆ ಇದೇ ರೀತಿ ಯ ಕಥೆಗಳು ಹಲವು ಇವೆ ಎನ್ನುವ ಇಯನ್ ಆಂಗಸ್ ಇದರಿಂದಾಗಿ ವಿಶ್ವ ಆಹಾರ ವ್ಯಾಪಾರದಲ್ಲಿ ವಂಚನೆ ನಡೆಯುತ್ತಿದೆ, ಇದರ ಪರಿಣಾಮವಾಗಿ ಬಡದೇಶಗಳ ಬಡಜನಗಳ, ಬಡರೈತರ ಬೆಳೆಗಳ ಪ್ರಮಾಣ ಇಳಿದಿದೆ, ರಕ್ಷಣೆಯೂ ಇಳಿದಿದೆ ಎನ್ನುತ್ತಾರೆ.

ಜನಾರೋಗ್ಯ ಕಾಪಾಡುವುದರಲ್ಲಿ ಲಸಿಕೆ(ವಾಕ್ಸಿನ್)ಗಳ ಪಾತ್ರ ಹಿರಿದು, ಆದರೆ ನಮ್ಮ ದೇಶದಲ್ಲಿಂದು ಲಸಿಕೆ ತಯಾರಿಸುವ ದೇಶಿಯ ಸರ್ಕಾರಿ ಸಂಸ್ಥೆಗಳನ್ನು ಮುಚ್ಚಲು ಸರ್ಕಾರ ಆದೇಶ ನೀಡಿದೆ. ಹಾಗಿದ್ದರೆ...

ಲಸಿಕೆಗಳು ಅಗತ್ಯತೆಗೋ, ಒತ್ತಡಕ್ಕಾಗಿಯೋ ?

ಲಸಿಕೆಗಳಲ್ಲಿ ಸ್ವಾವಲಂಬನೆ ಬೇಡವೆ ?

ಭಾರತ ಲಸಿಕೆಯ ನೀತಿಯನ್ನು ಪ್ರಕಟಿಸದೇ ಇದ್ದುದರಿಂದ ಅನೇಕ ಒತ್ತಡಗಳನ್ನು ಎದುರಿಸಲು ಸಿದ್ಧವಾಗಬೇಕಾಗುತ್ತದೆ. ಲಸಿಕೆಯ ಅಗತ್ಯತೆಯು ಹೆಚ್ಚಿದಂತೆಲ್ಲ ಲಸಿಕೆಯ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚಿನ ಹಿಡಿತ ಸಾಧಿಸಲು ಮುಂದಾಗುತ್ತವೆ. ಈ ಒತ್ತಡದಿಂದಾಗಿ ಲಸಿಕಾ ನೀತಿಯೇ ವಿಕೃತವಾಗುತ್ತ ಬಂದಿದೆ.

ಇತ್ತೀಚಿನವರೆಗೆ ಭಾರತದ ಮೂರು ಸಾರ್ವಜನಿಕ ಉದ್ಯಮದ ಕಂಪನಿಗಳು ಭಾರತದ ಲಸಿಕಾ ಕಾರ್ಯಕ್ರಮ (ಯು.ಐ.ಸಿ)ಕ್ಕೆ ಬೇಕಾಗುವ ಲಸಿಕೆಗಳನ್ನು ತಯಾರಿಸುತ್ತಾ ಬಂದಿವೆ. ಆದರೆ ಇತ್ತೀಚೆಗೆ ಭಾರತ ಸರ್ಕಾರ ಔಷಧಿ ನಿಯಂತ್ರಣದ ಮೂಲಕ ಈ ಕಂಪನಿಗಳನ್ನು ಮುಚ್ಚಲು, ಲಸಿಕೆಗಳನ್ನು ಪೂರೈಸದಿರಲು ಆದೇಶ ನೀಡಿದೆ.

ಇದೇ ವೇಳೆಗೆ ಅಂತರಾಷ್ಟ್ರೀಯ ಸಂಸ್ಥೆಯಾದ ಗ್ಲೋಬಲ್ ಅಲೈನ್ಸ್ ಫಾರ್ ಫ್ಯಾಕ್ಸಿನ್ಸ್ ಹಾಗೂ ಇಮ್ಯೂನೈಜೇಶನ್ಸ್ (ಗಾವಿ) ದೆಹಲಿಯಲ್ಲಿ ಒಂದು ಸಭೆಯನ್ನು ಏರ್ಪಡಿಸಿತ್ತು. ಈ ಸಂಸ್ಥೆ 2000ದ ಇಸವಿಯಲ್ಲಿ ಪ್ರಾರಂಭವಾಗಿದ್ದು ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳ ಒಕ್ಕೂಟವಾಗಿದ್ದು, ಜಗತ್ತಿನಾದ್ಯಂತ ಮಕ್ಕಳ ಜೀವ ಉಳಿಸಲು ಶ್ರಮಿಸುತ್ತಿರುವ ಸಂಸ್ಥೆ ಎಂದು ಪ್ರಚಾರ ಗಿಟ್ಟಿಸಿದೆ. ಯಾವುದೇ ದೇಶ ಹೊಸ ಲಸಿಕೆಗಳನ್ನು (ಹಿಪೆಟೈಟಿಸ್ ಎ,ಬಿ, ಇನ್‌ಫ್ಲುಜೆಂಝಾ, ಚಿಕನ್‌ಫಾಕ್ಸ್) ಉಪಯೋಗಿಸಲು ಕಾರ್ಯಕ್ರಮ ಹಾಕಿಕೊಂಡಲ್ಲಿ, ಆ ಸಂಸ್ಥೆಯಿಂದ 350 ದಶಲಕ್ಷ ಡಾಲರ್‌ವರೆಗೆ ಸಹಾಯಧನ ಪಡೆಯಬಹುದಾಗಿದೆ.

ಬಾಹ್ಯಒತ್ತಡಗಳು

ಭಾರತ ಈಗಾಗಲೇ ಈ ಸಂಸ್ಥೆಯಿಂದ 40 ದಶಲಕ್ಷ ಡಾಲರ್ ಸಹಾಯ ಲಸಿಕಾ ಕಾರ್ಯಕ್ರಮಕ್ಕೆ ಬಳಸಿದೆ. ಈಗ ಉಳಿದ ಹಣವನ್ನು ಹೇಗೆ ಪಡೆಯಬಹುದು ಎಂದು ತೀರ್ಮಾನಿಸಲು ಈ ಸಭೆಯನ್ನು ಕರೆಯಲಾಗಿತ್ತು. ಲಸಿಕಾ ಕಾರ್ಯಕ್ರಮ ಮಕ್ಕಳ, ಆರು ಮಾರಕರೋಗಳಿಗೆ ಲಸಿಕೆಯನ್ನು ನೀಡಿ, ಸಾವುಗಳನ್ನು ತಡೆಯುವ ಕಾರ್ಯಕ್ರಮವಾಗಿದೆ. ಇದನ್ನು ಯು.ಐ.ಪಿ ಎಂದು ಕರೆಯುವರು. ಈ ಕಾರ್ಯಕ್ರಮ ಭಾರತದಲ್ಲಿ ಜಾರಿಯಲ್ಲಿದ್ದು, ಅದು ಕೇವಲ ಪ್ರತಿಶತ 40 ಮಕ್ಕಳನ್ನು ಮಾತ್ರ ತಲುಪುತ್ತಿದೆ. ಈ ಸಭೆಯಲ್ಲಿ ಚರ್ಚೆಯಾದ ವಿಷಯಗಳು ಕೇವಲ 40 ಪ್ರತಿಶತ ಮಕ್ಕಳಿಗೆ ಸಂಬಂಧಿಸಿದ್ದು, ಅದನ್ನು ಇತರೆ ಮಕ್ಕಳಿಗೆ ವಿಸ್ತರಿಸುವ ಪ್ರಯತ್ನ ಮಾಡಲಾಗಲಿಲ್ಲ. ಈಗಿನ ಯುಐಪಿ ಕಾರ್ಯಕ್ರಮದಲ್ಲಿ ಹಿಪೆಟೈಟಿಸ್ ಬಿ ಚುಚ್ಚುಮದ್ದು ಕಡ್ಡಾಯವೇನಲ್ಲ. ಆದರೆ ಆ ಲಸಿಕೆಯನ್ನು ಸರ್ಕಾರಿ ಕಾರ್ಯಕ್ರಮದಲ್ಲಿ ಅಳವಡಿಸುವುದರ ಬಗ್ಗೆ ಚರ್ಚೆಯಾಯಿತು. ಇನ್ನೊಂದು ವರ್ಷದಲ್ಲಿ ಅದು ಜಾರಿಗೆ ಬರಲಿದೆ.

ಇದಲ್ಲದೆ ಡಿಪಿಟಿ ಹಾಗೂ ಕಡ್ಡಾಯವಾಗಿ ಹಿಪೆಟೈಟಿಸ್ ಬಿ ಸಮ್ಮಿಶ್ರ ಚುಚ್ಚುಮದ್ದನ್ನು ದೊರಕುವಂತೆ ಮಾಡಿ ಅದನ್ನು ಸಹಿತ ಲಸಿಕಾ ಕಾರ್ಯಕ್ರಮದಲ್ಲಿ ಉಪಯೋಗಿಸಲು ಪ್ರಯತ್ನಿಸಲಾಗುವುದು. ಒಂದು ವರ್ಷದೊಳಗೆ ನಿಮೋಕಾಕಲ್ ಲಸಿಕೆ ಹಾಗೂ ಪೆಂಟಾವ್ಯಾಲೆಂಟ್ ಲಸಿಕೆ (ಡಿಪಿಟಿ, ಹಿಪೆಟೈಟಿಸ್ ಬಿ, ಹಿಮೋಫೀಲಸ್, ಇನ್‌ಫ್ಲುಯೆಂಝಾ ಹೆಚ್.ಐ.ಬಿ)ಗಳನ್ನು ಕೂಡ ಭಾರತದಲ್ಲಿ ದೊರಕುವಂತೆ ಮಾಡಿ ಸರ್ಕಾರಿ ಕಾರ್ಯಕ್ರಮದಲ್ಲಿ ಬಳಸಲಾಗುವುದು.

ಈ ಸಭೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ನಿಗಮ ಆರೋಗ್ಯ ಮಂತ್ರಾಲಯದ ಪ್ರತಿನಿಧಿಗಳು, ಭಾರತದ ಔಷಧಿ ನಿಯಂತ್ರಣ ಅಧಿಕಾರಿ, ಯುಐಪಿ ಅಧಿಕಾರಿ ಮುಂತಾದವರು ಹಾಜರಿದ್ದರು.

ಇದರಿಂದ ತಿಳಿದುಬರುವುದೇನೆಂದರೆ ನಮ್ಮ ದೇಶದ ಲಸಿಕಾ ನೀತಿ ಹಾಗೂ ಕಾರ್ಯಕ್ರಮವನ್ನು ಗಾವಿಯಂತಹ ಅಂತರಾಷ್ಟ್ರೀಯ ಸಂಸ್ಥೆ ನಿರ್ಧರಿಸುತ್ತದೆ ಹಾಗೂ ರಾಷ್ಟ್ರೀಯ ಸರ್ಕಾರಿ ಅಧಿಕಾರಿಗಳು ಈ ಆದೇಶವನ್ನು ಪಾಲಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಒತ್ತಡದಿಂದ ಹೊಸ ಲಸಿಕೆಗಳನ್ನು ಉಪಯೋಗಿಸಲಾಗುತ್ತದೆ. ಅಂತರರ್ಾಷ್ಟ್ರೀಯ ಸಂಸ್ಥೆಯ ಹಣವನ್ನು ನಮ್ಮ ಅಗತ್ಯತೆಗೆ ಉಪಯೋಗಿಸುವ ಬದಲು ಉದಾ ವ್ಯಾಕ್ಸಿನ್ ಕಂಪನಿಗಳನ್ನು ಮುಚ್ಚುವ ಬದಲು, ಅವರ ನಿರ್ದೇಶನದ ಮೇರೆಗೆ ಉಪಯೋಗಿಸಲಾಗುತ್ತದೆ. ಸ್ವಾವಲಂಬನೆ ಬದಲು ಪರಾವಲಂಬನೆ ಯತ್ತ ಸಾಗುವಂತಾಗುತ್ತದೆ. ಹಿಂದೆ ವಿಶ್ವ ಆರೋಗ್ಯ ಸಂಸ್ಥೆ ಪಲ್ಸ್ ಪ್ಲಸ್ ಎಂಬ ಕಾರ್ಯಕ್ರಮವನ್ನು ಭಾರತದಲ್ಲಿ 1995ರಲ್ಲಿ ಜಾರಿ ಮಾಡಿತು ಹಾಗೂ ಭಾರತಕ್ಕೆ 20 ದಶಲಕ್ಷ ಡಾಲರ್ ಸಹಾಯಧನ ಬಂದಿತು. ಈ ಕಾರ್ಯಕ್ರಮದ ಅವಧಿ 2000ದ ಇಸವಿಯವರೆಗೆ ಇದ್ದಿತು. ಆದರೆ 2000ದಲ್ಲಿ ಆ ಗುರಿಯನ್ನು ಸಾಧಿಸಲಾಗಲಿಲ್ಲ. ಆಗ ಭಾರತ ವಿಶ್ವಬ್ಯಾಂಕಿನಿಂದ 180 ದಶಲಕ್ಷ ಡಾಲರ್ ಸಾಲ ಪಡೆದು ಕಾರ್ಯಕ್ರಮವನ್ನು ಮುಂದುವರೆಸಲಾಯಿತು.



ಈಗಲೂ ಆ ಕಾರ್ಯಕ್ರಮ ಸಂಪೂರ್ಣಗೊಳ್ಳದಿರುವು ದನ್ನು ನಾವು ಗಮನಿಸಬಹುದಾಗಿದೆ. ಗಾವಿಯಂತಹ ಸಂಸ್ಥೆಗಳು ಪ್ರಾರಂಭದಲ್ಲಿ ಸಹಾಯಧನ ನೀಡಿ, ಕಾರ್ಯಕ್ರಮದ ಪ್ರಾರಂಭದಲ್ಲೇ ಖರ್ಚಿಲ್ಲದ ಅನುಭವವನ್ನು ಉಂಟು ಮಾಡುತ್ತವೆ. ಆದರೆ ಇದರಿಂದಾಗಿ ನಂತರ ಹೆಚ್ಚು ಸಾಲವನ್ನು ಪಡೆಯಲು ಸಿದ್ಧರಾಗಿ ಅಪಾಯಕ್ಕೆ ಒಳಗಾಗ ಬೇಕಾಗುತ್ತದೆ. ಇದನ್ನು ಅಂತರಾಷ್ಟ್ರೀಯ ಸಂಸ್ಥೆಗಳು ಹಾಗೂ ಮುಂದುವರೆದ ದೇಶಗಳ ವ್ಯವಸ್ಥಿತ ಸಂಚು ಎನ್ನಬಹುದಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ನಮ್ಮ ದೇಶದ ಲಸಿಕಾ ನೀತಿಯನ್ನು ದಾನಿ ಸಂಸ್ಥೆಗಳು ತೀರ್ಮಾನಿಸುತ್ತಿರುವುದು ಹಾಗೂ ನಂತರ ಸಾಲ ತೆಗೆದುಕೊಳ್ಳುವ ಅನಿವಾರ್ಯತೆ ಉಂಟು ಮಾಡುವುದು. ಈ ದಾನಿಗಳು ನಾವು ಉಪಯೋಗಿಸದ ಲಸಿಕೆಗಳನ್ನು ಉಪಯೋಗಿಸಲು ಒತ್ತಡ ತರುತ್ತಿರುವುದು. ನಾವು ಉಪಯೋಗಿಸಿದ ಲಸಿಕೆಯಿಂದ ಆಗಬಹುದಾದ ಸಾವುಗಳ ಬಗ್ಗೆ ಉತ್ಪ್ರೇಕ್ಷೆ ಮಾಡಿ ಆ ಲಸಿಕೆ ಅಗತ್ಯವೆಂದು ತೋರಿಸುವುದು. ಆ ಲಸಿಕೆಗಳನ್ನು ನಮ್ಮ ಕಾರ್ಯಕ್ರಮ ಗಳಲ್ಲಿ ಅಳವಡಿಸಿಕೊಳ್ಳಲು ಒತ್ತಡ ತರುವುದು. ಇದೇ ವೇಳೆ ಅನೇಕ ತಜ್ಞರು, ಸಂಸ್ಥೆಗಳು ಆ ಲಸಿಕೆಗಳು ಅಗತ್ಯವೆಂಬ ವೈಜ್ಞಾನಿಕ ಸತ್ಯವನ್ನು ಹೇಳುವುದರಿಂದ ಕೆಲವರಿಗೆ ಆ ಹೊಸ ಲಸಿಕೆಗಳು ಕಡ್ಡಾಯವೆನಿಸಬಹುದು. ಆದರೆ ಲಸಿಕಾ ನೀತಿ ವೈಜ್ಞಾನಿಕ ಸತ್ಯದೊಂದಿಗೆ, ಆರ್ಥಿಕ ಹಿನ್ನೆಲೆ, ಲಸಿಕೆಯ ದೊರಕುವಿಕೆ, ತಯಾರಿಕೆಯ ಆಧಾರದ ಮೇಲೆ ತೀರ್ಮಾನಗೊಳ್ಳುತ್ತದೆ. ಹೊರದೇಶದಲ್ಲಿ ತಯಾರಿಸಿದ ಲಸಿಕೆ ಭಾರತದಲ್ಲಿ ಉಪಯೋಗಿಸಿದಲ್ಲಿ ಪರಿಣಾಮಕಾರಿ ಯಾಗಬಹುದು ಎಂಬ ವೈಜ್ಞಾನಿಕ ಸತ್ಯವನ್ನು ಯಾವ ತಜ್ಞ ಅಥವಾ ಸಂಸ್ಥೆ ವ್ಯಾಪಕ ಅಧ್ಯಯನ ಕೈಗೊಂಡು ಹೇಳುತ್ತಿದ್ದಾರೆ?

ಈಗಿನ ದಿನಗಳಲ್ಲಿ ಖಾಸಗಿ, ಸಾರ್ವಜನಿಕ ಕಂಪನಿಗಳ ಒಡಂಬಡಿಕೆಯಲ್ಲಿ ಈ ಲಸಿಕೆಗಳನ್ನು ಪರಿಚಯಿಸುವ ಹುನ್ನಾರ ನಡೆಯುತ್ತಿದೆ. ಬಡ ದೇಶಗಳಿಗೆ ಖಾಸಗೀ ಸಂಸ್ಥೆಯಿಂದ ಸಹಾಯ ಪಡೆಯದೇ ವಿಧಿಯೇ ಇಲ್ಲವೆಂಬ ತೀರ್ಮಾನಕ್ಕೆ ಬರುವಂತೆ ಎಲ್ಲರಿಗೂ ಮನದಟ್ಟು ಮಾಡಿಕೊಡಲಾಗುತ್ತಿದೆ. ಆದರೆ ಇಲ್ಲಿ ಔಷಧಿ ಕಂಪನಿಗಳ ಲಾಭಕೋರ ನೀತಿ, ವಿಜ್ಞಾನಕ್ಕಿಂತ ಹೆಚ್ಚು ಮಹತ್ವ ಪಡೆಯುತ್ತದೆ ಎಂಬುದು ಸಾರ್ವಜನಿಕರ ಅರಿವಿಗೆ ಬರುವುದೇ ಇಲ್ಲ.



ಡಾ. ಪ್ರಕಾಶ್ ಸಿ ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

ಗಾವಿಯಂತಹ ಸಂಸ್ಥೆಯ ಹಿಂದೆ ಈ ಖಾಸಗಿ ಔಷಧಿ, ಕಂಪನಿಗಳು ತಮ್ಮ ನೀತಿಯನ್ನು ತುರುಕುತ್ತಿವೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಗಾವಿ ಬದಲು ಸರ್ಕಾರಗಳು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯುನಿಸೆಫ್ ನೊಂದಿಗೆ ಸೇರಿ ರಾಷ್ಟ್ರೀಯ ಲಸಿಕಾ ನೀತಿಯು ಹಲವಾರು ವಿಷಯಗಳನ್ನು ತೀರ್ಮಾನಿಸಿದ್ದರೆ ಅದು ಸೂಕ್ತವಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಯುನಿಸೆಫ್, ಅಭಿವೃದ್ಧಿ ಹೊಂದಿದ ದೇಶಗಳ ಕೈಗೊಂಬೆಯಾಗಿರುವುದರಿಂದ ಇಂತಹ ಸನ್ನಿವೇಶಗಳನ್ನು ನಾವು ನೋಡಬೇಕಾಗಿದೆ.

ಸಮ್ಮಿಶ್ರ ಲಸಿಕೆಗಳಿಗೆ ಈಗ ಪ್ರಾಮುಖ್ಯತೆ ಬರುತ್ತಿದೆ. ಸಂಯುಕ್ತ ಔಷಧಿಗಳಿಗೆ ಯಾವ ವೈಜ್ಞಾನಿಕ ಆಧಾರವಿಲ್ಲದಿದ್ದರೂ, ಭಾರತದಲ್ಲಿ ಸಮ್ಮಿಶ್ರ ಔಷಧಿಗಳ ಹಾವಳಿ ಈಗಲೂ ಹೆಚ್ಚಾಗಿಯೇ ಇದೆ. ವೈದ್ಯರು ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈಗ ಸಂಯುಕ್ತ ಲಸಿಕೆಗಳು ಮಾರುಕಟ್ಟೆಗೆ ಲಗ್ಗೆ ಹಾಕಲು ಮುಂದಾಗುತ್ತಿವೆ. ಉದಾ : ಡಿಪಿಟಿ ಮತ್ತು ಹಿಪೆಟೈಟಿಸ್, ಡಿಪಿಟಿ, ಹಿಪೆಟೈಟಿಸ್ ಬಿ, ಇನ್‌ಫ್ಲುಯೆಂಝಾ, ಹೆಚ್‌ಐವಿ ಈ ಸಮ್ಮಿಶ್ರ ಲಸಿಕೆಗಳಿಗೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ಈ ಲಸಿಕೆಗಳಿಂದ ನಮ್ಮಲ್ಲಿ ಪ್ರಾಥಮಿಕ ಲಸಿಕೆಗಳ ಕೊರತೆ ಉಂಟಾಗುತ್ತದೆ.

ಈ ಲಸಿಕೆಗಳ ಬಗ್ಗೆ ಆರೋಗ್ಯ ಮಂತ್ರಿಗಳು ಏನು ಹೇಳುತ್ತಾರೆ? "ಈ ಲಸಿಕೆಗಳು 105 ರಾಷ್ಟ್ರಗಳಲ್ಲಿ ಉಪಯೋಗಿಸಲಾಗುತ್ತಿದೆ. ನಮ್ಮ ದೇಶದಲ್ಲೇಕೆ ಬೇಡ"!

ಭಾರತದ ಮೂರು ಸಾರ್ವಜನಿಕ ಲಸಿಕಾ ಕಂಪನಿಗಳನ್ನು ಮುಚ್ಚಿ, ವ್ಯಾಕ್ಸಿನ್ ಪಾರ್ಕ್ ಪ್ರಾರಂಭಿಸುವ ತರಾತುರಿಗೆ ಏನು ಕಾರಣ ಎಂದು ಈಗ ಸ್ಪಷ್ಟವಾಗುತ್ತದೆ. ಜನರಿಗೇಕೆ ಲಸಿಕೆ ವೈದ್ಯರಿಗೆ ಲಸಿಕೆಗಳು ಎಲ್ಲಿಂದ ಬರುತ್ತಿವೆ? ಎಷ್ಟು ಬೆಲೆ ಮುಂತಾದವುಗಳ ಬಗ್ಗೆ ಮಾಹಿತಿಯೇ ಇಲ್ಲ. ಈಗಿನ ದಿನಗಳಲ್ಲಿ ದುಬಾರಿ ಲಸಿಕೆಗಳನ್ನು ಹಾಕಿಸಲು ತಂದೆ ತಾಯಂದಿರಿಗೆ ವೈದ್ಯರು ಪುಸಲಾಯಿಸುತ್ತಿದ್ದಾರೆ ಹಾಗೂ ಜನರೂ ಮುಂದಾಗಿದ್ದಾರೆ. ಪಲ್ಸ್ ಪೋಲಿಯೋ ಕಾರ್ಯಕ್ರಮ ಸರ್ಕಾರಿ ಕಾರ್ಯಕ್ರಮ, ಕೇವಲ ಬಡವರಿಗೆ ಮೀಸಲಾದದ್ದು ಎಂಬ ನಂಬಿಕೆಯೇ ಇದೆ. ಸರ್ಕಾರ ಗ್ಲಾಮರಸ್ ಜಾಹಿರಾತು ಕೊಡುವುದನ್ನು ಬಿಟ್ಟು ಲಸಿಕೆಗಳ ಬಗ್ಗೆ ಜನರಿಗೆ ಕನಿಷ್ಟ ತಿಳುವಳಿಕೆಯನ್ನು ಕೊಡಲೂ ಮುಂದಾಗಿಲ್ಲ. ಇದರಿಂದ ಲಸಿಕೆಗಳು ಅಗತ್ಯತೆಗಳಿಗಿಂತ ಒತ್ತಡಕ್ಕೆ ಹೆಚ್ಚು ಪ್ರಾಮುಖ್ಯತೆ ಬಂದಿದೆ ಎಂದು ಸ್ಪಷ್ಟವಾಗುತ್ತದೆ. ○

......ತಂತ್ರಗಾರಿಕೆಯ ರಾಜಕಾರಣ

ಪುಟ 7ರಿಂದ

ಒಪ್ಪಿಕೊಂಡಿತು. ಈಗ ಇದೇ ವಿದೇಶಾಂಗ ನೀತಿಯ ಮೇಲೆ ಬಿಜೆಪಿ ಧಾಳಿ ನಡೆಸುತ್ತಿದೆ.

ಅಮೇರಿಕಾ, ಭಾರತ ಸಂಬಂಧಗಳ ಪ್ರಶ್ನೆಯಲ್ಲಿ ಬಿಜೆಪಿಯ ದೂರು ಏನು? ಭಾರತ, ಅಮೇರಿಕಾಗಳ ಸಂಬಂಧವನ್ನು ಕೇವಲ ಅಣು ಒಪ್ಪಂದದ ಪ್ರಶ್ನೆಯ ಮಟ್ಟಕ್ಕೆ ಇಳಿಸಲಾಗಿದೆ ಅನ್ನುವುದು ಅದರ ಬೊಬ್ಬೆ. ಅಂದರೆ ಅಮೇರಿಕಾ, ಭಾರತಗಳ ನಡುವೆ ಪೂರ್ಣ ಪ್ರಮಾಣದ ಯುದ್ಧ ಮೈತ್ರಿ ಬೇಕು ಅನ್ನುವುದು ಅದರ ಬಯಕೆ. ಎನ್‌ಡಿಎ ಸರ್ಕಾರವು ಭಾರತವು ಅಮೇರಿಕಾದ ಒಬ್ಬ ಕಿರಿಯ ಪಾಲುದಾರನಾಗಲು ತಾನೇ ಪ್ರಯತ್ನಿಸಿದ್ದು.

ಒಟ್ಟಾರೆ ಬಿಜೆಪಿಯ ಕಾರ್ಯಕಾರಿಣಿ ದೇಶಕ್ಕೆ ಮತ್ತೊಮ್ಮೆ ಸ್ಪಷ್ಟಪಡಿಸಿದ್ದೇನೆಂದರೆ, ಬಿಜೆಪಿಗೆ ದೇಶ ಆಳುವ ಅರ್ಹತೆಯಿಲ್ಲ. ಅದರದ್ದು ಅಪಾಯಕಾರಿ ಕೋಮುವಾದಿ ರಾಜಕೀಯ. ಮಾತ್ರವಲ್ಲ, ದೊಡ್ಡ ಬಂಡವಾಳಿಗರಿಗೆ ಡೊಗ್ಗು ಸಲಾಮು ಹಾಕುವ, ಅಮೇರಿಕಾದ ಬೂಟು ನೆಕ್ಕುವ ನೀತಿ ಅದರದ್ದು. ಅಧಿಕಾರದಲ್ಲಿರುವ ಕಡೆ ವ್ಯಾಪಕ ಭ್ರಷ್ಟಾಚಾರ.

ಇದನ್ನು ಎದುರಿಸುವುದು ಹೇಗೆ? ಕೇಂದ್ರ ಯುಪಿಎ ಸರ್ಕಾರಕ್ಕೆ ಇದನ್ನೇ ದುರಿಸುವ ಮನಸ್ಸು ಶಕ್ತಿ ಎರಡೂ ಇಲ್ಲ. ಅದು ತಪ್ಪು ನೀತಿಗಳ ಹಾದಿ ಹಿಡಿದು ಹೊರಟಿದೆ. ಇದರ ಲಾಭವನ್ನು ಹೊಡೆದುಕೊಳ್ಳಲು ಬಿಜೆಪಿಯಂತಹ ಜನವಿರೋಧಿ ಶಕ್ತಿಗಳಿಗೆ ಅವಕಾಶ ನೀಡದಿರು ವುದು ನಮ್ಮ ದೇಶದ ಜನ ಚಳುವಳಿಗಳ ಮುಂದಿರುವ ಸವಾಲು.

ಬೆಲೆ ಏರಿಕೆಯ ವಿರುದ್ಧ ಸಿಡಿದ ಜನತೆಯ ಆಕ್ರೋಶ

ರಾಜ್ಯಾದ್ಯಂತ ತೀವ್ರ ಪ್ರತಿಭಟನೆ

ಯುಪಿಎ ಕೇಂದ್ರ ಸರ್ಕಾರ ಪೆಟ್ರೋಲ್ ರೂ.5, ಡೀಸೆಲ್ ರೂ.3, ಹಾಗೂ ಅಡುಗೆ ಅನಿಲ ರೂ.50 ಹೆಚ್ಚಳ ಮಾಡಿ ಕಾರ್ಮಿಕರು, ಮಧ್ಯಮ ವರ್ಗದ ನೌಕರರು ಹಾಗೂ ಜನಸಾಮಾನ್ಯರ ಮೇಲೆ ತೀವ್ರ ಹೊರೆಯನ್ನೂ ಹಾಕಿರುವುದನ್ನು ಖಂಡಿಸಿ ದೇಶವ್ಯಾಪಿಯಾಗಿ ಎಡ ಪಕ್ಷಗಳು ಕರೆ ನೀಡಿದ ಚಳುವಳಿಗೆ ವ್ಯಾಪಕವಾಗಿ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದಿವೆ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನೇತೃತ್ವದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲೂಕುಗಳಲ್ಲಿ ಬೆಲೆ ಏರಿಕೆ ಖಂಡಿಸಿ ನಡೆದ ಪ್ರತಿಭಟನೆಗಳ ವರದಿ.

ಬೆಂಗಳೂರು : ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿ ಕರೆ ನೀಡಿದ್ದ ಪ್ರತಿಭಟನೆಗೆ ಬೆಂಗಳೂರಿನ ಹಡ್ಸನ್ ವೃತ್ತದ(ಕಾರ್ಪೋರೇಷನ್) ಬಳಿ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ನಿಯಂತ್ರಿಸಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ತೆರಿಗೆ ಕಡಿತ, ಖಾಸಗಿ ಪೆಟ್ರೋಲಿಯಂ ಕಂಪೆನಿಗಳ ಆದಾಯದ ಮೇಲೆ ತೆರಿಗೆ ಹೇರಿಕೆ, ಇಂಧನ ರಫ್ತು ತಡೆ ಮತ್ತಿತರ ವಿಧಾನಗಳನ್ನು ಹಾಗೂ ಎಡ ಪಕ್ಷಗಳ ಪರ್ಯಾಯ ವಿಧಾನಗಳನ್ನು ಅನುಸರಿಸಬೇಕು ಎಂದು ಒತ್ತಾಯಿಸಿದರು. ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ನ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಸಮಿತಿ ಸದಸ್ಯರು ಮತ್ತು ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್ ಹಾಗೂ ಕೆ.ಎನ್ ಉಮೇಶ ಭಾಗವಹಿಸಿದ್ದರು. ಸುಮಾರು ನೂರರಷ್ಟು ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ತುಮಕೂರು : ಎಡ ಪಕ್ಷಗಳ ವಿರೋಧದ ನಡುವೆಯೂ ಕೇಂದ್ರ ಸರ್ಕಾರ ಬೆಲೆ ಹೆಚ್ಚಿಸಿರುವುದನ್ನು ಖಂಡಿಸಿ ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು ಮತ್ತು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಗರದ ಟೌನ್‌ಹಾಲ್ ವೃತ್ತದಿಂದ ಬಿಎಸ್‌ಎನ್‌ಎಲ್ ಕಛೇರಿಯವರೆಗೂ ಮೆರವಣಿಗೆ ಮೂಲಕ ತೆರಳಿ ನಂತರ ಕೇಂದ್ರ ಸರ್ಕಾರದ ಭೂತ ದಹನ ನಡೆಸಿದರು.


ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರು ಹಾಗೂ ಜಿಲ್ಲಾ ಕಾರ್ಯದರ್ಶಿಯಾದ ಸೈಯದ್ ಮುಜೀಬ್ ಅವರು ಬೆಲೆ ಹೆಚ್ಚಳಕ್ಕೆ ಕಾರಣವಾಗಿರುವ ತೈಲ, ಬೆಲೆಯ ಮೇಲೆ ತೆರಿಗೆ ನೀತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ ನ ಎನ್.ಶಿವಣ್ಣ, ಗಿರೀಶ್, ಕಂಬೇಗೌಡ, ಹೆಂಜಾರಪ್ಪ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರು ಬಿ.ಉಮೇಶ್, ಸಿಐಟಿಯುವಿನ ಎನ್.ಕೆ.ಸುಬ್ರಹ್ಮಣ್ಯ, ರಫೀಕ್ ಅಹ್ಮದ್, ಮುಂತಾದವರು ಸೇರಿ ಸುಮಾರು 150ಕ್ಕು ಹೆಚ್ಚು ಜನರು ಭಾಗವಹಿಸಿದ್ದರು.


ಮಂಡ್ಯ : ಮಳವಳ್ಳಿಯಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ), ಡಿವೈಎಫ್ಐ, ಜೆಎಂಎಸ್ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆಯ ಮೂಲಕ ಅನಂತರಾವ್ ವೃತ್ತದಲ್ಲಿ ಮಾನವ ಸರಪಳಿ ನಡೆಸಿ ಕೇಂದ್ರ ಸರ್ಕಾರದ ವಿರುದ್ದ ಘೋಷಣೆ ಕೂಗಿದರು, ಕೂಡಲೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಕಡಿತಗೊಳಿಸ ಬೇಕೆಂದು ಆಗ್ರಹಿಸಿದರು.

ಕೇಂದ್ರವು ತೈಲ ಬೆಲೆ ಸ್ಥಿರೀಕರಣ ನಿಧಿ ಸ್ಥಾಪಿಸಬೇಕು, ತೈಲ ಉತ್ಪಾದಿಸುವ ಖಾಸಗಿ ಕಂಪನಿಗಳ ಮೇಲೆ ಹೆಚ್ಚು ತೆರಿಗೆ ವಿಧಿಸಬೇಕು ಹಾಗೂ ರಾಜ್ಯ ಸರ್ಕಾರ ತೈಲ ಮಾರಾಟದ ಮೇಲೆ ತೆರಿಗೆಯನ್ನು ಕಡಿತಗೊಳಿಸಬೇಕೆಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಡಿವೈಎಫ್ಐ ಮುಖಂಡರುಗಳಾದ ಆರ್. ಕೃಷ್ಣ, ಟಿ.ಎಲ್.ಕೃಷ್ಣೇಗೌಡ, ನಾಗರಾಜು, ಲಿಂಗರಾಜ ಮೂರ್ತಿ, ಕೆಂಪರಾಜು, ಜವರಯ್ಯ, ಹೊಂಬಯ್ಯ, ಸುಜಾತ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಂಚಾಲಕಿ ದೇವಿ, ಸುನೀತ, ಪದ್ಮ, ಶಾರದ ಮುಂತಾದವರು ಪಾಲ್ಗೊಂಡಿದ್ದರು.



ದಾವಣಗೆರೆ : ದಾವಣಗೆರೆಯಲ್ಲಿ ಸುಮಾರು 60 ಕ್ಕೂ ಹೆಚ್ಚು ಸಿಪಿಐ(ಎಂ) ಸದಸ್ಯರುಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಕೇಂದ್ರ ಸರ್ಕಾರದ ಹಣಕಾಸು ಸಚಿವರಾದ ಚಿದಂಬರಂ



ಅವರ ಪ್ರತಿಕೃತಿ ದಹಿಸಲಾಯಿತು.

ಚಿತ್ರದುರ್ಗದಲ್ಲಿ ಪ್ರತಿಭಟನೆ ನಡೆಸುವ ತಯಾರಿ ನಡೆಯುತ್ತಿರುವ ವರದಿ ಬಂದಿದೆ. ವಿವಿಧ ಸಂಘಟನೆಗಳು ಸೇರಿ ಕರೆ ನೀಡಲಾಗಿದ್ದ ದಾವಣಗೆರೆ ಬಂದ್ ಜೂನ್ 7 ರಂದು ಯಶಸ್ವಿಯಾಗಿದೆ.

ಮೈಸೂರು : ಕೇಂದ್ರ ಸರ್ಕಾರ ಬೆಲೆ ಏರಿಕೆಯನ್ನೂ ಪ್ರತಿಭಟಿಸಿ ನಗರದ ಪುರಭವನದ ಎದುರಿಗೆ ಸುಮಾರು 150ಕ್ಕೂ ಹೆಚ್ಚು ಸಿಪಿಐ(ಎಂ) ಹಾಗೂ ಸಿಐಟಿಯುವಿನ ಕಾರ್ಯಕರ್ತರು ಭಾಗವಹಿಸಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಕೂಡಲೇ ವಾಪಾಸ್ಸು ಪಡೆಯಬೇಕೆಂದು ಒತ್ತಾಯಿಸಿದರು.

ಉತ್ತರ ಕನ್ನಡ : ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಮತ್ತು ದಾಂಡೇಲಿಯಲ್ಲಿ ಪ್ರತಿಭಟನೆ ನಡೆದಿವೆ. ಅಂಕೋಲದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಗಿದೆ. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ್, ಮುಂತಾದವರು ಪಾಲ್ಗೊಂಡಿದ್ದರು.

ದಾಂಡೇಲಿಯಲ್ಲಿ ಜಿಲ್ಲಾ ಮುಖಂಡರಾದ ಹೆಚ್.ಬಿ.ನಾಯಕ್, ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಶ್ಯಾಂಸನ್ ರವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಳ್ಳಾರಿ : ಪೆಟ್ರೋಲ್ , ಡೀಸೆಲ್ ಹಾಗೂ ಅಡುಗೆ ಅನಿಲ ದರ ಏರಿಕೆಯನ್ನು ವಿರೋಧಿಸಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿಯಲ್ಲಿ ಪ್ರತಿಭಟನೆ ನಡೆಸಿದರು. 70 ರಿಂದ 80 ಕ್ಕೂ ಹೆಚ್ಚು ಜನರು ಭಾಗವಹಿಸಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ರೋಖೋ ಕಾರ್ಯಕ್ರಮ ನಡೆಸಿದರು.

ಗದಗ : ಗದಗ ನಗರದಲ್ಲಿ ತೈಲ ಬೆಲೆ ಏರಿಕೆಯ ಕ್ರಮವನ್ನು ಖಂಡಿಸಿ ಗಾಂಧಿ ಸರ್ಕಲ್ ನಲ್ಲಿ ಯುಪಿಎ ಸರ್ಕಾರದ ಭೂತದಹನ ಮಾಡಿದರು. ಸುಮಾರು 50 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಪ್ರತಿಭಟನಾ ನೇತೃತ್ವವನ್ನು ಜಿಲ್ಲಾ ಸಂಘಟನಾ ಮುಖಂಡರಾದ ಬಿ.ಎಸ್.ಸೊಪ್ಪಿನ, ಬಸವರಾಜ ಮಾಥೂರು , ಕುರಹಟ್ಟಿ, ಮಹೇಶ ಪತ್ತಾರ, ಮರದ್, ವಿಠಲ್ ನಾಯಕ್ ಹೊಸಮನಿ ಮುಂತಾದವರು ವಹಿಸಿದ್ದರು. ಸೋಮವಾರ ದಿನಾಂಕ 9 ರಂದು ಧಾರವಾಡದಲ್ಲಿ ಪ್ರತಿಭಟನೆ ನಡೆಯಲಿದೆ.

ರಾಯಚೂರು : ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ಕ್ರಮವನ್ನು ಖಂಡಿಸಿ ಹಾಗೂ ರಾಜ್ಯ ಸರ್ಕಾರ ತೆರಿಗೆಯನ್ನು ಕಡಿತಗೊಳಿಸುವಂತೆ ಆಗ್ರಹಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಎತ್ತಿನಗಾಡಿಯಲ್ಲಿ ಸೈಕಲ್ ಮೋಟರ್ ಹಾಗೂ ಗ್ಯಾಸ ಸಿಲಿಂಡರನ್ನು ಹೊತ್ತು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ನಂತರ ಜಿಲ್ಲಾಧಿಕಾರಿಗಳಿಗೆ ಬೆಲೆ ಏರಿಕೆಯು ಜನತೆಯ ಮೇಲಿನ ಹೊರೆಯಾಗಿದೆ ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು ಈ ಪ್ರತಿಭಟನೆಯಲ್ಲಿ ಸುಮಾರು 100 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು ಹಾಗೂ ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್ಐನ ಶರಣ ಬಸವ, ಕೆ.ಜಿ.ವಿರೇಶ, ವೀರಣ್ಣ, ವೈ, ಶ್ಯಾಮಸುಂದರ, ಖಾಜಿ ಹುಸೇನ್, ವರಲಕ್ಷ್ಮಿ, ಪದ್ಮ, ಶಿವಕುಮಾರ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕರಿಯಪ್ಪ ಅಚ್ಚೊಳ್ಳಿ ಇವರು ವಹಿಸಿದ್ದರು.

ರಾಮದುರ್ಗ : ರಾಮದುರ್ಗದಲ್ಲಿ ಕೂಡಾ ಬೆಲೆ ಏರಿಕೆಯನ್ನು ಖಂಡಿಸಿ ಸುಮಾರು 300ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಭಾಗವಹಿಸಿ ಪಕ್ಷದ ಕಛೇರಿಯಿಂದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲೂಕಾ ಕಛೇರಿಯಲ್ಲಿ ಮನವಿಯನ್ನು ಸಲ್ಲಿಸಿದರು ರಾಜ್ಯದಲ್ಲಿ ಯಾವುದೇ ರೀತಿಯಲ್ಲಿ ಬೆಲೆ ಹೆಚ್ಚಳ ಮಾಡಬಾರದು ಹಾಗೂ ಈ ಕೂಡಲೇ ಬೆಲೆ ಏರಿಕೆಯನ್ನು ವಾಪಾಸ್ಸು ಪಡೆಯಬೇಕೆಂದು ಒತ್ತಾಯಿಸಿದರು.

ಪಕ್ಷದ ತಾಲ್ಲೂಕ ಕಾರ್ಯದರ್ಶಿ ಗೈಬು ಜೈನೆಖಾನ್, ನಾಗಪ್ಪ ಸಂಗೊಳ್ಳಿ, ವಿ.ಪಿ.ಕುಲಕರ್ಣಿ, ಎಸ್.ಬಿ.ಹಳ್ಳಿ ಇನ್ನೂ ಮುಂತಾದ ಕಾರ್ಯಕರ್ತರು ಪಾಲ್ಗೊಂಡು ಪ್ರತಿಭಟನೆಯನ್ನು ಯಶಸ್ವಿಗೊಳಿಸಿದರು.

ವಿರಾಜಪೇಟೆ : ವಿರಾಜಪೇಟೆ, ಸಿದ್ದಪುರ, ನೆಲ್ಲುಹೊದಿಕೆ, ಚಟ್ಟಹಳ್ಳಿ ಕಡೆಗಳಲ್ಲಿ ಸುಮಾರು 40 ರಿಂದ 50 ಜನ ಕಾರ್ಯಕರ್ತರು ಯುಪಿಎ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. ನಂತರ ತಾಲ್ಲೂಕಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬಿಜಾಪುರ : ದಿನಾಂಕ ಜೂನ್ 6, 2008 ರಂದು ಪೆಟ್ರೋಲಿಯಂ ತೈಲ ಬೆಲೆ ಏರಿಕೆಯನ್ನು ಖಂಡಿಸಿ ಜಿಲ್ಲಾಧಿಕಾರಿ ಕಛೇರಿ ಎದುರು ಸುಮಾರು 100ಕ್ಕೂ ಹೆಚ್ಚೂ ಪಕ್ಷದ ಸದಸ್ಯರು ಸೇರಿ ಪ್ರತಿಭಟನಾ ಧರಣಿ ನಡೆಸಿದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಗಳಾದ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಅಣ್ಣರಾಯ ಈಳಗೇರಾ, ಭೀಮಸಿ ಕಲಾಧಗಿ, ಹೀರೆಮಠ್, ವಿ.ಎಂ.ಸೊನ್ನದ್, ಲಕ್ಷ್ಮಿ ಮೈಲಾರಿ, ಜಯಾಪವಾರ, ಇತರೆ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿ ಜಿಲ್ಲಾಧಿಕಾರಿಗಳಿಗೆ ಬೆಲೆ ಏರಿಕೆ ಕಡಿತಗೊಳಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಹಾಸನ : ತೈಲ ಬೆಲೆ ಏರಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ಹಾಸನದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಜಿಲ್ಲಾಧಿಕಾರಿ ಕಛೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ದೇಶದ ಜನತೆಗೆ ಈಗಾಗಲೇ ಬೆಲೆ ಏರಿಕೆಯಿಂದ ತತ್ತಾರಿಸಿದಂತಾಗಿದ್ದು, ಈ ಸಂದರ್ಭದಲ್ಲಿ ಪೆಟ್ರೋಲಿಯಂ ತೈಲ ಬೆಲೆಗಳನ್ನು ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ವಿದೇಶಿ ಕಂಪನಿಗಳು ಲಾಭ ಪಡೆಯುವ ಹುನ್ನಾರದಿಂದ ಕಚ್ಚಾ ತೈಲ ಬೆಲೆ ಏರಿಕೆಯಾಗಿದೆ ಎಂದರು.

ಜನತೆಯ ಮೇಲೆ ಹೊರೆ ತಪ್ಪಿಸಲು ಎಡಪಕ್ಷಗಳು ನೀಡಿದ ವೈಜ್ಞಾನಿಕ ಸಲಹೆಗಳನ್ನು ಕೇಂದ್ರ ಸರ್ಕಾರ ಕಡೆಗಣಿಸಿದೆ, ಖಾಸಗಿ ಕಂಪನಿಗಳ ಹಿತ ಕಾಪಾಡಲು ಸಾರ್ವಜನಿಕರನ್ನು ಬಲಿಪಶು ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಇಂದನ ಬೆಲೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು. ಪ್ರತಿಭಟನಾ ನೇತೃತ್ವವನ್ನು ಧರ್ಮೇಶ್ ಮುಂತಾದ ಮುಖಂಡರು ವಹಿಸಿದ್ದರು.


ವರದಿ : ಕರಿಬಸಪ್ಪ, ಪಿ


ಗುಲ್ಬರ್ಗಾ ಬಂದ್

ಯುಪಿಎ ನೇತೃತ್ವ ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ವಿರೋಧಿಸಿ ಎಡ ಪಕ್ಷಗಳಾದ ಸಿಪಿಐ(ಎಂ) ಹಾಗೂ ಸಿಪಿಐ ನೇತೃತ್ವದಲ್ಲಿ ಜೂನ್ 6 ರಂದು ಗುಲ್ಬರ್ಗ ಬಂದ್ ಕರೆ ಯಶಸ್ವಿಯಾಯಿತು.

ನಗರದ ಎಲ್ಲಾ ಅಂಗಡಿ -ಮುಂಗಟ್ಟುಗಳನ್ನು ಸಂಜೆಯವರೆಗೆ ಮುಚ್ಚಲಾಗಿತ್ತು. ಬಸ್ ನಿಲ್ದಾಣದಲ್ಲಿ ಎಲ್ಲಾ ಬಸ್ಸುಗಳು ಸಾಲಾಗಿ ನಿಂತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮಧ್ಯಾಹ್ನದವರೆಗೆ ಎಲ್ಲಾ ರೀತಿಯ ಬಸ್ ಪ್ರಯಾಣವನ್ನು ನಿಲ್ಲಿಸಲಾಗಿತ್ತು. ಎಲ್ಲಾ ಶಾಲಾ - ಕಾಲೇಜ್ ಗಳಿಗೆ ರಜೆ ಘೋಷಿಸಿದ್ದರು.

ಸಿಪಿಐ ಹಾಗೂ ಸಿಪಿಐ(ಎಂ) ಪಕ್ಷಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆಸಿ ಗುಲ್ಬರ್ಗಾ ಜಿಲ್ಲಾಧಿಕಾರಿಯವರ ಮೂಲಕ ಪ್ರಧಾನ ಮಂತ್ರಿಗಳಿಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು. ಈ ಪ್ರತಿಭಟನಾ ಮೆರವಣಿಗೆಯಲ್ಲಿ ಸಿಪಿಐ(ಎಂ)ನ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಸಿಪಿಐ ನ ರಾಜ್ಯ ಘಟಕದ ಸದಸ್ಯರಾದ ಶೌಕತ ಅಲಿ ಆಲೂರು, ಮುಂತಾದ ಮುಖಂಡರುಗಳು ಭಾಗವಹಿಸಿದ್ದರು.





ಬಂದ್ ದಿನದ ಹೌರಾ ರೈಲು ನಿಲ್ದಾಣ

ಅಧಿಕಾರದ ಗದ್ದುಗೆಗೇರಲು ಮೆಟ್ಟಿಲಾಗಿ ಗುಜ್ಜಾರ್ ಜನಾಂಗವನ್ನು ಬಳಸಿಕೊಂಡ ವಿಜಯರಾಜೇ ಸಿಂಧೆ ವಚನ ಪಾಲಿಸಿ ಎಂದುಕೇಳಿದವರನ್ನು ಗುಂಡಿಟ್ಟು ಕೊಂದಿದ್ದಾರೆ. ತಾನಿನ್ನು ಪಾಳೇಗಾರಿ ರಾಣಿಯೆಂದೇ ಭ್ರಮಿಸಿರುವ ವಿಜಯರಾಜೇ ಸಿಂಧೆಗೆ ಪಾಠ ಕಲಿಸಲು ಜನ ಬೀದಿಗಿಳಿದಿದ್ದಾರೆ.

ರಾಜಸ್ಥಾನ

ರಾಜಕುಮಾರಿಗೆ ಸಿಂಹಾಸನ ಗುಜ್ಜಾರರಿಗೆ ಗುಂಡು!

ಭಾರತದಲ್ಲಿ ಜಾತಿ ಎಂಬುದು ತುಂಬಾ ಸಂಕೀರ್ಣವಾದ ವ್ಯವಸ್ಥೆ. ಇದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ದೇಶದ ಅಭಿವೃದ್ಧಿಗೆ ಪೂರಕವಾಗಿ ಮುಂದಕ್ಕೊಯ್ಯುವುದು ತುಂಬಾ ಕ್ಲಿಷ್ಟಕರವಾದ ಪ್ರಕ್ರಿಯೆ. ಹಾಗೆಂದು ಸುಮ್ಮನಿರುವಂತಹ ಸಾಮಾನ್ಯ ವಿಷಯವೂ ಅಲ್ಲ. ಇದು ಈ ಸಮಸ್ಯೆಯ ಒಂದು ಮುಖ. ಮತ್ತೊಂದು ಕರಾಳವಾದ ಮುಖ ಎಂದರೆ ರಾಜಕಾರಣಿಗಳು ಅಧಿಕಾರ ಹಿಡಿಯಲು ಜಾತಿ, ಧರ್ಮವನ್ನು ಸುಪ್ಪತ್ತಿಗೆಯ ಸೋಪಾನವಾಗಿ ಬಳಕೆ ಮಾಡಿಕೊಳ್ಳುತ್ತಿರುವುದು. ಅದರ ಪರಿಣಾಮವೇ ಉತ್ತರ ಭಾರತದಲ್ಲಿ ಈಗ ನಡೆಯುತ್ತಿರುವ ಗುಜ್ಜಾರ್ ಜನಾಂಗದ ಚಳುವಳಿ.

ಭಾರತೀಯ ಜನತಾ ಪಕ್ಷದ ಅಧಿಕಾರ ಹಿಡಿಯುವ ಹಂಬಲದ ಅನೈತಿಕ ರಾಜಕಾರಣದ ಕೂಸೇ ಈ ಗಲಭೆ. 2007ರಲ್ಲಿ ನಡೆದ ಗಲಭೆಗಳಿಗೆ ಇಡೀ ಉತ್ತರ ಭಾರತ ತತ್ತರಿಸಿತ್ತು. 2008ರಲ್ಲಿ ಮತ್ತೆ ಮರುಕಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಸಾವಿನ ಸಂಖ್ಯೆ ದುಪ್ಪಟ್ಟಾಗಿದೆ.

ಗುಜ್ಜಾರ್ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಿದರೆ ಮೀಸಲಾತಿ ಅಡಿಯಲ್ಲಿ ತನ್ನ ಮಗನಿಗೆ ಕೆಲಸ ಸಿಗಲಿದೆ ಎಂಬ ಮಹತ್ವಾಕಾಂಕ್ಷೆಯಿಂದ 70 ವರ್ಷದ ನಕಾರಾಂ ಮತ್ತು ಅವನ ಪುತ್ರ 18 ವರ್ಷದ ಗೋಕುಲ್ ಇಬ್ಬರೂ ಚಳುವಳಿಗೆ ಧುಮುಕಿದರು. ಆದರೆ ಸಂಜೆ ವೇಳೆಗೆ ಗೋಕುಲ್ ಪೊಲೀಸ್‌ರ ಗೋಲಿಬಾರ್‌ಗೆ ತುತ್ತಾಗುತ್ತಾನೆಂದು ನಕಾರಾಂ ಎಂದೂ ಊಹಿಸಿರಲೇ ಇಲ್ಲ. ಹೀಗೆ ಅದೆಷ್ಟೋ ಅಮಾಯಕರು ಪೊಲೀಸರ ಗುಂಡಿಗೆ ಬಲಿಯಾಗಿದ್ದಾರೆ.

ವಸುಂಧರ ರಾಜೆ ಸಿಂಧ್ಯಾ ನೇತೃತ್ವದ ರಾಜಸ್ಥಾನದ ಸರ್ಕಾರ ಆರಂಭದಲ್ಲೇ 'ಗುಜ್ಜಾರ್ ಆರಕ್ಷಣ ಸಂಘರ್ಷ ಸಮಿತಿ'ಯೊಂದಿಗೆ ಮಾತುಕತೆ ನಡೆಸಿದ್ದಲ್ಲಿ ಈ ಗಲಭೆಗಳನ್ನು ತಡೆಯಬಹುದಾಗಿತ್ತು. ಆದರೆ ಆಯುಮ್ಮ ಐಪಿಎಲ್ ಕ್ರಿಕೆಟ್ ಮೋಜಿನಲ್ಲಿ ಇದ್ದುದರಿಂದ ಇತ್ತ ಗಮನ ಹರಿಸಲು ಸಾಧ್ಯವಾಗಿಲ್ಲ.

ಕಳೆದ ವರ್ಷ ಮೇ 29ರಂದು ಮೃತರಾದವರ ಸ್ಮರಣಾರ್ಥ ಶ್ರದ್ಧಾಂಜಲಿ ದಿನ ಆಚರಿಸುವುದಾಗಿ ಸಂಘರ್ಷ ಸಮಿತಿ ಮೊದಲೇ ತಿಳಿಸಿತ್ತು. ಕಳೆದ ತಿಂಗಳು 28ರಂದು ರಸ್ತೆ ತಡೆ, ರೈಲು ತಡೆ ನಡೆಸುವುದಾಗಿಯೂ ಘೋಷಿಸಿತ್ತು. ರಾಜಸ್ಥಾನ ಸರ್ಕಾರ ಇದ್ಯಾವುದನ್ನೂ ತಲೆಗೆ ಹಾಕಿಕೊಳ್ಳಲಿಲ್ಲ. ಈ ನಿರ್ಲಕ್ಷ್ಯತೆಯ ಪರಿಣಾಮವೇ ಇಡೀ ಉತ್ತರ ಭಾರತ ಹೊತ್ತಿ ಉರಿಯುತ್ತಿರುವುದು. ಗುಜ್ಜಾರ್ ಜನಾಂಗವನ್ನು ಎಸ್‌ಟಿ ಪಂಗಡಕ್ಕೆ ಸೇರಿಸಲೇಬೇಕೆಂದು ಅವರು ಪಟ್ಟು ಹಿಡಿದಿದ್ದಾರೆ.

ಗುಜ್ಜಾರ್ ಜನಾಂಗದ ಮುಂದಿರುವ ಸಮಸ್ಯೆಗಳ ಕುರಿತು ಪರಿಶೀಲನೆಗೆ 2007ರಲ್ಲಿ ಜಸ್‌ರಾಜ್ ಚೋಪ್ರಾ ಸಮಿತಿ ರಚಿಸಲಾಗಿತ್ತು. ಸಮಿತಿ ಮಾಡಿರುವ ಹಲವಾರು ಶಿಫಾರಸುಗಳಲ್ಲಿ, ಗುಜ್ಜಾರ್ ಜನಾಂಗ ನೆಲೆಸಿರುವ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಬೇಕೆಂಬುದೂ ಒಂದಾಗಿದೆ. ಪ್ರಸಕ್ತ ವರ್ಷದ ಮೇ 17ರಂದು 282 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಪ್ರಕಟಿಸಲಾಗಿದೆ. ಆದರೂ ತಮ್ಮ ಮೂಲ ಬೇಡಿಕೆಯಾದ ಎಸ್‌ಟಿ ವಿಭಾಗಕ್ಕೆ ಸೇರ್ಪಡೆ ಮಾಡಲೇಬೇಕೆಂಬುದು ಅವರ ಬಿಗಿ ಪಟ್ಟಾಗಿದೆ.



ಕನಿಷ್ಠ ಪಕ್ಷ ಗುಜ್ಜಾರ್ ಜನಾಂಗವನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆಯೇ ಎಂಬ ಪ್ರಶ್ನೆಗೆ ವಸುಂಧರ ರಾಜೆ ಬಳಿ ಉತ್ತರ ಇಲ್ಲ. ಗುಜ್ಜಾರ್ ಜನಾಂಗವನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಭರವಸೆಯೊಂದಿಗೆ ಬಿಜೆಪಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮತ ಗಳಿಸಿತ್ತು. ಇನ್ನೇನು ಚುನಾವಣೆ ಹತ್ತಿರವಾಗುತ್ತಿದ್ದು ಅಂತಹ ಪ್ರಯತ್ನಕ್ಕೆ ಮುಂದಾದರೆ, ಈಗಾಗಲೆ ಎಸ್‌ಟಿ ಪಟ್ಟಿಯಲ್ಲಿರುವ ಮತ್ತೊಂದು ಬಲಿಷ್ಠ ಸಮುದಾಯ ಮೀನ ಜನಾಂಗದ ಆಕ್ರೋಶಕ್ಕೆ ಬಿಜೆಪಿ ಗುರಿಯಾಗಬೇಕಾಗುತ್ತದೆ. ಇದು ಇಲ್ಲಿನ ರಾಜಕೀಯ ಸಂದಿಗ್ಧವಾಗಿದೆ. ಮತಗಳ ಮೇಲೆ ನೋಟ ನೆಟ್ಟಿದ ಬಿಜೆಪಿ. ಪರಿಸ್ಥಿತಿಯನ್ನು ನಿಭಾಯಿಸಲು ಪ್ರಾಮಾಣಿಕ ಪ್ರಯತ್ನ ಮಾಡದ ಸಿಂಧೆ ಡಕಾಯಿತರು ಮತ್ತು ಸಮಾಜ ಘಾತಕ ಶಕ್ತಿಗಳು ಈ ಚಳುವಳಿಯನ್ನು ಉದ್ರೇಕಿಸುತ್ತಿದ್ದು ಸರ್ಕಾರಕ್ಕೆ ಬೆದರಿಕೆ ಒಡ್ಡಿದ್ದಾರೆ ಎಂಬ ಬೇಜವಾಬ್ದಾರಿ ಹೇಳಿಕೆ ನೀಡುತ್ತಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋದ ಅವರು 'ನಮ್ಮ ಜನಾಂಗದಷ್ಟು ಕೆಟ್ಟ ಜನ ಮತ್ತೊಬ್ಬರಿಲ್ಲ' ಎಂತಲೂ ಹೇಳಿದ್ದಾರೆ. ಈ ಹೇಳಿಕೆ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಪ್ರಸಾರವಾಯಿತು. ಉರಿಯುತ್ತಿರುವ ಬೆಂಕಿಗೆ ಪೆಟ್ರೋಲ್ ಸುರಿದಂತಾಗಿದೆ. ಇಷ್ಟು ಮಾತ್ರವಲ್ಲದೆ ಸತ್ತಿರುವ 40 ಗುಜ್ಜಾರರಲ್ಲಿ ಹೆಚ್ಚಿನ ಮಂದಿ ಅವರ ನಡುವೆ ನಡೆದ ಗುಂಪಿನ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ರಾಜ[illegible]ನ ಆರೋಗ್ಯ ಸಚಿವ ದಿಗಂಬರ್‌ಸಿಂಗ್ ಹೇಳುವುದು ಗಲಭೆಗಳನ್ನು ಇನ್ನಷ್ಟು ತೀವ್ರಗೊಳಿಸಿದೆ. ಜವಾಬ್ದಾರಿ ಸ್ಥಾನದಲ್ಲಿರುವವರ ಇಂತಹ ಹೇಳಿಕೆಗಳನ್ನು ಪ್ರತಿಯೊಬ್ಬ ಭಾರತೀಯನೂ ಖಂಡಿಸಲೇಬೇಕಾದಂತದ್ದು.

ದಬ್ಬಾಳಿಕೆ – ದಾಳಿ

ತಮ್ಮ ಹೇಳಿಕೆಗಳನ್ನು ತಿದ್ದಿಕೊಳ್ಳದ ರಾಜಸ್ಥಾನ ಸರ್ಕಾರ ಚಳುವಳಿಯನ್ನು ಹತ್ತಿಕ್ಕಲು ಯಥೇಚ್ಛವಾಗಿ ರಕ್ಷಣಾ ಸಿಬ್ಬಂದಿಯನ್ನು ನಿಯೋಜಿಸಿದೆ. ಸಮಸ್ಯೆ ನಿವಾರಣೆಗೆ ಸೂಕ್ತ ರಾಜಕೀಯ ಪರಿಹಾರ ಕಂಡುಕೊಳ್ಳುವಲ್ಲಿ ಕಿಂಚಿತ್ತೂ ಪ್ರಯತ್ನ ನಡೆಸದೆ ತನ್ನ ನಿರ್ಲಕ್ಷ್ಯ ಮನೋಭಾವವನ್ನು ಪ್ರದರ್ಶಿಸಿದೆ.

ಇದೇ ಸಂದರ್ಭದಲ್ಲಿ 15 ಜಿಲ್ಲೆಗಳಲ್ಲಿ ರಾಷ್ಟ್ರೀಯ ಭದ್ರತಾ ಕಾಯ್ದೆಯನ್ನು ಜಾರಿ ಮಾಡಿದೆ. ಪರಿಸ್ಥಿತಿಯ ಸಂಪೂರ್ಣ ಅರಿವು ನಮಗಿದ್ದು ನಮ್ಮ ರಕ್ಷಣೆಗಾಗಿ ಸೂಕ್ತ ವ್ಯವಸ್ಥೆ ಮಾಡಿಕೊಂಡಿರುವುದಾಗಿ ಸಿಕಂದರಾ ಮತ್ತು ದೌಸಾ ಜಿಲ್ಲಾಡಳಿತಗಳು ಹೇಳಿವೆ. ಅಂದರೆ ಜನತೆಯ, ರಾಜ್ಯದ ರಕ್ಷಣೆ ಅವರ ಜವಾಬ್ದಾರಿ ಅಲ್ಲ, ಅವರ ವೈಯಕ್ತಿಕ ರಕ್ಷಣೆಯೇ ಅವರ ಜವಾಬ್ದಾರಿಯಾಗಿದೆ ಎಂಬುದು ಇದರಿಂದ ಅರಿವಾಗುತ್ತದೆ. ಆ ಜಿಲ್ಲೆಗಳಿಗೆ ಪತ್ರಕರ್ತರು ತೆರಳದಂತೆಯೂ ಜಿಲ್ಲಾಡಳಿತಗಳು ನಿಷೇಧ ಹೇರಿವೆ. ಆದರೂ ಕೆಲವು ಪತ್ರಕರ್ತರು ಅಲ್ಲಿಗೆ ತೆರಳಿ ಜನತೆಯ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿದ್ದಾರೆ. ಏತನ್ಮಧ್ಯೆ ಗುಜ್ಜಾರ್ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ನಡೆಸಿ ಸಿಂಧ್ಯ, ಗುಜ್ಜಾರ್ ಜನಾಂಗಕ್ಕೆ ಡೀನೋಟಿಫೈಡ್ ಪರಿಶಿಷ್ಟ ವರ್ಗಗಳ ಅಡಿಯಲ್ಲಿ ಶೇ.4 ರಿಂದ 6 ರಷ್ಟು ಮೀಸಲಾತಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತು. ಕೇಂದ್ರ ಸರ್ಕಾರ ಈ ಸಲಹೆಯನ್ನು ಸಾರಾಸಗಟಾಗಿ ತಿರಸ್ಕರಿಸಿತು. ಗುಜ್ಜಾರ್ ಸಂಘರ್ಷ ಸಮಿತಿ ಸಹ ತಿರಸ್ಕರಿಸಿತು.

ಸರ್ಕಾರದ ವಂಚನೆ

ಮುಖ್ಯಮಂತ್ರಿ ಸಿಂಧ್ಯ ಗುಜ್ಜಾರ್‌ರ ಪ್ರಮುಖ ಬೇಡಿಕೆಯನ್ನು ವ್ಯವಸ್ಥಿತವಾಗಿ ನೇಪಥ್ಯಕ್ಕೆ ತಳ್ಳುತ್ತಿದ್ದಾರೆಂದು ಅಲ್ಲಿನ ಇತರ ರಾಜಕೀಯ ಮುಖಂಡರು ಆರೋಪಿಸಿದ್ದಾರೆ.

ಚೋಪ್ರಾ ಸಮಿತಿ ನೀಡಿರುವ ಪ್ಯಾಕೇಜ್ ಪ್ರತ್ಯೇಕವಾಗಿ ಗುಜ್ಜಾರ್ ಸಮುದಾಯಕ್ಕೆ ನೀಡಿರುವುದು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಗುಜ್ಜಾರ್ ಸಮುದಾಯದ ಮಕ್ಕಳು, ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವ, ಉಚಿತ ಶಿಕ್ಷಣ ನೀಡುವ ಯೋಜನೆಗಳಿಲ್ಲ. ಇದು ಸರ್ಕಾರದ ಕಣ್ಣೊರೆಸುವ ಕ್ರಮವಾಗಿದೆ. ಗುಜ್ಜಾರ್ ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕೆಂಬ ಬೇಡಿಕೆ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ. ಚೋಪ್ರಾ ಸಮಿತಿ ಸರ್ಕಾರಕ್ಕೆ ನೀಡಿರುವ 300 ಪುಟಗಳ ವರದಿಯಲ್ಲಿ ಎಲ್ಲೂ ಗುಜ್ಜಾರ್ ಜನಾಂಗವನ್ನು ಎಸ್‌ಟಿ ವರ್ಗಕ್ಕೆ ಸೇರಿಸುವ ಪ್ರಸ್ತಾಪ ಮಾಡಿಲ್ಲ. ಹಾಗಾಗಿ ಇದನ್ನು ಗುಜ್ಜಾರ್ ಸಂಘರ್ಷ ಸಮಿತಿ ಸಂಪೂರ್ಣವಾಗಿ ತಿರಸ್ಕರಿಸಿದೆ.

ರಾಜಸ್ಥಾನದ ಬಿಜೆಪಿ ನೇತೃತ್ವದ ಸರ್ಕಾರದ ಈ ಎಲ್ಲ ವೈಫಲ್ಯಗಳು, ಬೇಜವಾಬ್ದಾರಿ ಕ್ರಮಗಳು ಉತ್ತರ ಭಾರತವನ್ನು ಉರಿಯುವ ಕುಲುಮೆಯನ್ನಾಗಿ ಮಾಡಿದೆ. ಜನ ಚಳುವಳಿಗಳ ಮೇಲೆ 50 ಕ್ಕೂ ಅಧಿಕ ಪ್ರಕರಣಗಳಲ್ಲಿ ಗೋಲಿಬಾರ್ ನಡೆಸಿರುವ ಸಿಂಧ್ಯಾವರ್ತನೆ ಪಾಳೇಗಾರಿಕೆ ದರ್ಪದ್ದಾಗಿದ್ದು, ರಾಜಿನಾಮೆ ನೀಡಿ ತೊಲಗಬೇಕು.

ಬೆಲೆಯೇರಿಕೆ : ಬೆಂಗಳೂರು ಜನ ಏನಂತಾರೆ ?

ಬೆಲೆ ಏರಿಕೆ ಬಿಸಿ ಬಡಜನರ ಬದುಕಿನ ಮೇಲೆ ಆತಂಕಕಾರಿ ಪರಿಣಾಮ ಬೀರುತ್ತಿದೆ. ಮುಂದೇನು........? ಎಂಬ ಪ್ರಶ್ನೆ ಗಾಢವಾಗಿ ಕಾಡಲಾರಂಭಿಸಿದೆ.

ಬೆಂಗಳೂರು ನಗರ ಜಗತ್ತಿನ ಅತ್ಯಂತ ದುಬಾರಿ ನಗರವಾಗಿ ಬೆಳೆಯುತ್ತಿರುವ ಬೆನ್ನಲ್ಲೇ ಬೆಲೆ ಏರಿಕೆ ಇದನ್ನು ಗೊಬ್ಬರ ನೀರು ಹಾಕಿ ಮತ್ತಷ್ಟು ಪೋಷಿಸುತ್ತಿದೆ. ಬೆಲೆ ಏರಿಕೆ ಮಾರಿಯಿಂದ ತತ್ತರಿಸಿರುವ ಸಾಮಾನ್ಯ ಜನ ಬೆಂಗಳೂರು ಸಹವಾಸ ಸಾಕು ಎಂಬಂತಹ ನಿರಾಸೆಯಲ್ಲಿದ್ದಾರೆ. ಸಾಮಾನ್ಯ ಗಾರ್ಮೆಂಟ್ ಕಾರ್ಮಿಕರು, ಬೀದಿ ವ್ಯಾಪಾರಸ್ಥರು, ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಬೆಲೆ ಏರಿಕೆಯ ಕುರಿತು ಒಡಲಾಳದ ನೋವನ್ನು ತೆರೆದಿಟ್ಟಿದ್ದು ಹೀಗೆ.

ಬಡವರಾಗಿ ಹುಟ್ಟಬಾರದು

ಜೀವನವೇ ಸಾಕಾಗಿ[illegible] ...ಮನೆಲಿ [illegible]ಗಳ. ಅದಿಲ್ಲ, ಇವ[illegible] [illegible]ಡೆ ಸ್ಕೂಲ್ ಫೀ[illegible] [illegible]ಿ. [illegible]ನ್ ಕಷ್ಟ [illegible] [illegible]ಬೇಕು ಅಂತ ಓನರ್ [illegible]ರ. [illegible]ದೊಂದು ಕಡೆ ದಿನಸಿ ಬೆಲೆ [illegible] ಹೊಟ್ಟೆ ಮೇಲೆ ತಣ್ಣೀರು ಬಟ್ಟೆ [illegible] [illegible]ಂಗೆ ಆಗಿದೆ ಸಾರ್, ಬೆಂಗಳೂರ[illegible] ಆದ್ರೂ ನೆಮ್ಮದಿ ಜೀವ[illegible] [illegible]ಾರ್. ಸಾಕಾಗೋಗಿ[illegible] ಸಾರ್...

– ನಿಸಾರ್ ಅ[illegible]
[illegible]ಕಾರ್ಮಿ[illegible]

ದಿನಾ ಟಮೋಟೋ ಗೊಜ್ಜು

"ರೇಷನ್ ಅಂಗಡಿಗೆ ಹೋಗೋಕೆ ಭಯ ಆಗುತ್ತೆ ಸಾರ್, ಆಪಾಟ ಬೆಲೆ ಏರದೆ... ಸಂಬಳ ಬ್ಯಾರೆ ಕಡಿಮೆ ಆಗಿದೆ. ಬಿಸಿನಸ್ ಡಲ್ ಅಂತ ಓ.ಟಿ. ಸಿಕ್ತಾಲಿಲ್ಲ. ಓ.ಟಿ. ಏನಾದ್ರು ಸಿಕ್ಕಿದ್ರೆ ಪರ್ವಾಗಿಲ್ಲ. ಕಾಳು ಕಡ್ಡಿ ತರೋದೆ ನಿಲ್ಸಿದ್ದೀವಿ ಸಾರ್, ಅಂಗೂ ಮಕ್ಕೆಲ್ಲಾ ಕೇಳ್ತವೆ... ದಿನಾ ಟಮೋಟೋ ಗೊಜ್ಜು ಮಾಡ್ತಿಯಲ್ಲ ಅಂತ. ಏನ್ಮಾಡೋದು ತರಕಾರಿ ಕಾಳು, ಹಾಕಿ ಸಾರ್ ಮಾಡುವ ಅ[illegible] [illegible]ಿಲ್ಲ... ಅಕ್ಕಿ ರೇಟು [illegible]

[illegible] ಉದ್ಯೋಗಿ.

"ಹಿಂದೆಲ್ಲಾ 800 ರೂಪಾಯಿಂದ 1000 ರೂಪಾಯಿ ತಿಂಗಳು ದಿನಸಿ ಕಾಳು ಕಡ್ಡಿ ತರಕಾರಿಗೆ ಸಾಕಾಗ್ತಾ ಇತ್ತು. ಆದ್ರೆ ಈಗ ಅರ್ಧ ತಿಂಗಳು ಬರೋದು ಕಷ್ಟ ಸಾರ್, ಯಾಪಾರ ಬ್ಯಾರೆ ಕಡಿಮೆಯಾಗಿದೆ. ಪೊಲಿಸ್ನೋರಿಗೆ ಮಾಮೂಲು ಕೊಡಬೇಕು. ಎಲ್ಲಾ ಖರ್ಚು ಕಳೆದ್ರೆ 100ರಿಂದ 150 ರೂಪಾಯಿ ಸಿಗೋದು ಹೆಚ್ಚು ಅನ್ನೋಂಗೆ ಆಗಿದೆ. ಇದರಾಗೆ ಮಕ್ಳ ಫೀಸು, ಬಟ್ಟೆಬರೆ ಅಂತ...... ಯಂಗ್ ಜೀವನ ಸಾಗಿಸ್ಬೇಕು ಅಂತ ತಿಳಿವಲ್ದು ಸಾರ್"

– ಕೃಷ್ಣ ಬೀದಿಬದಿ ವ್ಯಾಪಾರಿ
[illegible]ಸಗಳ ಕೆ[illegible]

[illegible]ರ್ಶನ: ಲಿಂಗರಾಜು



■ ಜಿ.ಎಸ್.ಮಣಿ

ಸಾಲ ಮನ್ನಾ ವೃತ್ತಾಂತ

ಕೇಂದ್ರ ಸರ್ಕಾರ 20,000 ರೂಪಾಯಿಗಳವರೆಗಿನ ಕಟ್ಟು ಬಾಕಿದಾರ ರೈತರ ಸಾಲ ಮನ್ನಾ ಮಾಡುವ ಕ್ರಮವನ್ನು ಘೋಷಿಸಿ ತಿಂಗಳುಗಳೇ ಕಳೆದಿವೆ. ಈ ಯೋಜನೆ ಹಲವು ತಿರುವುಗಳನ್ನು ಕಂಡಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಸೀಮಿತವೆಂದು ಘೋಷಣೆಯಾದ ಈ ಯೋಜನೆ ಈ ದೊಡ್ಡ ರೈತರಿಗೆ ಮತ್ತು ಜಮೀನ್ದಾರರಿಗೂ 20,000 ಸಾವಿರ ರೂಪಾಯಿಗಳವರೆಗೆ ಅನ್ವಯವಾಗಲಿದೆ. ಸರ್ಕಾರದ ಬೂರ್ಜ್ವಾ-ಭೂ ಮಾಲೀಕ ಹಿತಾಸಕ್ತಿಗಳ ಅಭಿವ್ಯಕ್ತಿ ಈ ಮೂಲಕ ಆಗಿದೆ.

ಹಿಂದೆ ವಿ.ಪಿ.ಸಿಂಗ್ ಸರ್ಕಾರ 10,000 ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡಿದಾಗಲೂ ಯೋಜನೆ ಮೊದ ಮೊದಲು ನೆನೆಗುದಿಗೆ ಬಿದ್ದಿದ್ದು ದೊಡ್ಡ ರೈತರಿಗೂ ಅನ್ವಯ ಮಾಡಿದ ಮೇಲೆ ತೀವ್ರ ವೇಗದಿಂದ ಜಾರಿಗೆ ಬಂದಿತ್ತು. ಇದು ಸರ್ಕಾರದ ನಿಜ ಸ್ವರೂಪವನ್ನು ಬಯಲುಗೊಳಿಸುತ್ತದೆ.

ಇಷ್ಟೇ ಅಲ್ಲ, ಈ ಸಾಲ ಮನ್ನಾದ ಪರಿಣಾಮ, ಒಳಹರಿವುಗಳು ಕೇಂದ್ರ ಸರ್ಕಾರದ ವರ್ಗ ಗುಣವನ್ನು ಹೇಳುತ್ತದೆ. ದೇಶದ ಅತಿದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಯೋಜನೆ ಬೀರುತ್ತಿರುವ ಪರಿಣಾಮಗಳನ್ನು ಕಂಡು ಇನ್ನು ಮುಂದೆ ಬ್ಯಾಂಕು ಟ್ರಾಕ್ಟರ್ ಮತ್ತು ಇತರ ಕೃಷಿ ಯಂತ್ರಗಳಿಗೆ ಸಾಲ ನೀಡಬಾರದೆಂಬ ಸುತ್ತೋಲೆಗಳನ್ನು ಹೊರಡಿಸಿತು. ಸುತ್ತೋಲೆ ಬರುತ್ತಿದ್ದಂತೆ ರಾಜಕೀಯ ಬಿರುಗಾಳಿ ಬೀಸಿತು. ಚಿದಂಬರಂ ಪ್ರಚಾರದೊಂದಿಗೆ ಈ ಸುತ್ತೋಲೆಯನ್ನು ಬ್ಯಾಂಕು ವಾಪಸ್ಸು ತೆಗೆದುಕೊಳ್ಳುವಂತೆ ಮಾಡಿತು. ಭಾರತೀಯ ಸ್ಟೇಟ್ ಬ್ಯಾಂಕಿನ ಈ ಕ್ರಮ ಸರಿ ಎಂದೇನೂ ಅಲ್ಲ. ಆದರೆ ಒಂದು ಮಾತಂತೂ ನಿಜ. ಟ್ರಾಕ್ಟರ್ ಮತ್ತು ಕೃಷಿ ಯಂತ್ರೋಪಕರಣದ ಸಾಲ ಪಡೆಯುವವರು ದೊಡ್ಡ ರೈತರು ಮತ್ತು ಜಮೀನುದಾರರು.

ಕೇಂದ್ರ ಸರ್ಕಾರದ ಸಾಲ ಮನ್ನಾ ಕ್ರಮ ರೈತರ ಮೇಲಿನ ಕಾಳಜಿಗಿಂತ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಬಂದದ್ದು, ಆದ್ದರಿಂದಲೇ ನಿಜವಾಗಿ ಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡುವ ಬದಲು ಸರ್ಕಾರ ಎಲ್ಲರಿಗೂ ಸಾಲ ಮನ್ನಾ ಮಾಡುವ ಕ್ರಮ ಕೈಗೊಂಡಿದೆ.

ಕೇರಳದ ಸರ್ಕಾರ ನಿಜವಾಗಿಯೂ ಕಷ್ಟದಲ್ಲಿರುವ ರೈತನನ್ನು ಗುರುತಿಸಿ ನೆರವು ನೀಡಲು ಒಂದು ಕಮಿಷನನ್ನೇ ನೇಮಿಸಿದಂತೆ ಕೇಂದ್ರ ಸರ್ಕಾರವೂ ಅಂತಹ ಕ್ರಮವನ್ನು ಯೋಚಿಸಬಹುದಿತ್ತು.

ಸಾಲ ಮನ್ನಾ ಖಂಡಿತವಾಗಿಯೂ ರೈತರಿಗೆ ಅತ್ಯವಶ್ಯವಾದ ಪರಿಹಾರ ಕ್ರಮ. ಆದರೆ ಇದು ಸುವ್ಯವಸ್ಥಿತವಾಗಿ ಬಡವಾತಿ ಬಡ ರೈತರನ್ನೂ ಗಮನದಲ್ಲಿಟ್ಟುಕೊಂಡು ರೂಪುಗೊಂಡಿದ್ದರೆ / ಜಾರಿಯಾಗಿದ್ದರೆ ದುಡಿವ ಜನತೆಗೆ ನಿಜವಾದ ಪರಿಹಾರ/ನೆರವು ನೀಡುತ್ತಿತ್ತು.

ಈಗ ಇದು ಒಂದು ಸರ್ಕಸ್ ಮಾತ್ರ. ಮತ್ತೆ ರೈತರಿಗೆ ಪರಿಹಾರದ ನೆಪದಲ್ಲಿ ದೊಡ್ಡ ರೈತರಿಗೆ ಮತ್ತು ಭೂ ಮಾಲೀಕರಿಗೆ ಕೊಳ್ಳೆ ಹೊಡೆಯಲು ಬಿಟ್ಟು ಸಣ್ಣ ಅತಿ ಸಣ್ಣ ರೈತರಿಗೆ ಚೂರು ಪಾರು ನೀಡುವ ಅಪ್ರಾಮಾಣಿಕ ಕೆಲಸ ಅಷ್ಟೇ. ಅಲ್ಲವೇ?

○

ಜಾಗತೀಕರಣ ನೀತಿಗಳ ದುಷ್ಫಲ..

ಪುಟ 8 ರಿಂದ

ಜಾಗತಿಕ ಆಹಾರ ಬಿಕ್ಕಟ್ಟನ್ನು ತಂದ ನೀತಿಗಳನ್ನು ಬದಲಿಸುವುದು- ನಮ್ಮ ದೇಶದಲ್ಲೂ , ಜಾಗತಿಕವಾಗಿಯೂ. ಇದು ಸ್ಪಷ್ಟ. ಇದು 'ಬಂಡವಾಳಶಾಹಿ ಮಾದರಿಯ ಚಾರಿತ್ರಿಕ ವಿಫಲತೆಯ ಅತಿ ದೊಡ್ಡ ಪ್ರದರ್ಶನ' ಎಂದಿದ್ದಾರೆ ವೆನೆಜುವೆಲಾದ ಅಧ್ಯಕ್ಷ ಹ್ಯೂಗೊ ಚವೇಝ್.

ರೈತಾಪಿ ಜನಸಮೂಹಕ್ಕೆ ಜೀವನೋಪಾಯವಿಲ್ಲದಂತೆ ಮಾಡುವುದು ಬಂಡವಾಳಶಾಹಿ ಸಮಾಜ ವ್ಯವಸ್ಥೆಯ ಒಂದು ಪ್ರವೃತ್ತಿ. ಅದನ್ನು ಮೀರಬೇಕಾದರೆ ಆ ವ್ಯವಸ್ಥೆಯನ್ನು ಮೀರಿ ಹೋಗಬೇಕಾಗುತ್ತದೆ, ರೈತಾಪಿ ಜನಗಳನ್ನು ದರಿದ್ರರಾಗಿಸುವುದನ್ನು ತಪ್ಪಿಸಿ ಅವರನ್ನು ರಕ್ಷಿಸುವ ವ್ಯವಸ್ಥೆ ತರಬೇಕಾಗಿದೆ. ಇದರರ್ಥ ಅಲ್ಪ ಉತ್ಪಾದನೆ, ವೈಯಕ್ತಿಕ ಉಳುಮೆಗೆ ಮಾತ್ರ ಪ್ರೋತ್ಸಾಹ ನೀಡಬೇಕು ಎಂದೇನಲ್ಲ. ರೈತಾಪಿ ಜನಗಳು ಸ್ವಯಮಿಚ್ಛೆಯಿಂದ ಒಟ್ಟು ಸೇರಿ ಸಾಮೂಹಿಕ ಕೃಷಿ ಅಥವಾ ಸಹಕಾರಿ ಕೃಷಿ ಮತ್ತು ಒಡೆತನದ ಮೂಲಕ, ದರಿದ್ರೀಕರಣ ಅಥವಾ ವಂಚನೆಯಿಲ್ಲದೆ ಕೃಷಿಯನ್ನು ಆಧುನೀಕರಿಸಲು ಸಾಧ್ಯ, ಈ ಮೂಲಕ ಶಾಶ್ವತ ಪರಿಹಾರ ಸಾಧ್ಯ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಈ ಪರ್ಯಾಯ ವ್ಯವಸ್ಥೆ ವಿವಿಧ ವರ್ಗಗಳ ನಡುವೆ ಬದಲಾಗುತ್ತಿರುವ , ಆದರೆ ಶೋಷಕವಲ್ಲದ ಸಂಬಂಧಗಳ ಮೂಲಕ, ಅದಕ್ಕನುಗುಣವಾಗಿ ಆಸ್ತಿ ಸಂಬಂಧಗಳ ಮತ್ತು ಉತ್ಪಾದನಾ ಸಂಘಟನೆಯ ಸ್ವರೂಪಗಳನ್ನು ಬದಲಿಸುವ ಮೂಲಕ ವಿವಿಧ ವಲಯಗಳ ಒಂದು ಸಮತೋಲನದ ಬೆಳವಣಿಗೆ ಸಾಧಿಸುವಂತದ್ದಿರಬೇಕು. ಆಧುನಿಕ ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನ ಇದರ ಮೂಲ ಅಂಶವಾಗಿರಬೇಕು. ಅಂದರೆ ಸಮಾಜವಾದ ಮಾತ್ರವೇ ಆ ಪರ್ಯಾಯ ವ್ಯವಸ್ಥೆಯಾಗಲು ಸಾಧ್ಯ

ಲೆನಿನ್ ರೈತ-ಕಾರ್ಮಿಕ ಸಖ್ಯತೆ ಸಮಾಜವಾದದ ಅಡಿಗಲ್ಲಾಗಬೇಕು ಎಂದಿದ್ದರು. ಅಂದು ಮಾನವಕುಲ ಬರ್ಬರ ಯುದ್ಧ ಅಥವಾ ಸಮಾಜವಾದ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿತ್ತು. ಇಂದು ನಾವು, ಒಂದೆಡೆ ಸಾಮೂಹಿಕ ಹಸಿವು, ದಾರಿದ್ರ್ಯ ಮತ್ತು ಉಪವಾಸ , ಇನ್ನೊಂದೆಡೆ ಸಮಾಜವಾದದ ಪರ್ಯಾಯ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಪೆಟ್ರೋಲ್ - ಡೀಸೆಲ್ ದರ ಏರಿಕೆ......

ಪುಟ 9 ರಿಂದ

ಬದಲಾಗಿ ರೂ. 3/- ಕಡಿತ ಮಾಡಿದರೆ ತೈಲ ಮಾರುಕಟ್ಟೆ ಮಾಡುವ ಕಂಪೆನಿಗಳಿಗೆ ವಾರ್ಷಿಕ 12,000ರೂ ಉಳಿತಾಯವಾಗುತ್ತದೆ.

3) ತೈಲಬೆಲೆ ಏರಿಕೆಯಿಂದ ರಿಲಾಯನ್ಸ್ ಕಂಪೆನಿಯ ಲಾಭ ಒಂದೇ ವರ್ಷದಲ್ಲಿ 4,500 ಕೋಟಿ ರೂ. ಹೆಚ್ಚಾಗಿದೆ. ಇತರೆ ಕಂಪೆನಿಗಳಾದ ಎಸ್ಸಾರ್, ಕೈರ್ನ್ಸ್ ಕಂಪೆನಿಗಳ ಲಾಭವೂ ಹೆಚ್ಚಾಗಿದೆ. ಇದು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತೈಲಬೆಲೆ ಹೆಚ್ಚಳದಿಂದ ಬಂದ ಅನಿರೀಕ್ಷಿತ ಲಾಭ. 3 ಕಂಪೆನಿಗಳಿಗೆ ಒಟ್ಟು ಸುಮಾರು 10,000 ಕೋಟಿ ರೂ. ಲಾಭ ಒಂದೇ ವರ್ಷದಲ್ಲಿ ಬಂದಿದೆ. ಅನಿರೀಕ್ಷಿತವಾಗಿ ಬಂದ ಈ ಲಾಭದ ಮೇಲೆ ಶೇ 20ರಷ್ಟು ತೆರಿಗೆ ಹಾಕಿದರೆ 2000ಕೋಟಿ ರೂ. ಸಿಗುತ್ತದೆ.

ಮೇಲೆ ಹೇಳಿದ ಮೂರು ಮೂಲಗಳಿಂದ ಒಟ್ಟು 21,500 ಕೋಟಿ ರೂ. ಸಂಗ್ರಹವಾಗಲಿದ್ದು ಇದನ್ನು ತೈಲ ಮಾರಾಟ ಮಾಡುವ ಕಂಪೆನಿಗಳ ನಷ್ಟವನ್ನು ಭರ್ತಿಮಾಡಲು ಉಪಯೋಗಿಸಬಹುದು.

ಇದು ಸಾಧ್ಯವಾಗದಿದಲ್ಲಿ ಇನ್ನೊಂದು ಹಾದಿಯೂ ಇದೆ. 2008ರ ಬಜೆಟ್ ಮಂಡನೆಯ ಸಂದರ್ಭದಲ್ಲಿ ಸಚಿವ ಚಿದಂಬರಂರವರು ಮಂಡಿಸಿದ ಅಂಕಿ ಅಂಶದ ಪ್ರಕಾರ, 2007-08ರಲ್ಲಿ ಅಬಕಾರಿ ಸುಂಕದಲ್ಲಿ 87,992 ಕೋಟಿ ರೂ. ರಿಯಾಯಿತಿ ಕೇಂದ್ರ ಸರ್ಕಾರ ನೀಡಿದೆ. ಮತ್ತು ಕಾರ್ಪೊರೇಟ್ ತೆರಿಗೆಯಲ್ಲಿ 58,665 ಕೋಟಿ ರೂ. ರಿಯಾಯಿತಿ ನೀಡಿದೆ. ಈ ರಿಯಾಯಿತಿಗಳನ್ನು ದೇಶದ ದೊಡ್ಡ ದೊಡ್ಡ ಕಂಪೆನಿಗಳಿಗೆ ಅದರಲ್ಲೂ ಖಾಸಗಿ ಕಂಪೆನಿಗಳಿಗೆ ನೀಡಲಾಗಿದೆ.

ಅಂದರೆ ಈ ಕಂಪೆನಿಗಳಿಗೆ ಒಂದೇ ವರ್ಷದಲ್ಲಿ 1,46,647 ಕೋಟಿ ರೂ. ತೆರಿಗೆ ರಿಯಾಯಿತಿ ನೀಡಲಾಗಿದ್ದು, ಇದು ಈ ವರ್ಷವು ಕೂಡಾ ಮುಂದುವರಿಯುತ್ತದೆ. ಈ ರಿಯಾಯಿತಿಗಳನ್ನು ಶೇ. 15 ಕಡಿಮೆ ಮಾಡಿದರೆ ಸರಕಾರಕ್ಕೆ 21,900 ಕೋಟಿ ರೂ. ಉಳಿತಾಯವಾಗುತ್ತದೆ. ಅದನ್ನು ತೈಲ ಕಂಪೆನಿಗಳಿಗೆ ವರ್ಗಾಯಿಸಿದರೆ, ಪೆಟ್ರೋಲ್, ಡೀಸೆಲ್ ಅಥವಾ ಗ್ಯಾಸಿನ ಬೆಲೆ ಏರಿಸುವ ಅಗತ್ಯವೇ ಇಲ್ಲ.

ಆದರೆ ವಿಶ್ವಬ್ಯಾಂಕಿನ ಷರತ್ತುಗಳಿಗೆ ಮಣಿದಿರುವ ಕೇಂದ್ರ ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ನಮ್ಮ ದೇಶದ ದೊಡ್ಡ ಕಂಪನಿಗಳ ಹಿಡಿತದಲ್ಲಿರುವ ಸರ್ಕಾರವು ಜನರ ಹಿತಾಸಕ್ತಿ ಕಡೆಗಣಿಸಿದೆ. ಇದರ ವಿರುದ್ಧ ಎಡಪಕ್ಷಗಳ ನೇತೃತ್ವದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಗಳಲ್ಲಿ ಬಂದ್ ನಡೆಸಿರುವುದೇ ಅಲ್ಲದೇ ಬಿಹಾರ, ಆಂಧ್ರ, ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿ ಬಂದ್ ನಡೆದಿದೆ. ಕರ್ನಾಟಕದಲ್ಲಿ ಮಾರಾಟ ತೆರಿಗೆ ಕಡಿತ ಮಾಡಲು ಬಿಜೆಪಿ ಸರ್ಕಾರ ನಿರಾಕರಿಸುತ್ತಿದ್ದರೆ, ಕೇಂದ್ರ ಸರ್ಕಾರ ಸೂಚಿಸುವ ಮುಂಚೆಯೇ ಪಶ್ಚಿಮ ಬಂಗಾಳ ಸರ್ಕಾರ ಮಾರಾಟ ತೆರಿಗೆ ಕಡಿತ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಖಾಸಗಿ ಕಂಪೆನಿಗಳಿಗೆ ಲಾಭ

ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿದಂತೆಲ್ಲ ಖಾಸಗಿ ಕಂಪೆನಿಗಳ ಲಾಭ ಹೆಚ್ಚುತ್ತಲೇ ಹೋಗುತ್ತದೆ. ನಮ್ಮ ದೇಶದಲ್ಲಿ ತೈಲ ಶೋಧನೆ ಮಾಡುವ ಕೆಲಸ ಸಾರ್ವಜನಿಕ ಉದ್ದಿಮೆಗಳಾದ ಒ.ಎನ್.ಜಿ.ಸಿ ಮತ್ತು ಆಯಿಲ್ ಇಂಡಿಯ ಕಂಪೆನಿಯದ್ದು, ಅದನ್ನು ಮಾಡುವುದು ಸಾರ್ವಜನಿಕ ಉದ್ದಿಮೆಗಳಾದ ಇಂಡಿಯನ್ ಆಯಿಲ್ ಕಾರ್ಪೋರೇಶನ್, ಹಿಂದೂಸ್ತಾನ ಪೆಟ್ರೋಲಿಯಂ, ಭಾರತ ಪೆಟ್ರೋಲಿಯಂ ಇತ್ಯಾದಿ ಕಂಪೆನಿಗಳು.

ಆದರೆ ಶೋಧನೆ ಮಾಡಿದ ಕಚ್ಚಾತೈಲವನ್ನು ಹೊರತೆಗೆದು, ಸಂಸ್ಕರಣೆ ಮಾಡುವ ಕೆಲಸ ಖಾಸಗಿ ಕಂಪೆನಿಗಳದ್ದು, ಇದನ್ನು ರಿಲಯಾನ್ಸ್, ಎಸ್ಸಾರ್ ಮತ್ತು ಕೈರ್ನ್ಸ್ ಅನ್ನುವ ಕಂಪೆನಿಗಳು ಮಾಡುತ್ತವೆ. ಈ ಕಂಪೆನಿಗಳು ಸಂಸ್ಕರಣೆಮಾಡಿ ಮಾರುಕಟ್ಟೆ ಕಂಪೆನಿಗಳಿಗೆ ನೀಡುವ ತೈಲಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ ದರವನ್ನು ನಿಗದಿ ಮಾಡಲಾಗುತ್ತದೆ, ಅಲ್ಲದೆ ಸಂಸ್ಕರಣೆ ಮಾಡಿದ ಶುಲ್ಕವಾಗಿ ಬ್ಯಾರಲ್‌ಗೆ 15 ಡಾಲರ್‌ನ್ನು ಸೇರಿಸಲಾಗುತ್ತದೆ. ಅಂದರೆ ಈ ಖಾಸಗಿ ಕಂಪೆನಿಗಳಿಗೆ ಯಾವುದೇ ಹೆಚ್ಚಿನ ಶ್ರಮವಿಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಹೆಚ್ಚಿದೆ ಎಂಬ ಒಂದೇ ಕಾರಣಕ್ಕೆ ಇದರ ಲಾಭ ಹೆಚ್ಚಾಗುತ್ತದೆ. ಆದರೆ ಅದರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಒತ್ತಾಯ ಮಾಡಿದರೂ ಇದಕ್ಕೆ ಕೇಂದ್ರ ಸರ್ಕಾರ ತಯಾರಿಲ್ಲ.

ಈ ಕಂಪೆನಿಗಳು ಇನ್ನೂ ಕೆಲವು ವಂಚನೆ, ಕುತಂತ್ರದಿಂದ ಲಾಭ ಗಳಿಸುತ್ತವೆ. ಸಂಸ್ಕರಣೆ ಮಾಡಿದ ತೈಲ ಬಿಸಿಯಾಗಿರುತ್ತದೆ. ಅದನ್ನು ಶೇಖರಿಸಿಟ್ಟುಕೊಳ್ಳಲು ವ್ಯವಸ್ಥೆ ಇಲ್ಲ ಎಂಬ ಕಾರಣ ನೀಡಿ ಬಿಸಿತೈಲವನ್ನೇ ಮಾರಾಟ ಮಾಡುತ್ತವೆ. ಇದರಿಂದ ತೈಲದ ಗಾತ್ರ ಹೆಚ್ಚಿ ಅಳತೆ ಹೆಚ್ಚಾಗುತ್ತದೆ. ಅದನ್ನು ಖರೀದಿಸಿದ ಸಾರ್ವಜನಿಕ ಉದ್ದಿಮೆಗಳಾದ ಮಾರುಕಟ್ಟೆ ಕಂಪೆನಿಗಳಿಗೆ ನಷ್ಟವುಂಟಾಗುತ್ತದೆ.

ಅಂದರೆ ಲಾಭ ಖಾಸಗಿ ಕಂಪೆನಿಗಳಿಗೆ, ನಷ್ಟ ಸಾರ್ವಜನಿಕ ಉದ್ದಿಮೆಗಳಿಗೆ. ಆದ್ದರಿಂದಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಏರಿದಂತೆಲ್ಲ ಮುಖೇಶ್ ಅಂಬಾನಿ ಜಗತ್ತಿನ ಅತೀ ದೊಡ್ಡ ಶ್ರೀಮಂತರಲ್ಲಿ ಒಬ್ಬರು ಎಂಬ ಹಣೆಪಟ್ಟಿ ಬರುತ್ತದೆ. ನಮ್ಮ ದೇಶದ ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾಗಿ 3-4 ದಿನ ಇರುತ್ತದೆ. ಆದರೆ ಜನಸಾಮಾನ್ಯರು ಮಾತ್ರ ತೈಲಕ್ಕೆ ಹೆಚ್ಚು ಬೆಲೆ ತೆರಬೇಕಾಗುತ್ತದೆ.

ರಿಲೆಯಾನ್ಸ್ ಕಂಪೆನಿಯ ವಾರ್ಷಿಕ ವರದಿಯ ಪ್ರಕಾರ 2005-06 ರಲ್ಲಿ ಆ ಕಂಪೆನಿಯ ಲಾಭ 5915 ಕೋಟಿ ರೂ. ಇದ್ದುದು 2007-08ರಲ್ಲಿ 10,372 ಕೋಟಿ ರೂ.ಗೆ ಏರಿದೆ. ಒಂದೇ ವರ್ಷದಲ್ಲಿ 4,457 ಕೋಟಿ ರೂ. ಲಾಭ ಹೆಚ್ಚಳ !

ಜೂನ್ 11 ರೈಲ್ ರೋಖೋ

ಬೆಲೆ ಏರಿಕೆ ಪ್ರತಿಭಟಿಸಿ ಜೂನ್ 11 ರಂದು ರಾಜ್ಯಾದ್ಯಂತ ರೈಲ್ ರೋಖೋ, ರಸ್ತೆ ತಡೆ. ಚಳುವಳಿ - ಪಾಲ್ಗೊಳ್ಳಿ.

ಸಿಪಿಐ, ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್, ಸರ್ವೋದಯ ಕರ್ನಾಟಕ, ಕರುನಾಡ ಸೇನೆ ಹಾಗೂ ದಲಿತ ಸಂಘಟನೆಗಳು

ಜಗದಗಲ

ಶರತ್‌ಚಂದ್ರ

ಆಹಾರಧಾನ್ಯ ಬಿಕ್ಕಟ್ಟಿನ ಬಗ್ಗೆ ಜಾಗತಿಕ ಸಮ್ಮೇಳನ

ಈಗಾಗಲೇ ಹಸಿವಿನಿಂದ ನರಳುತ್ತಿರುವ 85 ಕೋಟಿ ಜನರ ಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಹಸಿವಿನಿಂದ ನರಳುತ್ತಿರುವವರ ಸಂಖ್ಯೆ ಇನ್ನಷ್ಟು ಹೆಚ್ಚಾಗಿದೆ. ಈ ಬಿಕ್ಕಟ್ಟು ಎದುರಿಸಲು ಆಹಾರಧಾನ್ಯ ಉತ್ಪಾದನೆ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಎಂದು ಕಳೆದ ವಾರ ರೋಂ ನಲ್ಲಿ ನಡೆದ ಮೂರು ದಿನಗಳ ಜಾಗತಿಕ ಆಹಾರಧಾನ್ಯ ಬಿಕ್ಕಟ್ಟಿನ ಬಗ್ಗೆ ಸಮ್ಮೇಳನದಲ್ಲಿ ಮಾತನಾಡುತ್ತಾ ವಿಶ್ವಸಂಸ್ಥೆ ಕಾರ್ಯದರ್ಶಿ ಕರೆ ನೀಡಿದರು. 2030 ರ ಹೊತ್ತಿಗೆ ಉತ್ಪಾದನೆ ಶೇ.50 ರಷ್ಟು ಹೆಚ್ಚಬೇಕು. ಇದಕ್ಕಾಗಿ ಬೇಕಾಗುವ 20 ಶತಕೋಟಿ ಡಾಲರು ಆ ದೇಶಗಳಲ್ಲದೆ ವಿಶ್ವ ಬ್ಯಾಂಕ್, ಐಎಂಎಫ್, ಡಬ್ಲ್ಯುಟಿಒ ಮತ್ತು ಇತರ ಬೆಳವಣಿಗೆ ಬ್ಯಾಂಕ್ ಗಳಿಂದ ಬರುವುದು. ಈ ಬಿಕ್ಕಟ್ಟಿಗೆ ತುರ್ತು ಕ್ರಮಗಳು ಮತ್ತು ಶಾಶ್ವತ ಪರಿಹಾರಕ್ಕೆ ಮೂಲಭೂತ ಸುಧಾರಣೆಗಳನ್ನು ಮಾಡಬೇಕು ಎಂದು ಮೂರು ಲಕ್ಷ ಜನ ಸಹಿ ಮಾಡಿದ ಮನವಿ ತಮಗೆ ಬಂದಿದೆ ಎಂದರು. ಬಡವರು ಮತ್ತು ಹಸಿದವರಿಗೆ ಆಹಾರ ಪೂರೈಕೆ ಸಂಬಂಧಿಸಿದ ನೆರವು ನೀಡುವ, ಸಾಮಾಜಿಕ ಭದ್ರತೆಯ ಜಾಲ ವಿಸ್ತರಿಸಲು ಕ್ರಮ ಕೈಗೊಳ್ಳಬೇಕೆಂದು ಕರೆ ನೀಡಿದರು. ಹಲವು ತುರ್ತು ಕ್ರಮಗಳ ಘೋಷಣೆ ಮಾಡಲಾಯಿತು. ಆದರೆ ಬಿಕ್ಕಟ್ಟಿನ ಮೂಲಕಾರಣಗಳ ಬಗ್ಗೆ, ಅದರಲ್ಲೂ ದೊಡ್ಡ ಪ್ರಮಾಣದಲ್ಲಿ ಜೈವಿಕ-ಇಂಧನ ಉತ್ಪಾದನೆ ಇಂಥ ಕಾರಣಗಳಲ್ಲಿ ಒಂದೇ ಎಂಬ ಬಗ್ಗೆ ಭಿನ್ನಾಭಿಪ್ರಾಯ ಕಂಡು ಬಂತು. ಸಮ್ಮೇಳನ

‘ಜಿ-8’ ಗೆ ಸವಾಲು ಹಾಕಿದ ಸ್ವತಂತ್ರ ‘ಬ್ರಿಕ್’ ಶೃಂಗಸಭೆ

‘ಬ್ರಿಕ್’ (BRLC- ಬ್ರೆಜಿಲ್, ರಶ್ಯ, ಇಂಡಿಯಾ, ಚೀನಾ) ನಾಲ್ಕು ವೇಗವಾಗಿ ಬೆಳೆಯುತ್ತಿರುವ ದೇಶಗಳ ವೇದಿಕೆ. ಈ ದೇಶಗಳ ಜನಸಂಖ್ಯೆ ಜಗತ್ತಿನ ಶೇ.40 (ಅಂದರೆ ಜಗತ್ತಿನ ಪ್ರತಿ ಐವರಲ್ಲಿ ಇಬ್ಬರು ‘ಬ್ರಿಕ್’ ದೇಶದವರು). ‘ಜಿ-8’ ಜಗತ್ತಿನ ಎಂಟು ಅತ್ಯಂತ ಪ್ರಬಲ ಶ್ರೀಮಂತ ದೇಶಗಳ ವೇದಿಕೆ. ‘ಬ್ರಿಕ್’ ಜನಸಂಖ್ಯೆ ‘ಜಿ-8’ರ ಮೂರು ಪಟ್ಟು. ಈಗಾಗಲೇ ಕೊಳ್ಳುವ ಶಕ್ತಿ ಆಧಾರದ ಮೇಲೆ ‘ಬ್ರಿಕ್’ ಜಿಡಿಪಿ (ಒಟ್ಟು ಉತ್ಪಾದನೆ) ‘ಜಿ-8’ನ ಅರ್ಧದಷ್ಟು. 2020 ರ ವೇಳೆಗೆ ‘ಜಿ-8’ ನ ಜಿಡಿಪಿ ಮುಟ್ಟಿ ದಾಟುವ ಅಂದಾಜು ಇದೆ.

ಇತ್ತೀಚೆಗೆ ಮೊದಲ ಬ್ರಿಕ್ ಶೃಂಗಸಭೆ ಯುರೋ-ಏಶ್ಯಾದ ಗಡಿಯಲ್ಲಿರುವ ಉರಲ್ ಪರ್ವತ ಶ್ರೇಣಿಯಲ್ಲಿರುವ ಯೆಕಟೆರಿನ್ ಬರ್ಗ ನಲ್ಲಿ ನಡೆಯಿತು. ಮೊದಲ ಬಾರಿಗೆ ಸ್ವತಂತ್ರ ಬ್ರಿಕ್ ಶೃಂಗಸಭೆ ನಡೆಯುತ್ತಿದೆ. ಹಿಂದಿನ ಎಲ್ಲಾ ಸಭೆಗಳು ಜಿ-8 ಅಥವಾ ವಿಶ್ವಸಂಸ್ಥೆಯ ಇತರ ಸಭೆಗಳ ತಾಣದಲ್ಲಿ ಅದರ ಜತೆಗೆ ನಡೆದಿವೆ. ಬ್ರಿಕ್ ಇದು ರಿಕ್ (ಬ್ರೆಜಿಲ್ ಬಿಟ್ಟು ಬ್ರಿಕ್ ನ ಮೂರು ದೇಶಗಳ ವೇದಿಕೆ) ನ ವಿಸ್ತರಣೆಯಾಗಿ ಮೂಡಿ ಬಂದಿದ್ದು. 1998ರಲ್ಲಿ ಆಗಿನ ರಶ್ಯನ್ ಪ್ರಧಾನಿ ಪ್ರಿಮೊಕೊವ್ ಇದರ ಕಲ್ಪನೆ ಮುಂದಿಟ್ಟಿದ್ದರು. ಯೆಕಟೆರಿನ್ ಬರ್ಗ ನಲ್ಲಿ ಬೇರೆ ಬೇರೆ ತಾಣದಲ್ಲಿ ಬ್ರಿಕ್ ಮತ್ತು ರಿಕ್ ಎರಡೂ ವೇದಿಕೆಗಳ ಶೃಂಗಸಭೆ ನಡೆಯಿತು. ಈ ದೇಶಗಳ ವಿದೇಶ ಮಂತ್ರಿಗಳು ಭಾಗವಹಿಸಿದ್ದರು.

2002 ರಲ್ಲಿ ಮೊದಲ ರಿಕ್ ಶೃಂಗಸಭೆ ವಿಶ್ವ ಸಂಸ್ಥೆ ಯ ಸಭೆ ಜತೆ ನಡೆಯಿತು. 2005 ರಲ್ಲಿ ಮೊದಲ ಸ್ವತಂತ್ರ ರಿಕ್ ಶೃಂಗಸಭೆ ವ್ಲಾಡಿವಾಸ್ಟೊಕ್ ನಲ್ಲಿ ನಡೆಯಿತು. ಪೀಟರ್ಸ್ ಬರ್ಗ ನಲ್ಲಿ ರಶ್ಯದ ಅಧ್ಯಕ್ಷತೆಯಲ್ಲಿ ನಡೆದ 2006 ರ ಜಿ-8 ವಿಸ್ತ್ರತ ಸಭೆಯ ಭಾಗವಾಗಿ ಬ್ರಿಕ್ ಶೃಂಗಸಭೆ ನಡೆಯಿತು. ಆ ನಂತರ ಸ್ವತಂತ್ರವಾಗಿ ನಡೆದ ಮೊದಲ ಬ್ರಿಕ್ ಶೃಂಗಸಭೆ ಇದು. ಇನ್ನಷ್ಟು ಹೆಚ್ಚು ಪ್ರಜಾಸತ್ತಾತ್ಮಕವಾದ, ನ್ಯಾಯಯುತ, ಸುಭದ್ರ ಜಗತ್ತನ್ನು ಕಟ್ಟುವುದು ನಮ್ಮ ಸಮಾನ ಗುರಿ. ಇದಕ್ಕಾಗಿ ಈಗಿನ ವ್ಯವಸ್ಥೆ ಬದಲಾಯಿಸಬೇಕು. ಎಂಬ ಆಶಯವನ್ನು ರಿಕ್ ಮತ್ತು ಬ್ರಿಕ್ ವ್ಯಕ್ತಪಡಿಸಿದೆ. ಹಲವು ಅಂತರ್‍ರಾಷ್ಟ್ರೀಯ ವಿಷಯಗಳ ಬಗ್ಗೆ ಇವು ಜಿ-8 ದೇಶಗಳ ನಿಲುವಿಗೆ ಸವಾಲು ಹಾಕುವ ನಿಲುವು ಅಂಗೀಕರಿಸಿದವು. ಕೊಸೊವೊ, ಇರಾನ್ ಬಗ್ಗೆ ಶ್ರೀಮಂತ ದೇಶಗಳ ನಿಲುವನ್ನು ಟೀಕಿಸಿದವು. ಈ ಬಗ್ಗೆ ಇಂಡಿಯಾ ತನ್ನ ಅಮೆರಿಕ-ಪರ ನಿಲುವು ಬದಲಾಯಿಸಿದ್ದು ಒಂದು ಪ್ರಮುಖ ಬೆಳವಣಿಗೆ.


ಕ್ಲಸ್ಟರ್ ಬಾಂಬ್ ನಿಷೇಧಕ್ಕೆ ಒಪ್ಪಂದ

‘ಕ್ಲಸ್ಟರ್ ಬಾಂಬ್’ ಅಂದರೆ ‘ಮಾಲೆ ಪಟಾಕಿ’ ಇದ್ದ ಹಾಗೆ. ಒಂದೇ ಬಾರಿ ಹಾಕಿದ ಬಾಂಬಿನಿಂದ ನೂರಾರು ಬಾಂಬುಗಳ ವಿಸ್ಫೋಟದ ಶಕ್ತಿ ಮತ್ತು ಪರಿಣಾಮ ತರುವ ಬಾಂಬಿಗೆ ಕ್ಲಸ್ಟರ್ ಬಾಂಬ್ ಎನ್ನುತ್ತಾರೆ. ಇದು ಬಹಳ ಸಾಂದ್ರೀಕರಿಸಿದ ಬಾಂಬ್ ದಾಳಿ ಸಹ. ಇಂತಹ ಬಾಂಬುಗಳನ್ನು ವಿಯೇಟ್ನಾಮ್‌ನಿಂದ ಇರಾಕ್‌ವರೆಗೆ ಬಳಸಲಾಗಿದೆ. ಸಾಮಾನ್ಯವಾಗಿ ಇದರ ಬಲಿಪಶುಗಳು ನಾಗರಿಕರೇ. ಸ್ಫೋಟಗೊಳ್ಳದ ಬಾಂಬುಗಳು ಹಲವು ವರ್ಷಗಳ ವರೆಗೆ ಅನಿರೀಕ್ಷಿತ ಸ್ಥಳ ಮತ್ತು ಸಮಯಗಳಲ್ಲಿ ಸ್ಫೋಟಗೊಳ್ಳುತ್ತಾ ರೈತರ ಬಲಿ ತೆಗೆದುಕೊಳ್ಳುತ್ತವೆ. ಕ್ಲಸ್ಟರ್ ಬಾಂಬ್‌ಗಳನ್ನು ನಿಷೇಧಿಸಬೇಕು ಎಂಬ ಒತ್ತಾಯ, ಕಳೆದ ಒಂದು ವರ್ಷದಲ್ಲಿ 100ಕ್ಕೂ ಹೆಚ್ಚು ದೇಶಗಳ ನಡುವೆ ಈ ಬಗ್ಗೆ ಮಾತುಕತೆಗೆ ಎಡೆಮಾಡಿವೆ.

ಇತ್ತೀಚೆಗೆ ಐರ್ಲೆಂಡಿನ ರಾಜಧಾನಿ ಡಬ್ಲಿನ್ ನಲ್ಲಿ ಸೇರಿದ್ದ 111 ದೇಶಗಳ ಪ್ರತಿನಿಧಿಗಳು ಮಂಜೂರು ಮಾಡಿರುವ ಕರಡು ಒಪ್ಪಂದ, ಕ್ಲಸ್ಟರ್ ಬಾಂಬ್ ವಿನ್ಯಾಸ, ಉತ್ಪಾದನೆ, ಬಳಕೆ, ಖರೀದಿ, ಮಾರಾಟದ ಮೇಲೆ ನಿಷೇಧ ಹೇರುತ್ತದೆ. ಅಲ್ಲದೆ ಈಗ ಇರುವ ಕ್ಲಸ್ಟರ್ ಬಾಂಬ್ ಗಳನ್ನು 8 ವರ್ಷಗಳ ಒಳಗೆ ನಾಶವಾಬೇಕು ಎಂದು ವಿಧಿಸುತ್ತದೆ. ಈಗಾಗಲೇ ಕ್ಲಸ್ಟರ್ ಬಾಂಬುಗಳನ್ನು ಹೊಂದಿರುವ ಆರು ಪ್ರಮುಖ ದೇಶಗಳು (ಅಮೆರಿಕ, ರಶ್ಯ, ಚೀನಾ, ಇಸ್ರೇಲ್, ಇಂಡಿಯಾ, ಪಾಕಿಸ್ತಾನ) ಈ ಒಪ್ಪಂದದ ಮಾತುಕತೆಯಲ್ಲೂ ಭಾಗವಹಿಸಲಿಲ್ಲ. 111 ದೇಶಗಳು ಸಹಿ ಹಾಕಲಿರುವ ಒಪ್ಪಂದ ಈ ಆರು ದೇಶಗಳ ಮೇಲೆ ಒತ್ತಡ ಹಾಕಲಿದೆ ಎಂದು ವಕ್ತಾರರು ಹೇಳಿದ್ದಾರೆ.

ಕೊಲಂಬಿಯಾ ಹಿರಿಯ ಗೆರಿಲ್ಲಾ ನಾಯಕ ಇನ್ನಿಲ್ಲ

ಕೊಲಂಬಿಯಾದ(ಫಾರ್ಕ - ಕೊಲಂಬಿಯಾ ಕ್ರಾಂತಿಕಾರಿ ಸಶಸ್ತ್ರದಳ) ಲ್ಯಾಟಿನ್ ಅಮೆರಿಕದಲ್ಲೇ ಅತ್ಯಂತ ದೀರ್ಘ ಕಾಲ ಬದುಕುಳಿದ ಗೆರಿಲ್ಲಾ ಸಂಘಟನೆ. 1964 ರಲ್ಲಿ ಸ್ಥಾಪಿತವಾದ ಈ ಸಂಘಟನೆ ಐದು ದಶಕಗಳಿಗೂ ಹೆಚ್ಚು ಕಾಲ ಕೊಲಂಬಿಯಾದ ಆಳುವ ವರ್ಗ ಮತ್ತು ಅವರ ಸಾಮ್ರಾಜ್ಯಶಾಹಿ ಯಜಮಾನರ ವಿರುದ್ಧ ಹೋರಾಡುತ್ತಿದೆ. ಇತ್ತೀಚೆಗೆ ಇದರ ಸಂಸ್ಥಾಪಕ-ನಾಯಕ ಮರುಲಂದಾ ನಿಧನ ಹೊಂದಿದರು. ಆದರ ಉನ್ನತ ನಾಯಕತ್ವದಲ್ಲಿ ಒಬ್ಬರೂ ಈ ವರೆಗೆ ಸರ್ಕಾರಕ್ಕೆ ಶರಣಾಗಲಿಲ್ಲ.



ಸರ್ಕಾರದ ಭದ್ರತಾಪಡೆಗಳಿಗೆ ಸಿಕ್ಕಿ ಬೀಳಲಿಲ್ಲ ಎಂಬುದು ವಿಶೇಷ. ಆದರೆ ಇತ್ತೀಚೆಗೆ ಅದು ಹಲವು ಹಿನ್ನಡೆಗಳನ್ನು ಅನುಭವಿಸಿದೆ. ಹಿರಿಯ ನಾಯಕ ಮರುಲಂದಾ ನಿಧನದ ನಂತರ ಫಾರ್ಕ ತನ್ನ ವ್ಯೂಹ-ತಂತ್ರ ಬದಲಿಸುವುದೇ ‘ಹೊಸ ನಾಯಕತ್ವ ಸಶಸ್ತ್ರ ಹೋರಾಟದ ಹಾದಿ ಬಿಡುವುದೆ’ ಎಂಬ ಕುತೂಹಲ ಕೆರಳಿಸಿದೆ. ಮರುಲಂದಾ ನಿಧನದ ನಂತರ ಫಾರ್ಕ ಆಗಲೇ ಹೊಸ ನಾಯಕನನ್ನು ಆರಿಸಿದೆ. ಹೊಸ ಮುಖಂಡ ಅಲ್ಫೊನ್ಸೊ ಕಾನೊ ಫಾರ್ಕ ನ ರಾಜಕೀಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು, ಮಿಲಿಟರಿ ನೀತಿ ಬದಲಾಯಿಸುವುದೇ ಎಂಬ ಪ್ರಶ್ನೆ ಎದ್ದಿದೆ. ಮಿಲಿಟರಿ ಬಂಧಿಸಿರುವ 500 ಕ್ಕೂ ಫಾರ್ಕ ಗೆರಿಲ್ಲಾ ಹೋರಾಟಗಾರರನ್ನು ಬಿಡುಗಡೆ ಮಾಡಿದರೆ, ತಾನು ಬಂಧಿಸಿರುವ 750 (ಕೆಲವು ವಿದೇಶಿಯರು ಸೇರಿದಂತೆ) ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದಾಗಿ ಫಾರ್ಕ ಹೇಳಿದೆ.

ಬೌದ್ಧಿಕ ಸಂಪತ್ತಿನ ಹಕ್ಕು.......

ಪುಟ 15ರಿಂದ

ಬಾಸ್ಮತಿ ಬೆಳೆಸುವ ಎರಡೂವರೆ ಲಕ್ಷ ರೈತರ ಬದುಕು ದುರ್ಭರವಾಗುತ್ತಿದೆ.

ಭಾರತದ ಉಚ್ಚ ನ್ಯಾಯಾಲಯದಲ್ಲಿ 'RFSTE - Researc Foundation for Science and Ecology' ಸುಪ್ರೀಮ್ ಕೋರ್ಟ್‌ನ Public litigation ಹಾಕಿತು. ಉತ್ತರ ಭಾರತದಲ್ಲಿ ಈ ‘ಜನಹಿತಯಾಚಿಕೆ’ ಆಂದೋಲನ ತೀವ್ರವಾಯಿತು. ಸುಪ್ರೀಮ್ ಕೋರ್ಟ್ ಸರಕಾರಕ್ಕೆ ಈ ಕುರಿತು ಪೇಟೆಂಟನ್ನು Challenge ಮಾಡಲು ನೋಟೀಸು ಕಳುಹಿಸಿ ಅಮೆರಿಕಾ ದೂತಾವಾಸಕ್ಕೆ ಲಕ್ಷಗಟ್ಟಲೆ ಪತ್ರಗಳು ಬರೆಯಲ್ಪಟ್ಟವು. ಇದು ಮುಖ್ಯವಾಗಿ ನಾಗರಿಕರ ಹೋರಾಟವಾಗಿತ್ತು. ಅಂತಾರಾಷ್ಟ್ರೀಯ ಜನಮತದ ಭಾರೀ ಒತ್ತಡದಿಂದಾಗಿ USPTO 27 ಮಾರ್ಚ್ 2001 ರಂದು Rice Takeನ ಪೇಟೆಂಟ್ ಪುನರ್ವಿಮರ್ಶೆಗೆ ಒಳಪಡಿಸಿತು. ಅದು ರೈಸ್ ಟೀಕ್‌ಗೆ ಬರೆದ ಪತ್ರದಲ್ಲಿ ಅದರ 16 ಕ್ಲೈಮ್‌ಗಳಲ್ಲಿ 3ನ್ನು ಬಿಟ್ಟು ಉಳಿದೆಲ್ಲವನ್ನೂ ರದ್ದುಗೊಳಿಸಿತು, ಕಾಳುಮೆಣಸು, ಸಾಸಿವೆ, ಅರಸಿನ, ಬೇವು ಇವುಗಳಲ್ಲದೆ ನೂರಾರು ಅಂಶಗಳ ಮೇಲೆ ಇಂದೂ ಪೇಟೆಂಟ್ ಬಹುರಾಷ್ಟ್ರೀಯ ಕಂಪೆನಿಗಳದ್ದೇ ಆಗಿದೆ.

21 ಮೇ 2003ರಲ್ಲಿ ಯುರೋಪಿನ ಪೇಟೆಂಟ್ ಕಾರ್ಯಾಲಯ, ನಂ. 445929 ಒಂದು ಬಗೆಯ ಗೋಧಿಗೆ 'Plants' ಎಂದು ಹೆಸರು ಕೊಟ್ಟು ಪೇಟೆಂಟ್ ಜಾರಿ ಮಾಡಿತು. ಅಮೆರಿಕಾದ ಬಹಳಷ್ಟು ಜೀವ ವೈವಿಧ್ಯದ ಪೇಟೆಂಟ್ ಮಾಲಿಕ ಮೆನ್ಸೆಂಟೋ ಇದರ ಅಧಿಕಾರಿ. ಆದರೆ ಈ ಗೋಧಿ ಕಡಮೆ ಜಿಗುಟುತನವಿರುವ ವಿಶಿಷ್ಟ ಬಗೆಯ ಗೋಧಿ. ಇದು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬೆಳೆಯಲಾಗುತ್ತದೆ ಈಗ ಅದರ ಅಧಿಕಾರಿ ಅಮೆರಿಕಾದ ಮೆನ್ಸೆಂಟೊ!.


ಪೆಪ್ಸಿ, ಕಾರ್ಗಿಲ್ ಇತ್ಯಾದಿ ಕಂಪೆನಿಗಳಿಗೆ ಭಾರತ ಸರಕಾರದಿಂದ ರಫ್ತಿಗೆ ಸಬ್ಸಿಡಿ, ರೈತರಿಗೆ ಸಬ್ಸಿಡಿಯ ಕಡಿತ. ಪೆಪ್ಸಿ 2002ರಲ್ಲಿ ಒಂದು ಲಕ್ಷ ಟನ್ ಅಕ್ಕಿಯನ್ನು ರಫ್ತುಮಾಡಿ ಭಾರೀ ಲಾಭ ಪಡೆಯಿತು. ಆ ಕಾಲದಲ್ಲಿ ಭಾರತದ ರೈತರು ಹಸಿವಿನಿಂದ ಸತ್ತರು. ಕಾರ್ಗಿಲ್ 2001ರಲ್ಲಿ 10 ಸಾವಿರ ಮೆಟ್ರಿಕ್ ಟನ್ ಗೋಧಿ, 2002ರಲ್ಲಿ 2002 ಸಾವಿರ ಮೆಟ್ರಿಕ್ ಟನ್ ರಫ್ತು ಮಾಡಿತು. ನಿಗಮಗಳ ಹೊಟ್ಟೆ ತುಂಬಿತು. ಇತ್ತ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡರು.

ಡಿಸೆಂಬರ್ 1999ರಲ್ಲಿ ಇಂಡಿಯನ್ ಏರ್ ಲೈನ್ಸ್ ವಿಮಾನವೊಂದನ್ನು ಅಪಹರಿಸಲಾಗಿತ್ತು. ಅಪಹರಣಕಾರರಿಂದ ವಿಮಾನದಲ್ಲಿದ್ದವರನ್ನು ರಕ್ಷಿಸಲು ಅಮೆರಿಕಾ ಆಮದಿನ ಮೇಲೆ quantitive restriction ತೆಗೆದು ಹಾಕಲು ಭಾರತದ ಮೇಲೆ ಒತ್ತಡ ಹೇರಿತು. ಇದು ಅಮೆರಿಕಾದ ಒಳ ಸಂಚು. ಪ್ರಮಾಣಾತ್ಮಕ ನಿಯಂತ್ರಣವಿರುವುದು ದೇಶದ ಜನತೆಯ ಹಿತರಕ್ಷಣೆಗೆ, ಇಷ್ಟೊಂದು ದೊಡ್ಡ ಪ್ರಜಾಪ್ರಭುತ್ವದ ದೇಶ ಭಾರತವು ಅಮೆರಿಕಾದ ಒತ್ತಡಕ್ಕೆ ಒಳಗಾಗಿ 714 ವಸ್ತು ರಫ್ತುಗಳು ಮೇಲಿನ ನಿರ್ಬಂಧವನ್ನು ಅಮೆರಿಕಾದ ಸಮಾನ್ಯ ಸಭೆ ತೆಗೆದು ಹಾಕಿತು. ‘ವಿಮಾನ ಅಪಹರಣ’ದ ಬಗ್ಗೆ ಮಾಧ್ಯಮಗಳು ಕಟ್ಟಿದ ಕತೆಯೇ ಬೇರೆ.

ಭಾರತದಲ್ಲಿ CSIR ಸಂಸ್ಥೆ ಪೇಟೆಂಟ್ ಬಗ್ಗೆ ನಿಗಾ ವಹಿಸುತ್ತದೆ. ಆದರೆ ಬಹು ರಾಷ್ಟ್ರೀಯ ಕಂಪೆನಿಗಳಂಥ ಡಯನಾಸಾರ್‌ಗಳೆದುರು ಈ ಚಿಕ್ಕ ಮೊಲ ಎಷ್ಟು ತಾನೆ ಹೆಣಗೀತು?

ನೋಟ

ಬೌದ್ಧಿಕ ಸಂಪತ್ತಿನ ಹಕ್ಕು ಮತ್ತು ಬಹುರಾಷ್ಟ್ರೀಯ ತೋಳಗಳು



ಡಾ. ಜಿ. ಭಾಸ್ಕರಮಯ್ಯ

ಪ್ರಾಕೃತಿಕ ಮತ್ತು ಮಾನವ ನಿರ್ಮಿತವೆಂಬುದಾಗಿ ಭೌತಿಕ ಸಂಪತ್ತು ಎರಡು ಬಗೆಯದ್ದಾಗಿದ್ದು ಇದು ದೃಶ್ಯವಾಗಿರುತ್ತದೆ. ಆದರೆ, ಬೌದ್ಧಿಕ ಸಂಪತ್ತು ಮಾನವ ನಿರ್ಮಿತವಾದರೂ ಅದು ಅದೃಶ್ಯವಾದುದು. ಇಂದು ಜಗತ್ತಿನಲ್ಲಿ ಬೌದ್ಧಿಕ ಸಂಪತ್ತಿನ ಮಹತ್ವ ಅಗಾಧವಾದುದು. ಬೌದ್ಧಿಕ ಸಂಪತ್ತನ್ನು ಅಂತರರಾಷ್ಟ್ರೀಯ ಸ್ತರದಲ್ಲಿ ವ್ಯಾಖ್ಯಾನಿಸಲಾಗಿದೆ. 1967ರ ವಿಪೊ (WIPO: World Intellectual Property Organisation) ಬೌದ್ಧಿಕ ಸಂಪತ್ತನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿದೆ.

"ಬೌದ್ಧಿಕ ಸಂಪತ್ತು ಸಾಹಿತ್ಯಿಕ, ಕಲಾತ್ಮಕ ಅಥವಾ ವೈಜ್ಞಾನಿಕ ಕಾರ್ಯಗಳಿಗೆ ಸಂಬಂಧಿಸಿರಬಹುದು. ಅದು ಕಲಾವಿದರಿಂದ ಪ್ರಸ್ತುತಪಡಿಸಲ್ಪಟ್ಟಿರಬಹುದು, ಪ್ರಚಾರಕ್ಕೆ ತಂದವುಗಳಾಗಿರಬಹುದು. ಬೇರೆ ಬೇರೆ ಕ್ಷೇತ್ರಗಳಲ್ಲಿ ಮಾಡಲ್ಪಟ್ಟ ವೈಜ್ಞಾನಿಕ ಶೋಧನೆ, ಆವಿಷ್ಕಾರ, ಕೈಗಾರಿಕಾ ಡಿಸೈನ್, ಟ್ರೇಡ್‌ಮಾರ್ಕ್, ಸೇವಾಚಿಹ್ನೆ, ವ್ಯಾವಸಾಯಿಕ ಹೆಸರು, ಪ್ರತೀಕ ಎಲ್ಲವೂ ಬೌದ್ಧಿಕ ಸಂಪತ್ತಿನ ವಲಯದಲ್ಲಿ ಬರುತ್ತವೆ".

ಪೇಟೆಂಟ್ ವಾಸ್ತವದಲ್ಲಿ ಸಂಶೋಧನೆ ಅಥವಾ ಆತನ ಪ್ರತಿನಿಧಿಗೆ ವ್ಯವಸ್ಥೆಯಿಂದ ಕೊಡಲಾಗುವ ಏಕಾಧಿಕಾರ. ಆದರೆ, ಅದನ್ನು ಪಡೆಯುವುದು ಅತ್ಯಂತ ಸುದೀರ್ಘವಾದ, ಖರ್ಚಿನ ಹಾಗೂ ಜಟಿಲವಾದ ಪ್ರಕ್ರಿಯೆಯಾಗಿದೆ. ಪೇಟೆಂಟ್ ವ್ಯವಸ್ಥೆಯ ಮೂಲ ಉದ್ದೇಶವು ಸಂಶೋಧಕರ ಹಿತಗಳನ್ನು ರಕ್ಷಿಸುವುದಾಗಿದೆ. ಆದರೆ ಇಂದು ಅದರ ದುರ್ಲಾಭ ಮಾತ್ರ ಗಣನೀಯವಾಗಿ ಹೆಚ್ಚಿದೆ.

2005ರಲ್ಲಿ ಟ್ರಿಪ್ 'Trade related aspects of intellectual property systems-ವ್ಯಾಪಾರ ಸಂಬಂಧೀ ಬೌದ್ಧಿಕ ಆಸ್ತಿಗಳು' ಒಪ್ಪಂದದ ಮೂಲಕ ಜಗತ್ತಿನಲ್ಲಿ ಪೇಟೆಂಟ್ ಬಗೆಗೆ ಒಂದು ಬಗೆಯ ಏಕರೂಪತೆಯನ್ನು ತರಲು ಪ್ರಯತ್ನಸಲಾಯಿತು. ಆದರೆ, ಇಡೀ ವಿಶ್ವದಲ್ಲಿ ಯಾವುದೇ ಒಂದು ವಿಷಯದಲ್ಲಿ ಏಕರೂಪತೆಯೆಂಬುದಿಲ್ಲ.

ವನಸ್ಪತಿಗಳ ವೈವಿಧ್ಯ ಮತ್ತು ರೈತರ ಹಕ್ಕುಗಳ ಬಗ್ಗೆ ಸ್ಪಷ್ಟವಾದ ಅಂತರರಾಷ್ಟ್ರೀಯ ಕಾನೂನುಗಳಿವೆ. ಆದರೆ, ಈ ಕಾನೂನುಗಳು ಅನ್ವಯವಾಗುವುದು ಮಾತ್ರ ಅಭಿವೃದ್ಧಿಶೀಲ ಹಾಗೂ ಹಿಂದುಳಿದ ದೇಶಗಳಿಗೆ, ಅಭಿವೃದ್ಧಿ ಹೊಂದಿದ ದೇಶಗಳಿಗೆ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಇದು ಅನ್ವಯವಾಗುವುದಿಲ್ಲವೆ? ಎಂಬ ಪ್ರಶ್ನೆ ಮಾತ್ರ ಇಂದು ನಮ್ಮ ಬಳಿ ಉಳಿದಿದೆ. ಒಂದು ಅಂದಾಜಿನ ಪ್ರಕಾರ 30 ಲಕ್ಷ ಪೇಟೆಂಟ್‌ಗಳ ಪೈಕಿ 30,000 ಪೇಟೆಂಟ್‌ಗಳು ಕೂಡಾ ಮೂರನೆ ಜಗತ್ತಿನ ದೇಶಗಳ ಬಳಿಯಲ್ಲಿಲ್ಲ. ವನಸ್ಪತಿಶಾಸ್ತ್ರ, ಕೃಷಿವಿಜ್ಞಾನ, ಆರೋಗ್ಯಕ್ಕೆ ಸಂಬಂಧಿಸಿದ ಕ್ಷೇತ್ರಗಳ ಸಹಸ್ರಾರು ಪಾರಂಪರಿಕ ಬೌದ್ಧಿಕ ಸಂಪತ್ತಿನ ಅಧಿಕಾರ ಇಂದು ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗಿದೆ.

ಇಂದು ಪಾರಂಪರಿಕಜ್ಞಾನವು (Traditional Knowledge) ಅತ್ಯಂತ ಅಪಾಯದಲ್ಲಿದೆ. ಜನರಿಗೆ ತಮ್ಮ ಬಳಿ ಎಂತಹ ಅಮೂಲ್ಯ ಸಂಪತ್ತಿದೆ; ಅದನ್ನು ಯಾರು ಹೊಂಚುಹಾಕಿ ಕದ್ದೊಯ್ಯುತ್ತಿದ್ದಾರೆ ಎಂಬುದರ ಕಲ್ಪನೆ ಇಲ್ಲ. ಈ ಕುರಿತು ಅವರಲ್ಲಿ ಜಾಗೃತಿಯೂ ಇಲ್ಲ. ಅವರು ಸಂಘಟಿತರಾಗಿಯೂ ಇಲ್ಲ. ವಸ್ತುಸ್ಥಿತಿಯಲ್ಲಿ ಈ ಜ್ಞಾನ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಶೀಲ ದೇಶಗಳಲ್ಲಿವೆ. ಇಂದು ಕೇವಲ ವನಸ್ಪತಿಗಳು ಮಾತ್ರವಲ್ಲದೆ ಅವುಗಳೊಂದಿಗೆ ವಾಸಿಸುತ್ತಿರುವ ಆದಿವಾಸಿಗಳೂ ನಾಮಾವಶೇಷವಾಗುತ್ತಿದ್ದಾರೆ. ಬ್ರೆಜಿಲ್‌ನಂತಹ ದೇಶದಲ್ಲಿ 85 ಆದಿವಾಸಿ ಜಾತಿಗಳು ಸಂಪೂರ್ಣವಾಗಿ ನಾಶಹೊಂದಿವೆ. ಅಮೆಜಾನ್ ಕ್ಷೇತ್ರದ ಕತೆಯೂ ಅದುವೆ. ಒಂದು ಕಡೆ ಈ ಬಗೆಯಲ್ಲಿ ಪರಂಪರಾಗತ ಜ್ಞಾನ ನಾಶಹೊಂದಿದರೆ, ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪೆನಿಗಳು ಅಳಿದುಳಿದ ಈ ಬಗೆಯ ಜ್ಞಾನವನ್ನು ತಮ್ಮ ಹಕ್ಕಾಗಿ ಪಡೆಯುತ್ತಿವೆ.



ನಮ್ಮ ಕಣ್ಣೆದುರಿಗೇ ಅರಷಿಣ ಮತ್ತು ಬೇವಿನ ಹಕ್ಕನ್ನು ಬಹುರಾಷ್ಟ್ರೀಯ ಕಂಪೆನಿಗಳು ವಶಪಡಿಸಿಕೊಂಡವು. ಆದರೆ ಸುದೀರ್ಘ ಹೋರಾಟದನಂತರ 1997ರಲ್ಲಿ ಅರಿಷಿಣದ ಮೇಲಿನ ಹಕ್ಕು ರದ್ದಾದರೆ 2000ದಲ್ಲಿ ಬೇವಿನ ಮೇಲಿನ ಪೇಟೆಂಟ್ ಹಕ್ಕು ರದ್ದಾಯಿತು. ಆದರೆ, ಸಹಸ್ರಾರು ಇನ್ನಿತರ ಪೇಟೆಂಟ್‌ಗಳನ್ನು ರದ್ದುಗೊಳಿಸಿಕೊಳ್ಳುವಲ್ಲಿ ನಾವು ಇಂದೂ ಸಫಲರಾಗಿಲ್ಲ. ಇದು ಭಾರತಕ್ಕೆ ಮಾತ್ರ ಸೀಮಿತವಲ್ಲ. ಮೂರನೆಯ ಜಗತ್ತಿನ ಎಲ್ಲ ದೇಶಗಳ ಪರಿಸ್ಥಿತಿಯೂ ಇದೇ ಬಗೆಯದ್ದಾಗಿದೆ. ಉದಾ: ಫಿಜಿಯ 'ಕಾವಾ' ಸಾವಿರಾರು ವರ್ಷಗಳಿಂದ ಬಳಸಲಾಗುತ್ತಿದ್ದ ಒಂದು ವನಸ್ಪತಿ. ಅದು ಕೂದಲು ಉದುರುವುದನ್ನು ತಡೆಯಲು ದಿವ್ಯ ಔಷಧ. ಇಂದು ಪೇಂಟ್ ಕಂಪೆನಿ 'ಎಲ್ ಒರಿಯಲ್' ಅದರ ಮೇಲೆ ಪೇಟೆಂಟ್ ಪಡೆದಿದೆ. ಇದರಿಂದ ಅದು ಬಿಲಿಯಾಂತರ ರೂಪಾಯಿ ಗಳಿಸಿದೆ.

ಅಮೆಜಾನ್ ಕ್ಷೇತ್ರದಲ್ಲಿ ಬೆಳೆಯುವ ಒಂದು ವನಸ್ಪತಿ 'ಕಾಫಿ'. ಅದರ ತೊಗಟೆಯಿಂದ ಸ್ವಾದಿಷ್ಟ ಪೇಯವನ್ನು ತಯಾರಿಸಲಾಗುತ್ತಿತ್ತು. ಅದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ



1987ರಲ್ಲಿ ಅಮೇರಿಕಾದ ನಾಗರಿಕ 'ಲಾರೆನ್ ಮಿಲರ್' ಅದರ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಿ ಕೊಂಡಿದ್ದಾನೆ. ಅಮೆಜಾನ್ ಜನ ಈ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. 1999ರಲ್ಲಿ ಅದು ರದ್ದಾದರೂ ಮನಃ 2001ರಲ್ಲಿ ಮತ್ತೆ ಲಾರೆನ್ ಅದರ ಪೇಟೆಂಟ್ ಪಡೆದ!

ಆಯುರ್ವೇದ ಔಷಧಿಗಳಲ್ಲಿ ಉಪಯೋಗಿಸಲಾಗುವ ಚರ್ಮ ಸಂಬಂಧೀ ಕಾಯಿಲೆಗಳಿಗೆ 'ರಾಮಬಾಣ'ವೆನಿಸಿದ 'ಪಾಯಿಪಾರ್ ನಿಗ್ರಮ್'ನ ಮೇಲೆ ಬ್ರಿಟನ್ ಪೇಟೆಂಟ್ ಹಕ್ಕು ಪಡೆದಿದೆ.

ಆಫ್ರಿಕಾದ ಆದಿವಾಸಗಳು ಬೇಟೆಯಾಡಲು ಹೋಗುವಾಗ 'ಹೂದಿಯಾ' ಎಂಬ ಕ್ಯಾಕ್ಟಸ್ ಜಾತಿಯ ವನಸ್ಪತಿಯನ್ನು ಸೇವಿಸುತ್ತಿದ್ದರು. ಇದರಿಂದ ದೀರ್ಘಕಾಲದ ತನಕ ಅವರಿಗೆ ಹಸಿವೆ, ಬಾಯಾರಿಕೆ ಆಗುತ್ತಿರಲಿಲ್ಲ. ಕಾಲಾಹಾರಿ ಮರುಭೂಮಿಯ ಸುತ್ತಮುತ್ತ ವಾಸಿಸುವ ಆದಿವಾಸಿಗಳಿಗೆ ಅದು ಜೀವನಾಧಾರಾವೇ ಆಗಿತ್ತು. 1995ರಲ್ಲಿ ಆಫ್ರಿಕಾದ 'ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಸಂಸ್ಥೆ' 'ಹೂದಿಯ' ವನಸ್ಪತಿಯಿಂದ ಒಂದು ಔಷಧವನ್ನು ತಯಾರಿಸಿತು. ಅದು ಅತ್ಯಂತ ಪೌಷ್ಟಿಕವಾಗಿದ್ದು ಆಹಾರದ ಬದಲಿಗೆ ಉಪಯೋಗಿಸಬಹುದಾಗಿತ್ತು. ಅಲ್ಲದೆ 'ಬೊಜ್ಜು' ನಿವಾರಣೆಯಲ್ಲಿ ಅದು ಅತ್ಯಂತ ಸಹಕಾರಿಯಾಗಿತ್ತು. 1997ರಲ್ಲಿ ಇದರ ಪೇಟೆಂಟ್ 'ಬ್ರಿಟಿಷ್ ಬಯೊಟಿಕ್ ಕಂಪೆನಿ ಫಾಯಿಟೊಪಾರ್ಮ್' ಕಂಪೆನಿ ಪಡೆಯಿತು. 'ಬೊಜ್ಜು' ಕರಗಿಸುವ ಔಷಧಿಯಾಗಿ ಅದು ಸುಪ್ರಸಿದ್ಧವಾಯಿತು. ಇಂದು ಅದರ ಮಾರಾಟದಿಂದ ಕಂಪೆನಿ ವರ್ಷಕ್ಕೆ 600 ಕೋಟಿಗಿಂತ ಹೆಚ್ಚು ಲಾಭ ಪಡೆಯುತ್ತಿದೆ.

ನಮ್ಮ ದೇಶದ್ದೇ ಒಂದು ಪ್ರತ್ಯೇಕ ಕತೆಯಿದೆ. 1987ರಲ್ಲಿ ಕೇರಳದ ತಿರುವನಂತಮರದಲ್ಲಿರುವ ವೈಜ್ಞಾನಿಕ ಸಂಶೋಧನಾಲಯ 'Tropical Botanic



Gardens and Researc? Institute -TBGRI' ಯ ವಿಜ್ಞಾನಿಗಳು ಕಾಣಿ ಆದಿವಾಸಿಗಳೊಂದಿಗೆ ಕ್ಷೇತ್ರ ಕಾರ್ಯದಲ್ಲಿದ್ದರು. ಆದಿವಾಸಿ ಮಾರ್ಗದರ್ಶಕ ಅತ್ಯಂತ ಚುರುಕಿನಲ್ಲಿದ್ದ. ಆತ ಆಗಾಗ್ಗೆ ಯಾವುದೊ ಎಲೆಯನ್ನು ದಾರಿಯಲ್ಲಿ ಕಿತ್ತು ಅಗಿಯುತ್ತಿದ್ದ. ಆದರೆ, ವಿಜ್ಞಾನಿಗಳು ಸುಸ್ತಾಗಿ ಬಳಲಿ ಬೆಂಡಾಗಿದ್ದರು. ಆದಿವಾಸಿ ಯುವಕ ಎಲೆಯನ್ನು ಜಗಿದು ತಿನ್ನುವುದನ್ನೇ ಗಮನಿಸಿ ಅವನನ್ನು ವಿಚಾರಿಸಿದಾಗ ಆತ ಆ ವನಸ್ಪತಿಯ ರಹಸ್ಯ ತಿಳಿಸಿದ.

ವಿಜ್ಞಾನಿಗಳು ಆ ಎಲೆಯಿಂದ ಒಂದು ಟಾನಿಕ್ ತಯಾರಿಸಿದರು. ಅದು ಶಕ್ತಿ ಮತ್ತು ಚೈತನ್ಯ ಕೊಡುವಲ್ಲಿ ಅತ್ಯುತ್ತಮವಾಗಿತ್ತು. 'TBGRI' ಗೆ ಅದರ ಪೇಟೆಂಟ್ ಲಭಿಸಿತು. ಆದರೆ ಆ ಸಂಸ್ಥೆ ತನ್ನ ಲಾಭದ ಶೇ. 2 ರಷ್ಟನ್ನು ಆದಿವಾಸಿಗಳ ಕಲ್ಯಾಣಕ್ಕೆ ವ್ಯಯಿಸುವ ಕನಿಷ್ಟ ಮಾನವತೆ ತೋರಿಸಿತು. ಆದರೆ ಇಂತಹ ಉದಾಹರಣೆಗಳು ಅತ್ಯಂತ ವಿರಳ.

ಇಂದು ಗಿಡಮೂಲಿಕೆ ಉತ್ಪನ್ನಗಳ ವಾರ್ಷಿಕ ಆದಾಯ 6000 ಕೋಟಿ ಡಾಲರುಗಳು. 2020 ರಷ್ಟಕ್ಕೆ ಇದು 5,00,000 ಕೋಟಿ ಡಾಲರ್‌ಗಳಷ್ಟು ಹೆಚ್ಚುವುದೆಂದು ನಿರೀಕ್ಷಿಸಲಾಗಿದೆ.

ಅಕ್ಕಿ ಮತ್ತು ಪೇಟೆಂಟ್

ಜಗತ್ತಿನ 91 ಶೇ. ಅಕ್ಕಿ ಬೆಳೆಯುವುದು ಏಶಿಯಾದಲ್ಲಿ. ಅಂತಯೇ 92 ಶೇಕಡಾ ಅದು ತಿನ್ನಲಿಕ್ಕೇ ಬೇಕಾಗುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ದೇಶೀಯ ಸಂಶೋಧನೆಗಳನ್ನು, ಪಾರಂಪರಿಕ ಜ್ಞಾನವನ್ನು WTO ಮೂಲಕ ನಡೆಸಲ್ಪಡುವ ಪೇಟೆಂಟ್ ವ್ಯವಸ್ಥೆಯ ಮೂಲಕ ಕದ್ದು ತಮ್ಮದಾಗಿಸಿ ಕೊಳ್ಳುವುದನ್ನು ಒಂದು ವೃತ್ತಿಯನ್ನಾಗಿಸಿಕೊಂಡಿವೆ. ಇದು ಅವರಿಗೆ ಅಸಂಖ್ಯ ಲಾಭ ತರುವ ಉದ್ಯಮ.

ಅಕ್ಕಿಯಂತಹ ಅತ್ಯಮೂಲ್ಯ ವಸ್ತುವನ್ನು 2004ರಲ್ಲಿ ಒಂದು ಅತ್ಯಂತ ವಿಶಾಲಕಾಯ ಸ್ವಿಸ್ ಬಹುರಾಷ್ಟ್ರೀಯ ಕೃಷಿ ವ್ಯವಸಾಯದ ಕಂಪೆನಿ 'ಸಿನಜೆಂಟಾ' ಅಕ್ಕಿಯ ಜೈವಿಕ ವೈಜ್ಞಾನಿಕ ಉತ್ಪತ್ತಿ ಮತ್ತು ಅನುವಂಶೀಯತೆ ತನ್ನದೆಂದು ವಾದಿಸಿ ಹಕ್ಕು ಪಡೆದಿದೆ. ಇಡೀ ಜಗತ್ತಿನ ಒಂದು ಅತಿ ದೊಡ್ಡ ಕೃಷಿ ಉತ್ಪಾದನೆಯ ಹಕ್ಕು ಇಂದು ಒಂದು ಖಾಸಗಿ ಕಂಪೆನಿಯ ಹಿಡಿತದಲ್ಲಿದೆ. ವಿಲಕ್ಷಣ, ವಿಚಿತ್ರವೆಂದರೆ ಮಂಜುಗಡ್ಡೆಗಳಿಂದ ಕವಿದಿರುವ ಪರ್ವತೀಯ ಪ್ರದೇಶದ ಆ ಪೇಟೆಂಟ್ ಪಡೆದ ದೇಶದಲ್ಲಿ ಅಕ್ಕಿಯ ಒಂದು ಕಾಳು ಕೂಡಾ ಬೆಳೆಯುವುದಿಲ್ಲ!.

ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ಇರುವ ವಸ್ತುಗಳ ಮೇಲೆ ಈ ಲಾಭಕೋರ ಕಂಪೆನಿಗಳು ಸರ್ವಸ್ವಾಮ್ಯವನ್ನು ಪಡೆದು ಇಡೀ ಮಾನವ ಜಗತ್ತನ್ನು ಭಿಕಾರಿಗಳನ್ನಾಗಿಸುತ್ತಿವೆ. ಇದು ಜಾಗತೀಕರಣದ ವಿರಾಟ್ ವಿಶ್ವರೂಪ.

ಬಾಸುಮತಿ

ಭಾರತದಲ್ಲಿ ಬಾಸ್‌ಮತಿ ಅಕ್ಕಿಯನ್ನು ಶತಮಾನಗಳಿಂದ ಬೆಳೆಯಲಾಗುತ್ತದೆ. ಲೋಕಗೀತೆ, ಕಾವ್ಯಗಳಲ್ಲಿ ಈ ಸುಗಂಧಭರಿತ ಅನ್ನದ ವರ್ಣನೆ ಬರುತ್ತದೆ. ಬಾಸ್ಮತಿ ಭಾರತದ ರೈತರ ಸಹಸ್ರಾರು ವರ್ಷಗಳ ಸಂಶೋಧನೆ, ಸಂಸ್ಕರಣದಿಂದ ಎಷ್ಟೋ ಜಾತಿಗಳು ಬದುಕಿ ಬಂದಿವೆ. ಇವೆಲ್ಲಾ ಭಾರತೀಯ ರೈತರ ಅತ್ಯುತ್ಕೃಷ್ಟ ಸಂಸ್ಕರಣ ಮತ್ತು ಸಂಸ್ಕಾರದ ಫಲ. ಇಂದು ಭಾರತದಲ್ಲಿ 72 ಬಾಸ್ಮತಿ ಜಾತಿಗಳನ್ನು ಬೆಳೆಯಲಾಗುತ್ತದೆ.

ಪ್ರತಿವರ್ಷ ಭಾರತದಲ್ಲಿ 6 ಲಕ್ಷ 50,000 ಟನ್ ಬಾಸ್ಮತಿ ಉತ್ಪಾದನೆಯಾಗುತ್ತದೆ. ಅಂದರೆ ಭಾರತದ ಧಾನ್ಯ ಉತ್ಪಾದನೆಯ ಶೇ 10 ರಿಂದ 15 ರಷ್ಟು ಭಾರತದ ಬಾಸ್ಮತಿಯ ಮುಖ್ಯ ಖರೀದಿದಾರರು ಪಶ್ಚಿಮ ಏಶಿಯಾದ ದೇಶಗಳು ಶೇ. 65, ಯುರೋಪ್ ಶೇ. 20, ಅಮೇರಿಕಾ ಶೇ. 10 ರಿಂದ ಶೇ.15.

ಪಾಕಿಸ್ತಾನದ ಬಾಸ್ಮತಿಗೆ ಟನ್ನಿಗೆ 700 ಅಮೆರಿಕನ್ ಡಾಲರ್ ಬೆಲೆಯಿದ್ದರೆ ಥಾಯ್‌ಲೇಂಡ್ ಅಕ್ಕಿಗೆ 500 ಡಾಲರ್ ಬೆಲೆಯಿದೆ.

ರೈತರ ಸಂಶೋಧನೆಯ ತಲೆತಲಾಂತರದ ವಿರಾಸತ್ತಿನ ಮೇಲೆ ಪೇಟೆಂಟ್ ಏಕಾಧಿಪತ್ಯ ಸಾಧಿಸುತ್ತದೆ. ಇದನ್ನು ಬಹುರಾಷ್ಟ್ರೀಯ ಕಂಪೆನಿಗಳು ಕದ್ದು ತಮ್ಮದಾಗಿಸಿಕೊಳ್ಳುತ್ತವೆ. ಟೆಕ್ಸಾಸ್‌ನ 'ರೈಸ್ ಟೇಕ್ ಇನ್‌ಕ್ಲೇವ್'ಗೆ ಸೆಪ್ಟೆಂಬರ್ 2, 1997 ರಂದು ಬಾಸ್ಮತಿಯ ಪ್ರಜಾತಿಗಳಿಗೆ ಪೇಟೆಂಟ್ ಹಕ್ಕು ಕೊಡಲಾಯಿತು. ಪೇಟೆಂಟ್ ಸಂಖ್ಯೆ 5663484, ಆ ಕಂಪೆನಿ - ಕಾಸಮತಿ, ಟೆಕ್ಸ್‌ಮತಿ, ಬಾಸ್ಮತಿ ಹೆಸರಿನಲ್ಲಿ ಈ ವರ್ಣಸಂಕರದ ತಳಿಯನ್ನು ಅಭಿವೃದ್ಧಿಪಡಿಸಿ ಮಾರುತ್ತಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇವುಗಳನ್ನು ಹೊಸ ಬಾಸ್ಮತಿಯೆಂದು ಕರೆಯಲಾಗುತ್ತಿತ್ತು. ವಾಸ್ತವದಲ್ಲಿ ಈ ಬಾಸ್ಮತಿ ಭಾರತೀಯ ಗಿಡ್ಡತಳಿ ಮತ್ತು ಇಂಡಿಕಾ ಜಾತಿಯ ಬಾಸ್ಮತಿಯಿಂದ ಅಭಿವೃದ್ಧಿಪಡಿಸಲಾಗಿತ್ತು. ಸಂಕರ ಜಾತಿಯವು 'Hybrid' ಯಾವಾಗಲೂ originalನ ಶಕ್ತಿ ಸಾಮರ್ಥ್ಯವನ್ನು ಪಡೆಯಲಾರವು. ಈ ನಕಲಿ, ಕಳ್ಳತನ ಇಂದು ಬಹುರಾಷ್ಟ್ರೀಯ ಕಂಪೆನಿಗಳಿಂದ ವ್ಯಾಪಕವಾಗಿ ನಡೆಯುತ್ತಿದೆ.

ಇದು 'ಜೈವಿಕ ಸಂಪತ್ತಿ'ನ ಲೂಟಿ. ಇದರಲ್ಲಿ ಅಮೆರಿಕಾ ಮೊದಲಿಗ. ಈ ಅನ್ಯಾಯದಿಂದ

ಪುಟ 14 ಕ್ಕೆ

ಅಳಿದುಹೋಗಿರುವ ಜೀವಿಗಳ ಪುನರಾಗಮನ !



1993 ರಲ್ಲಿ 'ಜುರಾಸಿಕ್ ಪಾರ್ಕ್' ಚಲನಚಿತ್ರ ಜಗತ್ತಿನಾದ್ಯಂತ ಬಿಡುಗಡೆಯಾಗಿ ಅಪಾರ ಜನಪ್ರಿಯತೆ ಗಳಿಸಿತು. ಡೈನೋಸಾರ್‌ಗಳ ರಕ್ತ ಕುಡಿದಿದ್ದ ಸೊಳ್ಳೆಗಳು ಪಳಿಯುಳಿಕೆ ಯೊಂದರಲ್ಲಿ ವಿಜ್ಞಾನಿಗಳಿಗೆ ದೊರೆಯುತ್ತವೆ. ಆದರಿಂದ ಡೈನೋಸಾರ್‌ಗಳ ಡಿಎನ್‌ಎ ಯನ್ನು ಬೇರ್ಪಡಿಸಿ ಬೇರೊಂದು ಜೀವಿಯ ಭ್ರೂಣದಲ್ಲಿ ಬೆಳೆಸಿದಾಗ, ಬೆಳೆದು ದೊಡ್ಡವಾದ ಡೈನೋಸಾರ್‌ಗಳು ಎಲ್ಲೆಡೆಯೂ ದೈತ್ಯ ಹೆಜ್ಜೆಯಿಟ್ಟು ಎಲ್ಲವನ್ನೂ ನಾಶಗೊಳಿಸಲಾರಂಭಿಸುತ್ತವೆ. ಇದಿಷ್ಟು ಆ ಸಿನಿಮಾದ ಎರಡು ಸಾಲಿನ ಸಾರಾಂಶ. ಆ ಚಲನಚಿತ್ರದಲ್ಲಿ ಜಗದ್ವಿಖ್ಯಾತ ನಿರ್ದೇಶಕ ಸ್ಟೀವನ್ ಸ್ಪೀಲ್‌ಬರ್ಗ್ ತೆರೆಯ ಮೇಲೆ ಸೃಷ್ಟಿಸಿದಂತೆ ದೈತ್ಯ ಡೈನೋಸಾರ್‌ಗಳನ್ನು ಮತ್ತೆ ಭೂಮಿಯ ಮೇಲೂ ಮೂಡಿಸಬಹುದೇನೋ ಎಂಬ ಕುತೂಹಲಕ್ಕೆ ಈಗ ಮತ್ತೆ ರೆಕ್ಕೆ ಪುಕ್ಕ ಬಂದಿದೆ. ಏಕೆಂದರೆ, ನೂರಾರು ವರ್ಷಗಳ ಹಿಂದೆ ಬದುಕಿದ್ದು ಇದೀಗ ಅಳಿದು ಹೋಗಿರುವ 'ಥೈಲಸೀನ್' ಎಂಬ ಹೆಸರಿನ ತಾಸ್ಮೇನಿಯಾದ ಹುಲಿಯನ್ನು ಮತ್ತೆ ಜೀವಂತ ಪಡಿಮೂಡಿಸುವಲ್ಲಿ ಆಸ್ಟ್ರೇಲಿಯಾದ ವಿಜ್ಞಾನಿಗಳು ಇತ್ತೀಚೆಗಷ್ಟೆ ಯಶಸ್ವಿಯಾಗಿದ್ದಾರೆ. ಆದರೆ ವಿಜ್ಞಾನಿಗಳು ಮತ್ತೆ



ಕರೆತಂದಿರುವ ಅಳಿದುಹೋಗಿದ್ದ ಈ ಹುಲಿರಾಯನಿಗೂ ವಿವಿಧ ಧರ್ಮಗಳು ಪ್ರತಿಪಾದಿಸುವ 'ಪುನರ್‌ಜನ್ಮ'ದ ಅವೈಜ್ಞಾನಿಕತೆಗೂ ಏನೇನೂ ಸಂಬಂಧವಿಲ್ಲವಷ್ಟೆ.

ಸುಮಾರು ನೂರು ವರ್ಷಗಳ ಹಿಂದೆ ಬೆನ್ನ ಮೇಲೆ ಕಪ್ಪು ಪಟ್ಟೆ ಹೊಂದಿದ್ದ ಈ ಥೈಲಸೀನ್ ಹುಲಿಗಳ ತಳಿ ಅಳಿದು ಕಣ್ಮರೆಯಾಗಿದ್ದವು. ಅಂತಹ ಹುಲಿಯನ್ನು ಕಡೇ ಬಾರಿ ಕಂಡಿದ್ದಾದರೂ 1936ರಲ್ಲಿ, ಅದೂ ಒಂದು ಪ್ರಾಣಿಸಂಗ್ರಹಾಲಯದಲ್ಲಿ ಅದು ಮರಣಹೊಂದಿತ್ತು. 1900ರ ದಶಕದಲ್ಲಿ ವಿಪರೀತ ಬೇಟೆಯಿಂದಾಗಿ ಈ ತರಹದ ಹುಲಿ ಸಂತತಿ ಅಳಿದುಹೋಗಿತ್ತು. ಹುಲಿಯ ಪಳಿಯುಳಿಕೆಗಳನ್ನು ಮಧ್ಯಸಾರದಲ್ಲಿ ನೆನೆಸಿಟ್ಟಿದ್ದು ವಿಕ್ಟೋರಿಯಾ ಮ್ಯುಸಿಯಂನಲ್ಲಿ ಸಂರಕ್ಷಿಸಲಾಗಿತ್ತು. ಹೀಗೆ ಸಂರಕ್ಷಿಸಿದ್ದ ಹುಲಿಯ ಭಾಗಗಳಿಂದ ಅದರ ಡಿಎನ್‌ಎ (ವಂಶವಾಹಿನಿಯನ್ನು ಹೊಂದಿರುವ ಡಿ ಆಕ್ಸಿ ರೈಬೋ ನ್ಯೂಕ್ಲಿಯಿಕ್ ಆಸಿಡ್) ಯನ್ನು ಬೇರ್ಪಡಿಸಿ ಅದನ್ನು ಇಲಿಯ ಭ್ರೂಣದಲ್ಲಿ ಯಶಸ್ವಿಯಾಗಿ ಬೆಳೆಸಲಾಯಿತು. ಪ್ರತಿಯೊಂದು ಜೀವಿಗಳ ಜೀವಕೋಶಗಳ ನಿರ್ಮಾಣದಲ್ಲಿ ಅಗತ್ಯವಿರುವ ಜೈವಿಕ ಸಂಕೇತಗಳನ್ನು ಡಿಎನ್‌ಎ ಹೊಂದಿವೆ.

ಇದರಿಂದ ವಿಜ್ಞಾನಿಗಳು ಉತ್ತೇಜಿತರಾಗಿದ್ದರೂ ಅಳಿದುಹೋಗಿರುವ ಡೈನೋಸಾರ್‌ಗಳಂತಹ ಜೀವಿಗಳನ್ನು ಸೃಷ್ಟಿಸಲು ನಮ್ಮ ವಿಜ್ಞಾನ ಇನ್ನೂ ಬಹಳ ದೂರ ಕ್ರಮಿಸಬೇಕಿದೆಯೆಂದು ಹೇಳುತ್ತಾರೆ. ಆದರೂ ಇದರ ಯಶಸ್ಸಿನಿಂದಾಗಿ, ಈ ಯೋಜನೆಯಲ್ಲಿ ಬಳಸಿರುವ ವಿಧಾನವು ಮುಂದೊಮ್ಮೆ ಮಾನವನ ಪೂರ್ವಜರಾದ ನಿಯಾಂಡ್ರತಾಲ್ ಮಾನವ ಅಥವಾ ಇತರೆ ಅಳಿದು ಹೋಗಿರುವ ಜೀವಿಗಳನ್ನು ಪುನರ್‌ಸೃಷ್ಟಿಸಲು ಮಹತ್ತರ ಅನುಭವವನ್ನು ಒದಗಿಸಿದೆ. ಅಲ್ಲದೆ, ಇದರಿಂದ ಮಾನವನಿಗೆ ಅತ್ಯಗತ್ಯವಾದ ರೋಗ-ನಿರೋಧಕ



ಔಷಧಿಗಳನ್ನು ಆವಿಷ್ಕರಿಸುವ ಮತ್ತು ಅಳಿದುಹೋಗಿರುವ ಜೀವಿಗಳ ಜೀವಶಾಸ್ತ್ರದ ಕುರಿತು ಹೆಚ್ಚಿನ ಅಧ್ಯಯನ ನಡೆಸಲು ನೆರವಾಗಲಿದೆ.

ಲಿಂಗಾಯತರ ಮತ ಹಿಂದುತ್ವಕ್ಕಲ್ಲ...

ಪುಟ 5 ರಿಂದ

ಹೋರಾಡುತ್ತಾರೆ.

ಹಿಂದುತ್ವಕ್ಕೆ ಸೋಲು : ದಕ್ಷಿಣ ಭಾರತದಲ್ಲಿ ಫ್ಯಾಸಿಸ್ಟ್ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾಗಿರುವುದು ದೇಶದ ಜನಪರ ಶಕ್ತಿಗಳಿಗೆ ಸಹಜವಾಗಿ ಕಳವಳವನ್ನು ಉಂಟುಮಾಡಿದೆ. ಆದರೆ ಕರ್ನಾಟಕದ ಜನಾದೇಶವನ್ನು ಸರಿಯಾಗಿ ಪರಿಶೀಲಿಸಿದಾಗ ರಾಜ್ಯದ ಜನತೆಯ ತೀರ್ಪು ಹಿಂದುತ್ವದ ವಿರುದ್ಧವಾಗಿದೆ ಎಂದು ಸ್ಪಷ್ಟವಾಗುತ್ತದೆ.

ಒಟ್ಟು ಮತ ಚಲಾಯಿಸಿದವರ ಪೈಕಿ ಬಿಜೆಪಿ ಪರ ಮತ ಚಲಾಯಿಸಿದವರು ಕೇವಲ ಶೇ.34 ಮಾತ್ರ. ಇನ್ನುಳಿದ ಶೇ.66 ಮತದಾರರು ಬಿಜೆಪಿ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ. ಇದರಿಂದಾಗಿ ಈಗಲೂ ಕರ್ನಾಟಕದ ಬಹುಸಂಖ್ಯಾತ ಜನತೆ ಬಿಜೆಪಿಯನ್ನು ಆದರೆ ಹಿಂದುತ್ವವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂಬುದು ಸಾಬೀತಾಗಿದೆ.

ಅದಕ್ಕಿಂತಲೂ ಮುಖ್ಯವಾಗಿ ಗಮನಿಸಬೇಕಾದ ಇನ್ನೊಂದು ಬೆಳವಣಿಗೆ ಇದೆ. ಲಿಂಗಾಯತರ ಪ್ರಾಬಲ್ಯ ಇಲ್ಲದ ಕರಾವಳಿ ಜಿಲ್ಲೆಗಳಲ್ಲಿ ಬಿಜೆಪಿಯ ಬಣ್ಣ ಬಯಲಾಗಿದೆ. ಕರಾವಳಿ ಪ್ರದೇಶ ಬಿಜೆಪಿಯ ಪ್ರಯೋಗಶಾಲೆಯಾಗಿತ್ತು. ಇಲ್ಲಿ ಈ ಅವಧಿಯಲ್ಲಿ ನಡೆದ ಕೊಲೆಗಳು, ಗಲಭೆಗಳು ಬೇರೆ ಎಲ್ಲಿಯೂ ನಡೆದಿರಲಿಲ್ಲ, ಇಲ್ಲಿ ಹಿಂದುತ್ವ ಶಕ್ತಿಗಳು ಗಲಭೆಗಳನ್ನು ಹುಟ್ಟುಹಾಕುವ ಮೂಲಕ ತಮ್ಮ ನೆಲೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಿದ್ದವು. ಆದರೆ ಕರಾವಳಿ ಜಿಲ್ಲೆಗಳಲ್ಲಿ ಈ ಸಲ ಬಿಜೆಪಿ ಮುಗ್ಗರಿಸಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅದು 3 ಸ್ಥಾನಗಳನ್ನು ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ಅದು 2 ಸ್ಥಾನಗಳನ್ನು ಕಳೆದುಕೊಂಡಿದೆ. ಈ ಸ್ಥಾನಗಳನ್ನು ಬಿಜೆಪಿಗೆ ಉಳಿಸಿಕೊಳ್ಳಲು ಸಾಧ್ಯವಾಗಿದ್ದರೆ ಸರಳ ಬಹುಮತಕ್ಕೆ ಧಕ್ಕೆಯಾಗುತ್ತಿರಲಿಲ್ಲ. ಸ್ವತಂತ್ರ ಅಭ್ಯರ್ಥಿಗಳಿಗೆ ತಲಾ 50 ಕೋಟಿ ರೂ ಲಂಚ ಮತ್ತು ಮಂತ್ರಿ ಪದವಿ ಕೊಟ್ಟು ಖರೀದಿ ಮಾಡುವ ಅಗತ್ಯವಿರುತ್ತಿರಲಿಲ್ಲ.

ಕರಾವಳಿ ಜಿಲ್ಲೆಗಳ ಜನ ಎಚ್ಚೆತ್ತುಕೊಳ್ಳುತ್ತಿದ್ದಾರೆ. ಸಂಘ ಪರಿವಾರದ ಪುಂಡರ ಹಾವಳಿಯಿಂದ ಅವರು ಬೇಸತ್ತಿದ್ದಾರೆ. ನೆಮ್ಮದಿಯ ದಿನಗಳಿಗಾಗಿ ಹಾತೊರೆಯುತ್ತಿದ್ದಾರೆ. ಚಿತ್ತರಂಜನ್ ಹತ್ಯೆಯಾದ ಉತ್ತರಕನ್ನಡ ಜಿಲ್ಲೆಯ ಭಟ್ಕಳ ಕ್ಷೇತ್ರದಲ್ಲಿ ಬಿಜೆಪಿಗೆ ಹೀನಾಯ ಸೋಲಾಗಿದೆ. ಕರ್ನಾಟಕದ ಮೋದಿ ಎಂದೇ ಬಿಂಬಿಸಲ್ಪಟ್ಟಿರುವ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಕ್ಷೇತ್ರದ ನಾಗರಾಜಶೆಟ್ಟಿ ಸೋತಿದ್ದಾರೆ. ಹಿಂದುತ್ವದ ಇನ್ನೊಬ್ಬ ಉಗ್ರ ಪ್ರತಿಪಾದಕ ಕಾರ್ಕಳದ ಸುನಿಲ್‌ಕುಮಾರ್ ಕೂಡ ಸೋತು ಸೊರಗಿದ್ದಾರೆ. ಚಿಕ್ಕಮಗಳೂರು ಕ್ಷೇತ್ರದ ಸಿ.ಟಿ.ರವಿ ಸೋಲಬೇಕಾಗಿತ್ತು. ಆದರೆ ಕ್ಷೇತ್ರ ಮರುವಿಂಗಡಣೆಯಿಂದಾಗಿ ಅಧಿಕವಾಗಿ ಸೇರ್ಪಡೆಯಾದ ಲಿಂಗಾಯತ ಮತಗಳು ಸಿ.ಟಿ.ರವಿಯನ್ನು ಗೆಲ್ಲಿಸಿದವು. ಹೀಗೆ ಬಿಜೆಪಿ ತನ್ನ ಹಿಂದುತ್ವದ ಪ್ರಯೋಗಶಾಲೆಗಳನ್ನು ನಡೆಸುತ್ತಿದ್ದ ಕ್ಷೇತ್ರಗಳಲ್ಲಿ ಹಿನ್ನಡೆ ಕಂಡಿರುವುದು ನಿರ್ಲಕ್ಷಿಸುವ ವಿಷಯವಲ್ಲ. ಕೇವಲ ಲಿಂಗಾಯತರ ಪ್ರಾಬಲ್ಯವಿರುವ ನೂರಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಲಿಂಗಾಯತರು ಬಿಜೆಪಿಯನ್ನು ಗೆಲ್ಲಿಸಿದ್ದಾರೆ.

ಲಿಂಗಾಯತರು ಹಿಂದುತ್ವ ಸಿದ್ಧಾಂತಕ್ಕಾಗಿ ಬಿಜೆಪಿಗೆ ಮತ ಹಾಕಿದವರಲ್ಲ. ಅವರ ಜಾತಿಗೆ ಸೇರಿದವರೊಬ್ಬರಿಗೆ ಕೈತಪ್ಪಿದ್ದ ಮುಖ್ಯಮಂತ್ರಿ ಸ್ಥಾನವನ್ನು ದೊರಕಿಸಿಕೊಟ್ಟು ಸಂತೃಪ್ತರಾಗುವ ಒಂದು ತಕ್ಷಣದ ಉದ್ದೇಶವೇ ಅವರನ್ನು ಮರಳು ಮಾಡಿದೆ. ಈ ಆವೇಶ ಹೆಚ್ಚು ಕಾಲ ಉಳಿಯದು. ಇದೊಂದೇ ವಿಷಯ ಅವರನ್ನು ಬಿಜೆಪಿಯಲ್ಲಿ ಹಿಡಿದಿಟ್ಟುಕೊಳ್ಳಲಾರದು. ಹಿಂದೊಮ್ಮೆ ಜಾತಿ ಆಧಾರದಲ್ಲಿ ಬಂಗಾರಪ್ಪ ಅವರನ್ನು ಬೆಂಬಲಿಸುತ್ತಿದ್ದವರು ಇಂದು ಅವರ ಜೊತೆಯಲ್ಲಿ ಉಳಿದಿಲ್ಲ. ರಾಜ್ಯದಲ್ಲಿ ಇಂದು ಹಿಂದುತ್ವವಾದಿ ಪಕ್ಷವನ್ನು ಲಿಂಗಾಯತರು ಬೆಂಬಲಿಸಿದ್ದು ಅದರ ಹಿಂದುತ್ವವಾದಿ ಕಾರಣಕ್ಕಾಗಿ ಅಲ್ಲ ಎನ್ನುವುದೇ ಸಮಾಧಾನದ ವಿಷಯವಾಗಿದೆ. ಲಿಂಗಾಯತರು ಹಾಗೆ ನೋಡಿದರೆ, ಹಿಂದುಗಳೇ ಅಲ್ಲ. ಯಡಿಯೂರಪ್ಪನವರ ಒಂದು ಮುಖ ನೋಡಿ ಮತಹಾಕಿದ್ದಾರೆ. ಅದರ ಹಿಂದೆ ಅಡಗಿರುವ ಮೋದಿ ಮುಖದರ್ಶನ ಆದಾಗ ಲಿಂಗಾಯತರು ಸಹ ಭ್ರಮೆಗಳಿಂದ ಹೊರಬರುತ್ತಾರೆ.

ಜಾತಿ ಮುಖಂಡರ ಸ್ವಾರ್ಥ ಬಯಲಾಗಿದೆ : ಯಡಿಯೂರಪ್ಪ ಮತ್ತು ಜಗದೀಶ ಶೆಟ್ಟರ್ ಒಂದೇ ಜಾತಿಗೆ ಸೇರಿದವರು. ಆದರೆ ಬೇರೆ ಬೇರೆ ಒಳಪಂಗಡಕ್ಕೆ ಸೇರಿದವರು. ಬಿಜೆಪಿಯ ಈ ಸಲದ ಗೆಲುವಿಗೆ ಲಿಂಗಾಯತರ ಎಲ್ಲ ಒಳಪಂಗಡಗಳ ಒಟ್ಟಾರೆ ಬೆಂಬಲ ವ್ಯಕ್ತವಾಗಿದ್ದರೂ ಈ ಇಬ್ಬರು ಜಾತಿ ನಾಯಕರ ನಡುವೆ ಸ್ವಾರ್ಥದ ಸಮರ ಆರಂಭವಾಗಿದೆ. ಯಡಿಯೂರಪ್ಪ ಎಲ್ಲಾ ಲಿಂಗಾಯತರಿಗೆ ತಾನೊಬ್ಬನೇ ನಾಯಕನಾಗಿರಬೇಕು ಎನ್ನುತ್ತಿದ್ದಾರೆ. ಜಾತಿ ಆಧಾರದ ತನ್ನ ಸ್ಥಾನಕ್ಕೆ ಸ್ಪರ್ಧೆಯೊಡ್ಡುತ್ತಿರುವ ಜಗದೀಶ್ ಶೆಟ್ಟರ್ ಅವರಿಗೆ ಸ್ಪೀಕರ್ ಸ್ಥಾನಕ್ಕೆ ಕಟ್ಟಿಹಾಕಿ ನಯವಾಗಿ ಮೂಲೆಗುಂಪು ಮಾಡಲು ಹೊರಟಿದ್ದಾರೆ. ಅತ್ತ, ಇತ್ತೀಚೆಗೆ ಬಿಜೆಪಿ ಸೇರಿದ ಸಾದರ ಲಿಂಗಾಯತ ಪಂಗಡಕ್ಕೆ ಸೇರಿದ ಬಸವರಾಜ ಬೊಮ್ಮಾಯಿ ಅವರಿಗೆ ಮಂತ್ರಿ ಸ್ಥಾನ ನೀಡಿ ಶೆಟ್ಟರ್ ವಿರುದ್ಧ ಎತ್ತಿಕಟ್ಟಲು ಹೊರಟಿದ್ದಾರೆ. ಜಗದೀಶ್ ಶೆಟ್ಟರ್ ಆದರೂ ತನ್ನ ಜಾತಿಯವರೇ ಮುಖ್ಯಮಂತ್ರಿಯಾಗಿದ್ದಾರೆ ಎನ್ನುವುದರಲ್ಲಿ ಖುಷಿ ಪಡಲು ಸಿದ್ಧರಿಲ್ಲ. ತಾನು ಒಂದು ಪಂಗಡದ ನಾಯಕನೆಂದು ಬಿಂಬಿಸಿಕೊಂಡು ಅದರ ಲಾಭ ಪಡೆಯಲು ಆತುರರಾಗಿದ್ದಾರೆ. ಇಂತಹ ಸ್ವಾರ್ಥಿ ರಾಜಕಾರಣಿಗಳು ಜಾತಿಯನ್ನು ಹೇಗೆ ತಮ್ಮ ಸ್ವಂತ ಲಾಭಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎನ್ನುವುದು ಇವರಿಬ್ಬರ ಜಗಳದಲ್ಲಿ ಎದ್ದು ಕಾಣುತ್ತಿದೆ. ಜಾತಿಯನ್ನು ಮತ ಬ್ಯಾಂಕ್ ಮಾಡುವ ಇಂತಹ ಜಾತಿ ನಾಯಕರನ್ನು ತಿರಸ್ಕರಿಸುವ ಪ್ರಜ್ಞೆಯನ್ನು ಜನತೆ ಬೆಳೆಸಿಕೊಳ್ಳುವಂತಾಗಬೇಕಾಗಿದೆ. ಬಿಜೆಪಿಯನ್ನು ಬೆಂಬಲಿಸಿರುವ ಲಿಂಗಾಯತರು ತಮ್ಮ ಜಾತ್ಯಾತೀತ ಪರಂಪರೆಯನ್ನು ಪುನಃ ಕಂಡುಕೊಳ್ಳಬೇಕಾಗಿದೆ. ಅದರಲ್ಲಿಯೇ ಕರ್ನಾಟಕದ ಹಿತ ಅಡಗಿದೆ. ಬಸವಣ್ಣನವರು ಪ್ರತಿಪಾದಿಸಿದ ಕಾಯಕ ಜೀವಿಗಳ ಸಮತಾ ಸಮಾಜವೇ ಕರ್ನಾಟಕಕ್ಕೆ ಮಾದರಿಯಾಗಬೇಕೇ ಹೊರತು ಕೋಮುದ್ವೇಷವನ್ನು ಬಿತ್ತಿ ಕೋಮುದಳ್ಳುರಿಯನ್ನು ಬೆಳೆಸುವ ಮೋದಿ ಮಾದರಿಯಲ್ಲ.

ಲಿಂಗಾಯತರು ನೀಡಿದ ಮತ ಹಿಂದುತ್ವಕ್ಕೆ ನೀಡಿದ ಮತ ಅಲ್ಲದಿದ್ದರೂ, ಆರ್.ಎಸ್.ಎಸ್. ನಿಯಂತ್ರಿತ ಬಿಜೆಪಿ ಅದನ್ನು ಹಿಂದುತ್ವಕ್ಕೆ ದೊರೆತ ಜನಾದೇಶ ಎಂದು ಬಿಂಬಿಸುವ ಪ್ರಯತ್ನವನ್ನು ಆರಂಭಿಸಿದೆ. ಮುಂಬರುವ ಪಾರ್ಲಿಮೆಂಟ್ ಚುನಾವಣೆಗಳಲ್ಲಿಯೂ ಇದರ ಲಾಭ ಪಡೆಯಲು ಅದು ಲೆಕ್ಕಹಾಕುತ್ತಿದೆ. ಕರ್ನಾಟಕದ ಚುನಾವಣಾ ಫಲಿತಾಂಶದಿಂದ ಉನ್ಮಾದಿತರಾಗಿರುವ ಬಿಜೆಪಿಯ ರಾಷ್ಟ್ರೀಯ ನಾಯಕರು ಪಕ್ಷದ ಹಿಂದುತ್ವ ಅಜೆಂಡಾವನ್ನು ಕೇಂದ್ರ ರಂಗಸ್ಥಳಕ್ಕೆ ತರಲು ಹೊರಟಿದ್ದಾರೆ. ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಅಧ್ಯಕ್ಷ ರಾಜನಾಥಸಿಂಗ್ ಈ ದಿಕ್ಕಿನಲ್ಲಿ ತನ್ನ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಯಡಿಯೂರಪ್ಪನವರಾದರೂ ತನ್ನ ಇನ್ನೊಂದು ಮುಖವನ್ನು ಮರೆಮಾಚಲು ಸಾಕಷ್ಟು ಸರ್ಕಸ್ ನಡೆಸುತ್ತಿದ್ದಾರೆ. ಕೇಸರಿ ಬದಲು ಹಸಿರು ಶಾಲು ಧರಿಸಿಕೊಂಡು ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಮಿಂಚಿದ್ದಾರೆ. ದೆಹಲಿಗೆ ಹೋದಾಗ ಮಹಾತ್ಮಗಾಂಧಿ ಸಮಾಧಿಗೆ ಗೌರವ ಸಲ್ಲಿಸಿ ರಾಷ್ಟ್ರಪಿತನ ಆದರ್ಶಗಳಿಗೆ ತನ್ನ ಬದ್ಧತೆಯನ್ನು ಘೋಷಿಸಿ ಅಚ್ಚರಿಯನ್ನುಂಟುಮಾಡಿದ್ದಾರೆ. ಬಾಯಿಬಿಟ್ಟಾಗಲೆಲ್ಲಾ ಅಭಿವೃದ್ಧಿ ಮಂತ್ರವನ್ನು ಪಠಿಸುತ್ತಿರುತ್ತಾರೆ. ಯಡಿಯೂರಪ್ಪನವರನ್ನು ಹತ್ತಿರದಿಂದ ಬಲ್ಲವರು ಇದೆಲ್ಲವೂ ತಮ್ಮ ವ್ಯಕ್ತಿತ್ವಕ್ಕೆ ಹೊಸ ಉಡಿಗೆ ತೊಡಿಸುವ ನಾಟಕವೆನ್ನುತ್ತಿದ್ದಾರೆ. ಲಿಂಗಾಯತರು ಇಷ್ಟೊಂದು ಅಭಿಮಾನದಿಂದ ಗೆಲ್ಲಿಸಿರುವ ಯಡಿಯೂರಪ್ಪನವರು ಎಂದಾದರೂ ಲಿಂಗಾಯತರು ಗೌರವಿಸುವ ವಿಭೂತಿಯನ್ನು ತಮ್ಮ ಹಣೆಯ ಮೇಲೆ ಧರಿಸಿದ್ದು ಇದೆಯಾ? ಇಲ್ಲ. ಅವರು ಆರ್.ಎಸ್.ಎಸ್. ಸೇರಿದ ದಿನಗಳಲ್ಲೇ ಹಣೆಯ ಮೇಲೆ ವಿಭೂತಿ ಹಚ್ಚಿಕೊಳ್ಳುವುದನ್ನು ಬಿಟ್ಟಿರಬಹುದು. ಈಗ ಅವರ ಹಣೆಯ ಮೇಲೆ ಲಾಲ್ ಕೃಷ್ಣ ಅಡ್ವಾಣಿಯವರ ಮಾದರಿಯಲ್ಲಿ, ಹಿಂದುತ್ವದ ದ್ಯೋತಕವಾದ ಕೇಸರಿ ತಿಲಕ ಶೋಭಿಸುತ್ತಿರುತ್ತದೆ. ಇಂತಹ ನಾಯಕನೊಂದಿಗೆ ರಾಜ್ಯದ ಲಿಂಗಾಯತರು ಎಷ್ಟು ದೂರದವರೆಗೆ ಹೆಜ್ಜೆ ಹಾಕಬಹುದು? ಒಂದು ಪ್ರಗತಿಪರ ಪರಂಪರೆಯ ವಾರಸುದಾರರಾಗಿರುವ ಲಿಂಗಾಯತರು ಸದ್ಯದ ಭ್ರಮಾಲೋಕದಿಂದ ಹೊರಬಂದು ತಾವು ಅಲಂಘಿಸಿಕೊಂಡಿರುವ ಬಿಜೆಪಿಯ ನಿಜ ಸ್ವರೂಪವನ್ನು ಕಾಣಬೇಕಾಗಿದೆ. ಇಲ್ಲದೆ ಹೋದರೆ ತಮ್ಮ ಉದಾತ್ತವಾದ ಪರಂಪರೆಗೆ ತಾವೇ ದ್ರೋಹ ಬಗೆದ ಶಾಶ್ವತ ಅಪಖ್ಯಾತಿಗೆ ಗುರಿಯಾಗುವರು. ○

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH